ದಾರಿದೀಪೋಕ್ತಿ

ನಿಮ್ಮ ಮಾತಿನಲ್ಲಿ ಮೃದುತ್ವ, ಸತ್ಯ ಮತ್ತು ಕರುಣೆಯಿದ್ದರೆ, ನಿಮಗೆ ಯಾವ ಸಮಸ್ಯೆಯೂ ಬರುವುದಿಲ್ಲ. ನಿಮ್ಮನ್ನು ಯಾರೂ ತಪ್ಪು ತಿಳಿಯುವುದಿಲ್ಲ. ಎಲ್ಲರೂ ನಿಮ್ಮ ಸಾಮೀಪ್ಯ ಬಯಸುತ್ತಾರೆ. ಇವು ನಿಮ್ಮ ವ್ಯಕ್ತಿತ್ವಕ್ಕೊಂದು ವಿಶೇಷ ಮೆರುಗನ್ನು ನೀಡುತ್ತವೆ.

ವಕ್ರತುಂಡೋಕ್ತಿ

ಯಾವ ಹೆಂಡತಿಯೂ ಗಂಡನೊಂದಿಗೆ ವಾದ ಮಾಡುವುದಿಲ್ಲ, ಜಗಳ ತೆಗೆಯುವುದಿಲ್ಲ, ಅದರಲ್ಲೂ ಆತ ಪಾತ್ರೆ ತೊಳೆಯುತ್ತಿರುವಾಗ.

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಹೆಣ್ಣು ಮಗುವಿಗೆ ಜನ್ಮ ನೀಡಿದ ದೀಪಿಕಾ

ಬಿ-ಟೌನ್ ಲವ್ ಬರ್ಡ್ಸ್ ಎಂದೇ ಹೆಸರಾಗಿರುವ ಬಾಲಿವುಡ್ ನಟಿ ದೀಪಿಕಾ ಪಡುಕೋಣೆ ಮತ್ತು ರಣವೀರ್ ಸಿಂಗ್ ದಂಪತಿಗೆ ಹೆಣ್ಣು ಮಗು ಜನಿಸಿದೆ.

ಪುಟ ತೆರೆದಂತೆ...

ಮೌನವಾಗಿರಲು ನಿರ್ಧರಿಸಿದ ಯತ್ನಾಳ್

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

ಸಂ.ಪುಟ | 6

ರೈಲು ಸಂಪರ್ಕದ ವಿಷಯದಲ್ಲಿ ಕ್ರಾಂತಿಯಾಗಬೇಕಿದೆ

ಪ್ರಗತಿಪಥ

ಡಾ.ರವೀಂದ್ರ ನಿಡೋಣಿ

ಸಂ.ಗಮ | 7

ಮಾತಂದ್ರೆ ಮಾತು

ದೇಶದ ಹಲವು ಭಾಗಗಳಲ್ಲಿ ಜನರು ಮಾಂಸವನ್ನು ಸೇವಿಸುತ್ತಾರೆ. ಆದರೆ ಗೋವುಗಳ ಬಗ್ಗೆ ಜನ ಸೂಕ್ಷ್ಮ ಭಾವನೆ ಹೊಂದಿದ್ದಾರೆ ಎನ್ನುವುದು ನಾವು ನೆನಪಿಸಿಕೊಳ್ಳಬೇಕು. ಮನುಷ್ಯ ಹತ್ಯೆಯೂ ಇಲ್ಲದ, ಗೋಹತ್ಯೆಯೂ ಇಲ್ಲದ ವಾತಾವರಣ ಸೃಷ್ಟಿ ಮಾಡಲು ನಾವು ಪ್ರಯತ್ನಿಸಬೇಕು.

-ಇಂದ್ರೇಶ್ ಕುಮಾರ್
ಆರ್‌ಎಸ್‌ಎಸ್ ನಾಯಕ

ಮುಖ್ಯಮಂತ್ರಿ ಹುದ್ದೆಗಾಗಿ ಹಲವರಲ್ಲಿ ಗರಿಗೆದರಿದ ಆಸೆ

ಪರೋಕ್ಷ ವಾಕ್ಸಮರ, ಹೈಕಮಾಂಡ್‌ಗೆ ಇರುಸುಮುರುಸು

ಖಾಲಿ ಇಲ್ಲದ ಕುರ್ಚಿಗೆ ಕಾಂಗ್ರೆಸ್‌ನಲ್ಲಿ ಕಚ್ಚಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕದಲ್ಲಿ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲದಿದ್ದರೂ ಈ ಹುದ್ದೆಗೆ ಟವೆಲ್ ಹಾಕುವ ರೇಸ್‌ನಲ್ಲಿ ಗುರುತಿಸಿಕೊಳ್ಳಲು ಹಲವು ನಾಯಕರು ಮುಂದಾಗಿದ್ದಾರೆ. ಈ ಮೂಲಕ ಖಾಲಿ ಇಲ್ಲದ ಮುಖ್ಯಮಂತ್ರಿ ಹುದ್ದೆಗೆ ಹಲವು ನಾಯಕರಲ್ಲಿ ಆಸೆ ಗರಿಗೆದರಿರುವುದು ಸ್ಪಷ್ಟವಾಗಿದೆ.



- ಸಿಎಂ ಬದಲಾವಣೆ ಇಲ್ಲ ಎಂಬುದು ಗೊತ್ತಿದ್ದರೂ 2028ರ ಚುನಾವಣೆ ಗಮನದಲ್ಲಿಟ್ಟುಕೊಂಡು ಹೇಳಿಕೆ ನೀಡುತ್ತಿರುವ ನಾಯಕರು
- ಕೆಲವರಿಗೆ ಆಸೆ ಇದ್ದರೂ ಸಿದ್ದರಾಮಯ್ಯ ಮತ್ತು ಹೈಕಮಾಂಡ್ ಕೆಂಗಣ್ಣಿಗೆ ಗುರಿಯಾಗುವ ಭಯದಿಂದಾಗಿ ಮೌನಕ್ಕೆ ಶರಣು

ಮುಖ್ಯಮಂತ್ರಿ ಹುದ್ದೆಯ ಮೇಲೆ ಕಣ್ಣಿಡುವುದು ಮಾತ್ರವಲ್ಲದೇ, ಪರಸ್ಪರ ಪರೋಕ್ಷ ವಾಕ್ಸಮರ ಶುರುವಾಗಿರುವುದು ಪಕ್ಷದ ಹೈಕಮಾಂಡ್‌ಗೆ ಇರುಸುಮುರುಸು ಉಂಟಾಗಿದೆ. ಅದರಲ್ಲಿಯೂ ಎಂ.ಬಿ.ಪಾಟೀಲ್ ಹಾಗೂ ಶಿವಾನಂದ ಪಾಟೀಲ್ ಅವರ ನಡುವೆ ನೇರಾನೇರ ವಾಕ್ಸಮರ ಇದೀಗ ಇಕ್ಕಟ್ಟಿಗೆ ಸಿಲುಕುವಂತೆ ಮಾಡಿದೆ.

ಮುಡಾ ನಿವೇಶನ ಹಂಚಿಕೆ ವಿಷಯದಲ್ಲಿ ಪ್ರತಿಪಕ್ಷಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳಿದ್ದರೂ ಯಾವುದೇ ಕಾರಣಕ್ಕೂ ರಾಜೀನಾಮೆ ತೆಗೆದುಕೊಳ್ಳುವ ಪ್ರಶ್ನೆಯಿಲ್ಲ ಎಂದು ಹೈಕಮಾಂಡ್ ಸ್ಪಷ್ಟವಾಗಿ ಹೇಳಿದೆ. ಆದರೂ ಪಕ್ಷದ ಕೆಲ ನಾಯಕರು ತಾವೂ ಆಕಾಂಕ್ಷಿ ಎನ್ನುವ ಮಾತುಗಳನ್ನು ಹೇಳುತ್ತಿದ್ದಾರೆ. ಈ ಹೇಳಿಕೆಗಳು ಪಕ್ಷದ ಆಂತರಿಕ ವಲಯದಲ್ಲಿ ಯಾವುದೇ ಪರಿಣಾಮ ಬೀರದಿದ್ದರೂ ಬಹಿರಂಗವಾಗಿ ಹೇಳಿಕೆ ನೀಡುತ್ತಿರುವುದು ಪ್ರತಿಪಕ್ಷಗಳಿಗೆ ಪರೋಕ್ಷ ಸಹಾಯ ಮಾಡುತ್ತಿದೆ ಎಂದು ಪಕ್ಷದ ನಾಯಕರೇ ಹೇಳುತ್ತಿದ್ದಾರೆ.

ಭವಿಷ್ಯದ ಆಲೋಚನೆ: ಮುಖ್ಯಮಂತ್ರಿ ಆಕಾಂಕ್ಷಿ ಎನ್ನುವ ಹೇಳಿಕೆ ನೀಡುತ್ತಿರುವ ಬಹುತೇಕ ನಾಯಕರು ಸಿದ್ದರಾಮಯ್ಯ ಅವರ ಬದಲಿಗೆ ತಮಗೆ ಸಿಎಂ ಹುದ್ದೆ ನೀಡಿ ಎನ್ನುವ ಮನಸ್ಥಿತಿಯಲ್ಲಿ ಹೇಳಿಕೆ ನೀಡುತ್ತಿಲ್ಲ. ಬದಲಿಗೆ 2028ರ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಈ ರೀತಿಯ ಹೇಳಿಕೆ ನೀಡುವ ಮೂಲಕ 'ಸಿಎಂ ಗಾದಿ'ಗೆ ಟವೆಲ್ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ.

ಇನ್ನು ಕೆಲವರಿಗೆ ಮುಖ್ಯಮಂತ್ರಿ ಹುದ್ದೆಯ ಮೇಲೆ ಕಣ್ಣಿದ್ದರೂ ಈ ಕ್ಷಣದಲ್ಲಿ ಆ ಆಸೆ ಹೊರ ಹಾಕಿದರೆ ಸಿದ್ದರಾಮಯ್ಯ ಹಾಗೂ ಹೈಕಮಾಂಡ್ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ ಎನ್ನುವ ಆತಂಕದಿಂದ ಯಾವುದೇ ಪ್ರತಿಕ್ರಿಯೆ ನೀಡದೇ ಮೌನಕ್ಕೆ ಶರಣಾಗಿದ್ದಾರೆ.

ಮತ್ತೊಮ್ಮೆ ಎಚ್ಚರಿಕೆ ರವಾನೆ ಸಾಧ್ಯತೆ

ಮುಡಾ ವಿವಾದ ಶುರುವಾದ ಬಳಿಕ ಸಿಎಂ ಸಿದ್ದರಾಮಯ್ಯ ಅವರು ದೆಹಲಿಗೆ ತೆರಳಿ ಇಡೀ ಪ್ರಕರಣದ ಕುರಿತು ವಿವರಿಸಿದರು. ಈ ವಿವರಣೆ ಬಳಿಕ, ಬಿಜೆಪಿಯವರು ರಾಜಕೀಯ ಕಾರಣಕ್ಕೆ ಮುಡಾ ನಿವೇಶನ ಹಂಚಿಕೆಯನ್ನು ವಿವಾದ ಮಾಡುತ್ತಿದ್ದಾರೆ ಎನ್ನುವುದನ್ನು ಅರಿತು ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಅವರಿಗೆ ಸಂಪೂರ್ಣ ಬೆಂಬಲ ನೀಡಿತ್ತು. ಇದಾದ ಬಳಿಕ ರಾಜ್ಯ ನಾಯಕರಿಗೂ, ಸಿದ್ದರಾಮಯ್ಯ ಅವರ ಬೆನ್ನಿಗೆ ನಿಲ್ಲುವಂತೆ ಸ್ಪಷ್ಟ ಸೂಚನೆ ನೀಡಲಾಗಿತ್ತು. ಇಷ್ಟಾದರೂ, ಹಲವು ನಾಯಕರು ಸಿಎಂ ಹುದ್ದೆಯ ಮೇಲೆ ಕಣ್ಣಿಟ್ಟು ದಿನಕ್ಕೊಂದು ಹೇಳಿಕೆ ನೀಡುತ್ತಿರುವುದು ಪಕ್ಷದ ಹೈಕಮಾಂಡ್‌ಗೆ ಇರಸುಮುರುಸು ಉಂಟು ಮಾಡಿದೆ. ಹೇಳಿಕೆ ಪರ್ವ ಹೀಗೆಯೇ ಮುಂದುವರಿದರೆ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮೂಲಕ ಮತ್ತೊಮ್ಮೆ ಎಚ್ಚರಿಕೆ ರವಾನಿಸುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ಸದ್ಯಕ್ಕೆ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಸಿದ್ದರಾಮಯ್ಯ ಅವರು ಬಲಿಷ್ಠರಾಗಿದ್ದು, ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ. ಸಿದ್ದರಾಮಯ್ಯ ಅವರ ಸರದಿ ಮುಗಿದ ಬಳಿಕ ಮುಂದೊಂದು ದಿನ ನಾನು ಮುಖ್ಯಮಂತ್ರಿಯಾಗುವೆ. ನನಗೆ ಮುಖ್ಯಮಂತ್ರಿಯಾಗುವ ಆಸೆ ಇದೆಯಾದರೂ, ಯಾರದೋ ಸ್ಥಾನ ಕಸಿದುಕೊಂಡು ಆಗುವ ದುರಾಸೆಯಿಲ್ಲ.

– ಎಂ.ಬಿ.ಪಾಟೀಲ್ ಕೈಗಾರಿಕಾ ಸಚಿವ

ಮುಡಾ ಪ್ರಕರಣದಲ್ಲಿ ತನಿಖೆ ನಡೆಯುತ್ತಿದೆ. ಪ್ರತಿಪಕ್ಷದವರಿಗೆ ಟೀಕಿಸುವುದೇ ಕೆಲಸ. ಅದನ್ನೇ ಮಾಡಿಕೊಂಡು ಇರಲಿ. ಆದರೆ ಯಾವುದೇ ಕಾರಣಕ್ಕೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವುದಿಲ್ಲ. ಸದ್ಯ ಕರ್ನಾಟಕದಲ್ಲಿ ಸಿಎಂ ಸ್ಥಾನ ಖಾಲಿ ಇಲ್ಲ. ಸಿದ್ದರಾಮಯ್ಯ ಅವರನ್ನು ಆ ಸ್ಥಾನದಿಂದ ಬದಲಾವಣೆ ಮಾಡುವುದಿಲ್ಲ.

– ಬೈರತಿ ಸುರೇಶ್ ನಗಾರಭಿವೃದ್ಧಿ ಸಚಿವ

ಮುಖ್ಯಮಂತ್ರಿಯಾಗಬೇಕು ಎನ್ನುವ ಆಸೆ ಅನೇಕರಿಗೆ ಇರಬಹುದು. ಆದರೆ ಕರ್ನಾಟಕದಲ್ಲಿ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ. ನಾವೆಲ್ಲೂ ಸಿಎಂ ಸ್ಥಾನವನ್ನು ಕ್ಲೇಮ್ ಮಾಡಿಲ್ಲ. ಇದರಲ್ಲಿ ಗುದ್ದಾಟ, ಕುಸ್ತಿ ಮಾಡುವ ಅವಶ್ಯಕತೆ ಇಲ್ಲ. ಸದ್ಯಕ್ಕೆ ಸಿಎಂ ಕುರ್ಚಿ ಖಾಲಿ ಇಲ್ಲ. 2028ಕ್ಕೆ ಸಿಎಂ ಆಗುವ ತಯಾರಿ ನಮ್ಮದು. ಅಲ್ಲಿಯವರೆಗೆ ಅಭಿಮಾನಿಗಳು ಕಾಯಬೇಕು.

– ಸತೀಶ್ ಜಾರಕಿಹೊಳಿ ಲೋಕೋಪಯೋಗಿ ಸಚಿವ

ಸಿದ್ದರಾಮಯ್ಯ ಅವರು ತಪ್ಪೇ ಮಾಡದಿರುವಾಗ ಅವರನ್ನು ಏಕೆ ಬದಲಾವಣೆ ಮಾಡಬೇಕು? ಸಿಎಂ ಬದಲಾಗುವುದಿಲ್ಲ. ಸಿದ್ದರಾಮಯ್ಯ ಇರುವವರೆಗೂ ಅವರೇ ಸಿಎಂ. ಅವರ ಬಳಿಕ ಎಂ.ಬಿ.ಪಾಟೀಲ್ ಮುಖ್ಯಮಂತ್ರಿಯಾದರೆ ನನ್ನ ಅಭ್ಯಂತರವಿಲ್ಲ. ನಮ್ಮಲ್ಲಿ ಸೀನಿಯರ್ಸ್ ಬಹಳ ಜನರಿದ್ದಾರೆ. ಸೀನಿಯರ್ಸ್ ಬಳಿಕ ಜೂನಿಯರ್ಸ್ ಸರದಿ. ಯಾರೇ ಸಿಎಂ ಆಗಲಿ. ಕಾಂಗ್ರೆಸ್‌ನಲ್ಲಿ ಒಗ್ಗಟ್ಟಾಗಿದ್ದೇವೆ.

– ಶಿವಾನಂದ ಪಾಟೀಲ್ ಜವಳಿ ಖಾತೆ ಸಚಿವ

ಮೊಯಿನ್ ಅಲಿ ನಿವೃತ್ತಿ

ಲಂಡನ್: ಇಂಗ್ಲೆಂಡ್ ತಂಡದ ಆಲ್‌ರೌಂಡರ್ ಮೊಯಿನ್ ಅಲಿ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. ಮೊಯಿನ್ ಅಲಿ ಅವರು ಒಟ್ಟು 298 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದು, ಎಲ್ಲ ಮಾದರಿಗಳಲ್ಲೂ 6,678 ರನ್ ಗಳಿಸಿದ್ದಾರೆ. ಜತೆಗೆ 366 ವಿಕೆಟ್‌ಗಳನ್ನು ಪಡೆದಿದ್ದಾರೆ.

ಮಲಾವಿಗೆ ಭಾರತ ನೆರವು

ದೆಹಲಿ: ತೀವ್ರ ಬರಪೀಡಿತ ಮಲಾವಿಗೆ ಭಾರತವು 1,000 ಮೆಟ್ರಿಕ್ ಟನ್ ಅಕ್ಕಿ ರವಾನಿಸಿದೆ. ಪೂರ್ವ ಆಫ್ರಿಕಾದ ಕೆಲವು ಭಾಗಗಳಲ್ಲಿ ಪ್ರವಾಹ ಮತ್ತು ಮಳೆ ಕೊರತೆ ಎದುರಾಗಿದೆ. ಶುಷ್ಕ ಹವಾಮಾನವು ಮಲಾವಿಯಲ್ಲಿ ಆಹಾರ ಪೂರೈಕೆಯನ್ನು ತೀವ್ರವಾಗಿ ಕುಂಠಿತಗೊಳಿಸಿದೆ.

ರಷ್ಯಾಗೆ ಅಜಿತ್ ದೋವಲ್ ಶೀಘ್ರ ಭೇಟಿ

ದೆಹಲಿ: ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಕೊನೆಗೊಳಿಸಲು, ಅದಕ್ಕಾಗಿ ಶಾಂತಿ ಮಾತುಕತೆ ನಡೆಸಲು ಭಾರತ ಉತ್ಸುಕವಾಗಿದೆ. ರಷ್ಯಾ ಕೋರಿಕೆ ಮೇರೆಗೆ ಭಾರತ ಸರಕಾರ, ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಅಜಿತ್ ಧೋವಲ್ ಅವರನ್ನು ಸದ್ಯದಲ್ಲೇ ರಷ್ಯಾಗೆ ಕಳುಹಿಸಿಕೊಡಲಿದೆ.

'ಟಿವಿಕೆ'ಗೆ ಮಾನ್ಯತೆ

ಚೆನ್ನೈ: ತಮಿಳು ಚಿತ್ರನಟ ದಳಪತಿ ವಿಜಯ್ ಆರಂಭಿಸಿದ ರಾಜಕೀಯ ಪಕ್ಷ 'ತಮಿಳಗ ವೆಟ್ರಿ ಕಳಗಂ'(ಟಿವಿಕೆ)ಗೆ ಕೇಂದ್ರ ಚುನಾವಣಾ ಆಯೋಗ ಮಾನ್ಯತೆ ನೀಡಿದೆ. ಈ ವಿಷಯವನ್ನು ನಟ ಭಾನುವಾರ ಮಾಧ್ಯಮದವರೊಂದಿಗೆ ಹಂಚಿಕೊಂಡು ಸಂಭ್ರಮಿಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಯಾಂತ್ರೀಕೃತ ತಂತ್ರಜ್ಞಾನದ ಬಗ್ಗೆ ಉದ್ಯಮಿಗಳ ಜತೆ ಚರ್ಚಿಸಿದ ಹೆಚ್‌ಡಿಕೆ



ಪ್ಯಾರಾಲಿಂಪಿಕ್ಸ್

219 ಪದಕ ಗೆದ್ದ ಚೀನಾಗೆ ಮೊದಲ ಸ್ಥಾನ

122 ಪದಕ ಗೆದ್ದ ಬ್ರಿಟನ್‌ಗೆ ಎರಡನೇ ಸ್ಥಾನ

104 ಪದಕ ಗೆದ್ದ ಅಮೆರಿಕಕ್ಕೆ ಮೂರನೇ ಸ್ಥಾನ

29 ಪದಕ ಗೆದ್ದು ಅಭಿಯಾನ ಮುಕ್ತಾಯಗೊಳಿಸಿದ ಭಾರತ

ಭಾರತಕ್ಕೆ 18ನೇ ಸ್ಥಾನ



ಪ್ಯಾರಿಸ್: ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ 29 ಪದಕಗಳನ್ನು ಪಡೆಯುವ ಮೂಲಕ ತನ್ನ ಅಭಿಯಾನವನ್ನು ಮುಕ್ತಾಯಗೊಳಿಸಿತು. ಪದಕ ಪಟ್ಟಿಯಲ್ಲಿ ಭಾರತ 18ನೇ ಸ್ಥಾನ ಪಡೆಯಿತು. ಚೀನಾ 219 ಪದಕಗಳನ್ನು ಗೆಲ್ಲುವ ಮೂಲಕ ಮೊದಲ ಸ್ಥಾನ ಪಡೆದರೆ, ಗ್ರೇಟ್ ಬ್ರಿಟನ್ 122, ಅಮೆರಿಕ 104 ಪದಕಗಳನ್ನು ಪಡೆದು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದಿವೆ.

ಭಾರತವು ಏಳು ಚಿನ್ನ, ಒಂಬತ್ತು ಬೆಳ್ಳಿ ಮತ್ತು 13 ಕಂಚಿನ ಪದಕಗಳನ್ನು ಪಡೆದು ಪ್ಯಾರಾಲಿಂಪಿಕ್ಸ್‌ನಲ್ಲಿ ಹೊಸ ದಾಖಲೆ ಬರೆಯಿತು. ಕಳೆದ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ 19 ಪದಕಗಳನ್ನು ಗಳಿಸಿತ್ತು. ಈ ಸಲ 29 ಪದಕಗಳೊಂದಿಗೆ ಉತ್ತಮ ಸಾಧನೆ ಮಾಡಿದೆ.

ಪದಕ ವಿಜೇತ ಭಾರತೀಯರ ಪಟ್ಟಿ

1. ಮಹಿಳೆಯರ 10 ಮೀಟರ್ ಏರ್ ರೈಫಲ್ ಸ್ಟ್ಯಾಂಡಿಂಗ್ ಎಸ್‌ಎಚ್1(ಶೂಟಿಂಗ್): ಅವನಿ ಲೇಖರಾ-ಚಿನ್ನ
2. ಮಹಿಳೆಯರ 10 ಮೀಟರ್ ಏರ್ ರೈಫಲ್ ಸ್ಟ್ಯಾಂಡಿಂಗ್ ಎಸ್‌ಎಚ್1(ಶೂಟಿಂಗ್): ಮೋನಾ ಅಗರ್ವಾಲ್-ಕಂಚು
3. ಮಹಿಳೆಯರ 100 ಮೀಟರ್ ಟಿ35 (ಅಥ್ಲೆಟಿಕ್ಸ್): ಪ್ರೀತಿ ಪಾಲ್-ಕಂಚು
4. ಪುರುಷರ 10 ಮೀ.ಏರ್ ಪಿಸ್ತೂಲ್ ಎಸ್‌ಎಚ್1 (ಶೂಟಿಂಗ್): ಮನೀಶ್ ನರ್ವಾಲ್-ಬೆಳ್ಳಿ
5. ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಎಸ್‌ಎಚ್1(ಶೂಟಿಂಗ್): ರುಬಿನಾ ಫ್ರಾನ್ಸಿಸ್-ಕಂಚು
6. ಮಹಿಳೆಯರ 200 ಮೀಟರ್ ಟಿ35 (ಅಥ್ಲೆಟಿಕ್ಸ್): ಪ್ರೀತಿ ಪಾಲ್-ಕಂಚು
7. ಪುರುಷರ ಹೈಜಂಪ್ ಟಿ47 (ಅಥ್ಲೆಟಿಕ್ಸ್): ನಿಶಾದ್ ಕುಮಾರ್-ಬೆಳ್ಳಿ
8. ಪುರುಷರ ಡಿಸ್ಕಸ್ ಥ್ರೋ ಎಫ್56 (ಅಥ್ಲೆಟಿಕ್ಸ್): ಯೋಗೇಶ್ ಕಥುನಿಯಾ-ಬೆಳ್ಳಿ
9. ಪುರುಷರ ಸಿಂಗಲ್ಸ್ ಎಸ್‌ಎಲ್3 (ಬ್ಯಾಡ್ಮಿಂಟನ್): ನಿತೀಶ್ ಕುಮಾರ್-ಚಿನ್ನ
10. ಮಹಿಳಾ ಸಿಂಗಲ್ಸ್ ಎಸ್ಯು5 (ಬ್ಯಾಡ್ಮಿಂಟನ್): ತುಳಸಿಮತಿ ಮುರುಗೇಶನ್-ಬೆಳ್ಳಿ
11. ಮಹಿಳಾ ಸಿಂಗಲ್ಸ್ ಎಸ್ಯು5 (ಬ್ಯಾಡ್ಮಿಂಟನ್): ಮನೀಷಾ ರಾಮದಾಸ್-ಕಂಚು
12. ಪುರುಷರ ಸಿಂಗಲ್ಸ್ ಎಸ್‌ಎಲ್ 4 (ಬ್ಯಾಡ್ಮಿಂಟನ್): ಸುಹಾಸ್ ಯತಿರಾಜ್-ಬೆಳ್ಳಿ
13. ಬಿಲ್ಲುಗಾರಿಕೆ ಮಿಶ್ರ ತಂಡ: ರಾಕೇಶ್ ಕುಮಾರ್/ಶೀತಲ್ ದೇವಿ-ಕಂಚು
14. ಪುರುಷರ ಜಾವೆಲಿನ್ ಥ್ರೋ ಎಫ್64 (ಅಥ್ಲೆಟಿಕ್ಸ್): ಸುಮಿತ್ ಆಂಟಿಲ್-ಚಿನ್ನ
15. ಮಹಿಳಾ ಸಿಂಗಲ್ಸ್ ಎಸ್‌ಎಚ್ 6 (ಬ್ಯಾಡ್ಮಿಂಟನ್): ನಿತ್ಯಶ್ರೀ ಶಿವನ್-ಕಂಚು
16. ಮಹಿಳೆಯರ 400 ಮೀಟರ್ ಟಿ20 (ಅಥ್ಲೆಟಿಕ್ಸ್): ದೀಪ್ತಿ ಜೀವನ್ಜಿ-ಕಂಚು
17. ಪುರುಷರ ಜಾವೆಲಿನ್ ಎಫ್46 (ಅಥ್ಲೆಟಿಕ್ಸ್): ಸುಂದರ್ ಸಿಂಗ್ ಗುರ್ಜರ-ಕಂಚು
18. ಪುರುಷರ ಜಾವೆಲಿನ್ ಎಫ್46 (ಅಥ್ಲೆಟಿಕ್ಸ್): ಅಜೀತ್ ಸಿಂಗ್-ಬೆಳ್ಳಿ
19. ಪುರುಷರ ಹೈ ಜಂಪ್ ಟಿ63 (ಅಥ್ಲೆಟಿಕ್ಸ್): ಮರಿಯಪ್ಪನ್ ತಂಗವೇಲು-ಕಂಚು
20. ಪುರುಷರ ಹೈ ಜಂಪ್ ಟಿ63 (ಅಥ್ಲೆಟಿಕ್ಸ್): ಶರದ್ ಕುಮಾರ್-ಬೆಳ್ಳಿ
21. ಪುರುಷರ ಶಾಟ್ ಪುಟ್ ಎಫ್46 (ಅಥ್ಲೆಟಿಕ್ಸ್): ಸಚಿನ್ ಖಿಲಾರಿ-ಬೆಳ್ಳಿ
22. ಪುರುಷರ ವೈಯಕ್ತಿಕ ಬಿಲ್ಲುಗಾರಿಕೆ: ಹರ್ವಿಂದರ್ ಸಿಂಗ್-ಚಿನ್ನ
23. ಪುರುಷರ ಕ್ಲಬ್ ಥ್ರೋ 51 (ಅಥ್ಲೆಟಿಕ್ಸ್): ಧರಂಬೀರ್-ಚಿನ್ನ
24. ಪುರುಷರ ಕ್ಲಬ್ ಥ್ರೋ 51(ಅಥ್ಲೆಟಿಕ್ಸ್): ಪ್ರಣವ್ ಸೂರ್ಮಾ-ಬೆಳ್ಳಿ
25. ಪುರುಷರ ಜೂಡೋ 60 ಕೆಜಿ ವಿಭಾಗ: ಕಪಿಲ್ ಪರ್ಮಾರ್-ಕಂಚು
26. ಪುರುಷರ ಹೈ ಜಂಪ್ ಟಿ64 (ಅಥ್ಲೆಟಿಕ್ಸ್): ಪ್ರವೀಣ್ ಕುಮಾರ್-ಚಿನ್ನ
27. ಪುರುಷರ ಶಾಟ್ ಪುಟ್ ಎಫ್57 (ಅಥ್ಲೆಟಿಕ್ಸ್): ಹೊಕಾಟೊ ಸೆಮಾ-ಕಂಚು
28. ಮಹಿಳೆಯರ 200 ಮೀಟರ್ ಟಿ12 (ಅಥ್ಲೆಟಿಕ್ಸ್): ಸಿಮ್ರಾನ್ ಸಿಂಗ್-ಕಂಚು
29. ಪುರುಷರ ಜಾವೆಲಿನ್ ಎಫ್41 (ಅಥ್ಲೆಟಿಕ್ಸ್): ನವದೀಪ್ ಸಿಂಗ್-ಚಿನ್ನ

17 ಆರೋಪಿಗಳ ನ್ಯಾಯಾಂಗ ಬಂಧನ ಅಂತ್ಯ, ಇಂದು ವಿಚಾರಣೆ

ದರ್ಶನ್ ಜಾಮೀನಿಗೆ ಇಂದು ಅರ್ಜಿ?

ಬೆಂಗಳೂರು: 3991 ಪುಟಗಳ ಸುದೀರ್ಘ ಚಾರ್ಜ್‌ಶೀಟ್ ಸಲ್ಲಿಕೆಯ ಬೆನ್ನಲ್ಲೇ ನಟ ದರ್ಶನ್ ಜಾಮೀನು ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ. ಈ ಅರ್ಜಿ ರದ್ದಾಗುವುದು ಖಚಿತವಾಗಿದ್ದರೂ ಕಾನೂನು ಪ್ರಕ್ರಿಯೆ ಆರಂಭಿಸಲು ದರ್ಶನ್ ಪರ ವಕೀಲರು ತೀರ್ಮಾನಿಸಿದ್ದಾರೆ.

ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಬಂಧಿತ ಆರೋಪಿಗಳ ನ್ಯಾಯಾಂಗ ಬಂಧನ ಅವಧಿ ಸೋಮವಾರ ಮುಕ್ತಾಯಗೊಳ್ಳಲಿದೆ. ನಟ ದರ್ಶನ್ ಸೇರಿದಂತೆ ಎಲ್ಲ ಆರೋಪಿಗಳು ಕಾರಾಗೃಹದಿಂದಲೇ ಬೆಂಗಳೂರಿನ 24ನೇ ಎಸಿಎಂಎಂ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ವಿಡಿಯೊ ಕಾನ್ಫರನ್ಸ್ ಮೂಲಕ ತಾವಿದ್ದ ಕಾರಾಗೃಹಗಳಿಂದಲೇ ಸೋಮವಾರ ಹಾಜರಾಗಲಿದ್ದಾರೆ. ಇದೇ ವೇಳೆ ಪೊಲೀಸರು ಸಲ್ಲಿಸಿರುವ ಚಾರ್ಜ್‌ಶೀಟ್ ಎಲ್ಲ 17 ಜನ ಆರೋಪಿಗಳ ಕೈ ಸೇರಲಿದೆ. ಚಾರ್ಜ್‌ಶೀಟ್ ಕೈ ಸೇರಿದ ಬಳಿಕ ದರ್ಶನ್, ಪವಿತ್ರಾ ಗೌಡ ಸೇರಿದಂತೆ ಪ್ರಮುಖ ಆರೋಪಿಗಳು ಸೋಮವಾರ ಜಾಮೀನಿಗೆ ಅರ್ಜಿ ಸಲ್ಲಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಪವಿತ್ರಾ, ಬಿಟ್ಟು ಯಾರೂ ಜಾಮೀನಿಗೆ ಅರ್ಜಿ ಹಾಕಿಲ್ಲ: ಚಿತ್ರದುರ್ಗದ ರೇಣುಕಾಸ್ವಾಮಿ ಅಪಹರಣ ಮತ್ತು ಕೊಲೆಯಾಗಿರುವ ಘಟನೆ ನಡೆದು ಮೂರು ತಿಂಗಳು ಕಳೆದಿವೆ. ಪ್ರಕರಣದಲ್ಲಿ ಭಾಗಿಯಾಗಿದ್ದ ಎಲ್ಲ 17 ಆರೋಪಿಗಳ ಬಂಧನವಾಗಿಯೂ ಮೂರು ತಿಂಗಳು ಕಳೆದಿದೆ. ಈ ನಡುವೆ ಪವಿತ್ರಾ ಗೌಡ ಬಿಟ್ಟು ಬೇರೆ 16 ಆರೋಪಿಗಳು ಒಮ್ಮೆಯೂ ಜಾಮೀನಿಗೆ ಅರ್ಜಿ ಸಲ್ಲಿಸಿಲ್ಲ. ಎ1 ಆರೋಪಿ ಪವಿತ್ರಾಗೌಡ ಜಾಮೀನು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರಾದರೂ ಅವರ ಜಾಮೀನು ಅರ್ಜಿ ವಜಾ ಆಗಿತ್ತು.

ವಕಾಲತ್ತಿಗೆ ಸಹಿ

ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಈಗಾಗಲೇ ಚಾರ್ಜ್ ಶೀಟ್ ಸಲ್ಲಿಸಲಾಗಿದ್ದು, ಇಂದು ನಟ ದರ್ಶನ್ ಜಾಮೀನು ಕೋರಿ ಅರ್ಜಿ ಸಲ್ಲಿಕೆ ಸಾಧ್ಯತೆ ಇದೆ. ಈಗಾಗಲೇ ಪತ್ನಿ ಹಾಗೂ ಸಹೋದರ ದಿನಕರ್ ಜತೆ ದರ್ಶನ್ ಅವರು ಚರ್ಚೆ ನಡೆಸಿದ್ದಾರೆ. ಬಳ್ಳಾರಿ ಜೈಲಿನಲ್ಲಿ ಪತ್ನಿ ಹಾಗೂ ಸಹೋದರ ಜತೆ ಚರ್ಚೆ ಮಾಡಿದ ಬಳಿಕ ದರ್ಶನ್ ವಕಾಲತ್ತಿಗೆ ಸಹಿ ಹಾಕಿದ್ದರು ಎನ್ನಲಾಗಿದೆ.

ಮಂಕಿಪಾಕ್ಸ್ ಪ್ರಕರಣ ಪತ್ತೆ?

ದೆಹಲಿ: ಮಂಕಿಪಾಕ್ಸ್ ಹರಡಿದ್ದ ವಿದೇಶದಿಂದ ಭಾರತಕ್ಕೆ ಇತ್ತೀಚೆಗೆ ಆಗಮಿಸಿದ ಯುವಕನೊಬ್ಬನಿಗೆ ಸೋಂಕು ತಗುಲಿರುವ ಶಂಕೆ ವ್ಯಕ್ತವಾಗಿದೆ. ಆತನನ್ನು ಆಸ್ಪತ್ರೆಯಲ್ಲಿ ಪ್ರತ್ಯೇಕ ಕೊಠಡಿಯಲ್ಲಿ ಇರಿಸಲಾಗಿದೆ. ಆತನ ಆರೋಗ್ಯ ಸದ್ಯ ಸ್ಥಿರವಾಗಿದೆ. ಆತಂಕ ಪಡುವ ಅಗತ್ಯವಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಮಣಿಪುರದಲ್ಲಿ ಹಿಂಸೆ; 6 ಸಾವು

ಇಂಫಾಲ: ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದ್ದು, 6 ಮಂದಿ ಮೃತಪಟ್ಟಿದ್ದಾರೆ. ಜಿರಿಬಾಮ್ ಜಿಲ್ಲೆಯಲ್ಲಿ ಶನಿವಾರ ಬೆಳಗ್ಗೆ ಎರಡು ಗುಂಪುಗಳ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ 6 ಜನರು ಸಾವನ್ನಪ್ಪಿದ್ದಾರೆ. ಹಿಂಸಾಗ್ರಸ್ತ ಜಿಲ್ಲೆಗಳಲ್ಲಿ ಭದ್ರತೆ ಹೆಚ್ಚಿಸಲಾಗಿದೆ.

ಕಾರುಗಳ ನಡುವೆ ಡಿಕ್ಕಿ: 5 ಸಾವು

ತುಮಕೂರು: ಮಧುಗಿರಿ ತಾಲೂಕಿನ ಕಾಟಗೊಂಡನಹಳ್ಳಿ ಬಳಿ ಭಾನುವಾರ ಎರಡು ಕಾರುಗಳು ಮುಖಾಮುಖಿ ಡಿಕ್ಕಿಯಾಗಿ ಐವರು ಸಾವನ್ನಪ್ಪಿದ್ದಾರೆ.

ಜನಾರ್ದನ ರೆಡ್ಡಿ (50) ಇವರ ಪುತ್ರಿ ಸಿಂಧೂ (40) ಮಗ ಟ್ರಯಾಕ್ ದೇವಾ (8) ಮಿಡಿಗೇಶಿ ಹೋಬಳಿಯ ಕಾರೇನಹಳ್ಳಿ ಗ್ರಾಮದವರಾದ ಚಾಲಕ ಸಿದ್ದಗಂಗಪ್ಪ (34) ಹಾಗೂ ನಾಗರಾಜು (30) ಮೃತರು. ತುಮಕೂರಿನಿಂದ ಮಧುಗಿರಿ ಕಡೆಗೆ ತೆರಳುತ್ತಿದ್ದ ಕಾರು, ಪಾವಗಡದಿಂದ ಬೆಂಗಳೂರಿಗೆ ಕಡೆಗೆ ಹೊರಟಿದ್ದ ಮತ್ತೊಂದು ಕಾರು ಮುಖಾಮುಖಿಯಾಗಿವೆ.

ಮಧುಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಗಳೂರಿನಲ್ಲಿ ಶೇ.30 ವಾಯುಮಾಲಿನ್ಯ ಕಡಿಮೆ

21 ನಗರಗಳಲ್ಲಿ ವಾಯುಮಾಲಿನ್ಯ ಇಳಿಕೆ | ದಾವಣಗೆರೆಯಲ್ಲಿ ಶೇ.10-20ರಷ್ಟು ಮಾಲಿನ್ಯ ಕಡಿಮೆ

ದೆಹಲಿ: ದೇಶದ 131 ನಗರಗಳ ಪೈಕಿ 95 ನಗರಗಳಲ್ಲಿ ಗಾಳಿಯ ಗುಣಮಟ್ಟದಲ್ಲಿ ಸುಧಾರಣೆ ಕಂಡು ಬಂದಿದೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ (ಸಿಪಿಸಿಬಿ) ದತ್ತಾಂಶಗಳು ತಿಳಿಸಿವೆ.

ರಾಷ್ಟ್ರೀಯ ಸ್ವಚ್ಛ ಗಾಳಿ ಕಾರ್ಯಕ್ರಮದ (ಎನ್‌ಸಿಎಪಿ) ವ್ಯಾಪ್ತಿಗೆ ಬರುವ ನಗರಗಳ ಅಧ್ಯಯನ ಮಾಡಲಾಗಿದ್ದು, 2017-18ನೇ ಸಾಲಿಗೆ ಹೋಲಿಸಿದರೆ 21 ನಗರಗಳಲ್ಲಿ 10 ಮೈಕ್ರಾನ್‌ಗಿಂತ ಕಡಿಮೆ ಗಾತ್ರದ ಮಾಲಿನ್ಯಕಾರಣ ಕಣಗಳಿಂದಾಗುವ (ಪಿಎಂ10) ವಾಯು ಮಾಲಿನ್ಯ ಶೇ.40ರಷ್ಟು ಕಡಿಮೆಯಾಗಿದೆ. ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಪಿಎಂ10 ವಾಯುಮಾಲಿನ್ಯ ಶೇ.20ರಿಂದ 30ರಷ್ಟು ಮತ್ತು ದಾವಣಗೆರೆಯಲ್ಲಿ ಶೇ.10ರಿಂದ ಶೇ.20ರಷ್ಟು ಕಡಿಮೆಯಾಗಿದೆ.

131 ನಗರಗಳ ಪೈಕಿ 18 ನಗರಗಳು ಮಾತ್ರ ಪಿಎಂ10 ವಾಯುಮಾಲಿನ್ಯಕ್ಕೆ ಸಂಬಂಧಿಸಿದ ರಾಷ್ಟ್ರೀಯ ವಾಯು ಗುಣಮಟ್ಟ ಮಾನದಂಡವನ್ನು (ಪ್ರತಿ ಘನ ಮೀಟರ್‌ಗೆ 60 ಮೈಕ್ರೊಗ್ರಾಂಗಳು) ಕಟ್ಟುನಿಟ್ಟಾಗಿ ಅನುಸರಣೆ ಮಾಡಿವೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಹೇಳಿದೆ.

ಮಾಯುಮಾಲಿನ್ಯ ಪ್ರಮಾಣ ಶೇ.40ರಷ್ಟು ಇಳಿಕೆ ಕಂಡ 21 ನಗರಗಳ ಪಟ್ಟಿಯಲ್ಲಿ ವಾರಾಣಸಿ, ಧರ್ಬಾದ್, ಬರ್ನಿಹಾಟ್, ಬರೇಲಿ, ಫಿರೋಜಾಬಾದ್, ಡೆಹ್ರಾಡೂನ್, ತೂತುಕುಡಿ, ನಾಲಾಗಡ, ಮೊರದಾಬಾದ್, ಖುರ್ಜಾ, ತಿರುಚ್ಚಿ, ಕೊಹಿಮಾ, ಲಖನೌ, ಕಾನ್ಪುರ, ಕಡಪ, ಶಿವಸಾಗರ್, ಸುಂದರ್‌ನಗರ್, ಆಗ್ರಾ, ಗ್ರೇಟರ್ ಮುಂಬೈ, ರಿಷಿಕೇಶ್ ಮತ್ತು ಪರ್ವಾಣೂ ನಗರಗಳಿವೆ.

ಸೂರತ್‌ಗೆ ಮೊದಲ ರ್‍ಯಾಂಕ್

ಗಾಳಿಯ ಗುಣಮಟ್ಟ ಸುಧಾರಣೆಯಾಗುತ್ತಿರುವ ಪ್ರಮುಖ ನಗರಗಳ ಪೈಕಿ ಸೂರತ್ ಮೊದಲ ರ್‍ಯಾಂಕ್ ಪಡೆದಿದೆ. ಜಬಲ್‌ಪುರ ಮತ್ತು ಆಗ್ರಾ, ನಗರಗಳು ಎರಡು ಮತ್ತು ಮೂರನೇ ಸ್ಥಾನ ಗಳಿಸಿವೆ.

ಅಹಮದಾಬಾದ್, ಗಾಜಿಯಾಬಾದ್, ರಾಜ್‌ಕೋಟ್, ಜಲಂಧರ್, ರಾಯಬರೇಲಿ, ಅಮೃತಸರ, ಕೋಲ್ಕತ್ತ, ಜಮ್ಮು, ಸಿಲ್ಚಾರ್, ವಿಜಯವಾಡ, ನಯಾ ನಂಗಲ್, ದೀಮಾಪುರ, ಬದ್ದೀ ಮತ್ತು ಜೋಧಪುರಗಳಲ್ಲಿ ಪಿಎಂ10 ವಾಯುಮಾಲಿನ್ಯ ಪ್ರಮಾಣ ಶೇ.30ರಿಂದ ಶೇ. 40ರಷ್ಟು ಇಳಿಕೆಯಾಗಿದೆ.

ಬೆಂಗಳೂರು, ಖನ್ನಾ, ದುರ್ಗಾಪುರ, ಕರ್ನೂಲ್, ಡೆರಾ ಬಾಬಾ ನಾನಕ್, ವಡೋದರ, ಅಲಹಾಬಾದ್, ಅಸನ್‌ಸೋಲ್, ಹೈದರಾಬಾದ್, ಗೋರಖ್‌ಪುರ, ರಾಂಚಿ, ಅಕೋಲಾ, ಅನಂತಪುರ, ದುರ್ಗ್ ಭಿಲಾಯಿನಗರ, ಸೂರತ್ ಮತ್ತು ನೊಯಿಡಾ ನಗರಗಳಲ್ಲಿ ಮಾಲಿನ್ಯ ಪ್ರಮಾಣ ಶೇ.20ರಿಂದ 30ರಷ್ಟು ಕುಗ್ಗಿದೆ.

→ 4

2026ಕ್ಕೆ ಶೇ.40ರಷ್ಟು ಕಡಿಮೆ ಮಾಡುವ ಗುರಿ

2024ರ ಹೊತ್ತಿಗೆ ಮಾಲಿನ್ಯಕಾರಕ ಕಣಗಳಿಂದ ಉಂಟಾಗುವ ವಾಯುಮಾಲಿನ್ಯವನ್ನು ಶೇ.20ರಿಂದ 30ರಷ್ಟು ಕಡಿಮೆ ಮಾಡುವ ಗುರಿಯೊಂದಿಗೆ ಭಾರತವು 2019ರಲ್ಲಿ ರಾಷ್ಟ್ರೀಯ ಸ್ವಚ್ಛ ಗಾಳಿ ಯೋಜನೆಗೆ ಚಾಲನೆ ನೀಡಿತ್ತು. ಇದಕ್ಕೆ 2017ರ ದತ್ತಾಂಶಗಳನ್ನು ಮೂಲ ಆಧಾರವಾಗಿಟ್ಟುಕೊಳ್ಳಲಾಗಿತ್ತು. ಈ ಗುರಿಯನ್ನು ನಂತರ ಪರಿಷ್ಕರಿಸಲಾಗಿದ್ದು, 2026ರ ಹೊತ್ತಿಗೆ 131 ನಗರಗಳಲ್ಲಿ ವಾಯುಮಾಲಿನ್ಯವನ್ನು ಶೇ.40ರಷ್ಟು ಕಡಿಮೆ ಮಾಡುವ ಗುರಿ ಹೊಂದಲಾಗಿದೆ. ಇದಕ್ಕಾಗಿ 2019-20ನೇ ಸಾಲಿನ ದತ್ತಾಂಶಗಳನ್ನು ಮೂಲ ಆಧಾರವಾಗಿ ಪರಿಗಣಿಸಲಾಗುತ್ತಿದೆ.

ಯುಎಸ್ ಓಪನ್ 2024

3ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದ ಅರಿನಾ

ನ್ಯೂಯಾರ್ಕ್: ಬೆಲಾರಸ್‌ನ 26 ವರ್ಷದ ಅರಿನಾ ಸಬಲೆಂಕಾ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಗೆಲುವು ಸಾಧಿಸುವ ಮೂಲಕ ಮೂರನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದಾರೆ.

ಪ್ರಶಸ್ತಿಯೊಂದಿಗೆ ಬೆಲಾರಸ್‌ನ ಅರಿನಾ ಸಬಲೆಂಕಾ.

ವಿಶ್ವದ ಎರಡನೇ ಶ್ರೇಯಾಂಕದ ಆಟಗಾರ್ತಿ ಅರಿನಾ ಸಬಲೆಂಕಾ ಅವರು ಆರನೇ ಶ್ರೇಯಾಂಕದ ಆತಿಥೇಯ ದೇಶದ ಜೆಸ್ಸಿಕಾ ಪೆಗುಲಾ ಅವರನ್ನು 7-5, 7-5 ಸೆಟ್‌ಗಳಿಂದ ಹಿಮ್ಮೆಟ್ಟಿಸಿದ್ದಾರೆ.

ಕಳೆದ ವರ್ಷ ರನ್ನರ್ ಅಪ್ ಆಗಿದ್ದ ಸಬಲೆಂಕಾ ಅವರು ಸೆಮಿಫೈನಲ್‌ನಲ್ಲಿ 13ನೇ ಶ್ರೇಯಾಂಕದ ಎಮ್ಮಾ ನವಾರೊ (ಅಮೆರಿಕ) ಅವರನ್ನು 6-3, 7-6 (2) ಸೆಟ್‌ಗಳಿಂದ ಸೋಲಿಸಿದ್ದರು. 2023 ಮತ್ತು 2024ರ ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಆಗಿದ್ದರು.

ಸಮಾಚಾರ ಸಣ್ಣದಲ್ಲ

ಕುರಿ ಮೇಕೆ ಸಾಕಣೆ ತರಬೇತಿ ಇಂದಿನಿಂದ

ಬೀದರ: ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರ, ಬೀದರ ಕೇಂದ್ರ, ಗ್ರಂಥಾಲಯ ಹಿಂಭಾಗ ಜನವಾಡಾ ರಸ್ತೆ, ಬೀದರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ಕುರಿತು ಸೆ.9 ರಿಂದ 10 ರವರೆಗೆ ತರಬೇತಿ ಹಮ್ಮಿಕೊಳ್ಳಲಾಗಿರುತ್ತದೆ. ಆಸಕ್ತ ರೈತರು ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರ, ಬೀದರ ಕೇಂದ್ರ, ಗ್ರಂಥಾಲಯ ಹಿಂಭಾಗ ಜನವಾಡಾ ರಸ್ತೆ, ಬೀದರನ ಕಚೇರಿಯಲ್ಲಿ ಮುಂಚಿತವಾಗಿ ನೋಂದಾಯಿಸಲು ತಿಳಿಸಿದೆ. 30 ರೈತರಿಗೆ ತರಬೇತಿಗೆ ಅವಕಾಶವಿರುತ್ತದೆ. ಮೊದಲು ಬಂದವರಿಗೆ ಆದ್ಯತೆ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9902561957ಗೆ ಸಂಪರ್ಕಿಸಬಹುದಾಗಿದೆ ಎಂದು ಪಶು ಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರ, ಬೀದರ ಮುಖ್ಯ ಪಶು ವೈದ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಪ್ರಶಸ್ತಿ ಅರ್ಜಿ ಆಹ್ವಾನ

ಬೀದರ: ಮಕ್ಕಳ ದಿನಾಚರಣೆ-2024ನೇ ಪ್ರಶಸ್ತಿಗಾಗಿ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿರುವ ವ್ಯಕ್ತಿ ಮತ್ತು ಸಂಸ್ಥೆಗಳಿಗೆ ನೀಡುವ ರಾಜ್ಯ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವ್ಯಕ್ತಿಗಳಿಗೆ ತಲಾ 25,000 ರು. ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ, ಹಾಗೂ ಸಂಸ್ಥೆಗಳಿಗೆ ತಲಾ 1,00,000 ರು. ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಲಾಗುವುದು. ಆಸಕ್ತಿಯುಳ್ಳ ವ್ಯಕ್ತಿ ಹಾಗೂ ಸಂಸ್ಥೆಯವರು ಸೆ.17 ರೊಳಗೆ ನಿಗದಿಪಡಿಸಿರುವ ನಮೂನೆಯಲ್ಲಿನ ಅರ್ಜಿಯನ್ನು ಕನ್ನಡ ಭಾಷೆಯಲ್ಲಿ ಭರ್ತಿ ಮಾಡಿ ಸಲ್ಲಿಸಬೇಕು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೈಲೂರ ಬೀದರ ದೂರವಾಣಿ ಸಂಖ್ಯೆ: 08482-234237ಕ್ಕೆ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೀದರ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷ್ಣಾ ನದಿಗೆ 1.10 ಲಕ್ಷ ಕ್ಯುಸೆಕ್ ನೀರು

ಯಾದಗಿರಿ: ಒಳಹರಿವು ಹೆಚ್ಚಾದ ಹಿನ್ನಲೆಯಲ್ಲಿ ಜಿಲ್ಲೆಯ ನಾರಾಯಣಪುರ ಆಣೆಕಟ್ಟಿನಿಂದ 25 ಗೇಟ್ ಮೂಲಕ ಸ್ಥಾವರದ ಮೂಲಕ ಒಟ್ಟು 1.10 ಲಕ್ಷ ಕ್ಯುಸೆಕ್ ನೀರನ್ನು ಕೃಷ್ಣಾ ನದಿಗೆ ಹರಿಬಿಡಲಾಗುತ್ತಿದೆ. ಬಸವಸಾಗರ ಅಣೆಕಟ್ಟಿಗೆ ಆಲಮಟ್ಟಿ ಜಲಾಶಯದಿಂದ 1.05 ಲಕ್ಷ ಕ್ಯುಸೆಕ್ ನೀರನ್ನು ಭಾನುವಾರ ಹರಿಬಿಡಲಾಗಿದೆ. ಹೀಗಾಗಿ ಬಸವ ಸಾಗರ ಜಲಾಶಯದ ಸಂಗ್ರಹ ಮಟ್ಟ ಕಾಯ್ದುಕೊಂಡು 1.10 ಲಕ್ಷ ಕ್ಯುಸೆಕ್ ನೀರನ್ನು ನದಿಗೆ ಹರಿಬಿಡಲಾಗುತ್ತಿದ. ಸದ್ಯ 31.2 ಟಿಎಂಸಿ ನೀರು ಜಲಾಶಯದಲ್ಲಿ ಸಂಗ್ರಹವಾಗಿದೆ.

ತಾಲೂಕ ಮಟ್ಟದ ಶಿಕ್ಷಕರ ದಿನಾಚರಣೆ ಇಂದು

ಶಹಾಪುರ: ಸೆ.9ರಂದು ತಾಲೂಕ ಮಟ್ಟದ ಶಿಕ್ಷಕರ ದಿನಾಚರಣೆಯನ್ನು ಭೀಮರಾಯನಗುಡಿ ಕೃಷಿ ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ

ಎಂದು ಸರಕಾರಿ ನೌಕರರ ಸಂಘದ ತಾಲೂಕ ಅಧ್ಯಕ್ಷ ರಾಯಪ್ಪಗೌಡ ಹುಡೇದ ತಿಳಿಸಿದ್ದಾರೆ. ಅಂದಿನ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಉದ್ಘಾಟಿಸಲಿದ್ದಾರೆ. ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ತಾಲೂಕ ಮಟ್ಟದಲ್ಲಿ ಉತ್ತಮ ಕಾರ್ಯ ನಿರ್ವಹಿಸಿದ ಇಬ್ಬರು ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಒಬ್ಬರು ಪ್ರೌಢಶಾಲಾ ಶಿಕ್ಷಕರಿಗೆ ಪ್ರಶಸ್ತಿ ಲಭಿಸಿದ್ದು. ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ ಪ್ರೌಢಶಾಲಾ ಶಿಕ್ಷಕಿ ಅನಿತಾ ಸಹ ಶಿಕ್ಷಕರು ಸರಕಾರಿ ಪ್ರೌಢಶಾಲೆ ನಾಗನಟಗಿ, ಮತ್ತು ಗುತ್ತಪ್ಪ ಎನ್ ಪ್ರಬಾರಿ ಮುಖ್ಯ ಗುರುಗಳಾದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ದಿಗ್ಗಿ ಬೇಸ್, ಹಾಗೂ ಮಾಲನಬಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ದರ್ಶನಾಪುರ ಅವರನ್ನು ಸಂಘದ ವತಿಯಿಂದ ಆಯ್ಕೆ ಮಾಡಲಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವರು ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸುವರು ಎಂದು ಸಂಘದ ಖಜಾಂಜಿ ಬಸನಗೌಡ ಬೆಳ್ಳಿಕಟ್ಟಿ, ರಾಜ್ಯ ಪರಿಷತ್ ಸದಸ್ಯ ಶಾಂತರೆಡ್ಡಿ ತುಂಬಗಿ, ಕಾರ್ಯದರ್ಶೀ ನಿಂಗಪ್ಪ ಪುರ್ಲೆ ತಿಳಿಸಿದ್ದಾರೆ.

{ಬಸವರಾಜ ಬೊಮ್ಮಾಯಿ} ಸಂಸದ

ಮಹಾರಾಷ್ಟ್ರ ಹಾಗೂ ಗುಜರಾತ್‌ನಲ್ಲಿ ಸಹಕಾರ ರಂಗದವರು ಸರಕಾರವನ್ನು ಆಳುತ್ತಾರೆ. ಇಲ್ಲಿ ಸರಕಾರ ಸಹಕಾರ ರಂಗವನ್ನು ಆಳಲು ಬಯಸುತ್ತದೆ. ಅದು ಬದಲಾಗಬೇಕು. ಸಹಕಾರ ರಂಗವನ್ನು ಅಧಿಕಾರಶಾಹಿ ಮುಕ್ತಮಾಡಬೇಕು. ಸಾರ್ವಜನಿಕರ ಠೇವಣಿ ನಷ್ಟವಾಗಬಾರದೆಂದು ಕಾನೂನು ಮಾಡಬೇಕು. ಅದರ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡಬಾರದು.

ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆಯಿಂದ ಕಾರಂಜಾ ಜಲಾಶಯಕ್ಕೆ ಬಾಗಿನ ಅರ್ಪಣೆ

ನೀರಿನ ಯೋಜನೆಗೆ ಮೂಲಾಧಾರ ಕಾರಂಜಾ

ಬೀದರ: ಜಿಲ್ಲೆಯಾದ್ಯಂತ ಕುಡಿಯುವ ನೀರು ಹಾಗೂ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಮೂಲಾಧಾರ ಕಾರಂಜಾ ಜಲಾಶಯವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ ವತಿಯಿಂದ ಹಮ್ಮಿಕೊಂಡಿದ್ದ ಕಾರಂಜಾ ಜಲಾಶಯಕ್ಕೆ ಬಾಗಿನ ಅರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರಂಜಾ ಜಲಾಶಯಕ್ಕೆ ಬಾಗಿನ ಅರ್ಪಣೆ ನಂತರ ಮಾತನಾಡಿದ ಅವರು, ಬಾಗಿನ ಅರ್ಪಣೆ ನಮ್ಮ ಪೂರ್ವಜರ ಕಾಲದಿಂದ ನಡೆದು ಬಂದಿದೆ. ಅವರು ಜಲ ಸಂರಕ್ಷಣೆಗಾಗಿ ಕೆರೆ, ಕಟ್ಟೆಗಳನ್ನು ಕಟ್ಟುತ್ತಿದ್ದರು. ಬಾಗಿನ ಅರ್ಪಣೆ ಮಾಡುವುದರಿಂದ ನೀರಿನಲ್ಲಿರುವ ಜಲಚರ ಪ್ರಾಣಿಗಳಿಗೆ ತಿನ್ನಲು ಆಹಾರ ಸಿಗುತ್ತದೆ. ನೀರು ಜೀವಜಲ ನೀರಿಲ್ಲದೆ ಏನಿಲ್ಲ. ನೀರಿಗಾಗಿ ಅನೇಕ ಯುದ್ಧಗಳು ನಡೆದಿರುವುದು ಇತಿಹಾಸದಲ್ಲಿ ಕೇಳಿದ್ದೇವೆ ಮತ್ತು ಇಂದಿಗೂ ಅಂತರಾಜ್ಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ನೀರಿಗಾಗಿ ಅನೇಕ ಹೋರಾಟಗಳು ನಡೆಯುತ್ತಿವೆ ಎಂದು ಹೇಳಿದರು.

ಬೀದರ ದಕ್ಷಿಣ ಕ್ಷೇತ್ರದ ಶಾಸಕ ಶೈಲೇಂದ್ರ ಬೆಲ್ದಾಳೆ ಅವರು ಮಾತನಾಡಿ, ಕಾರಂಜಾ ಜಲಾಶಯಕ್ಕೆ ಬಾಗಿನ ಅರ್ಪಣೆ ಬಹುದಿನಗಳ ಕನಸು ನನಸಾಗಿದೆ. ಜಲಾಶಯ ನೀರು ರೈತರು ಬಳಕೆ ಮಾಡಿಕೊಂಡು ಉತ್ತಮ ಇಳುವರಿ ಬೆಳೆಗಳನ್ನು ಬೆಳೆಯುವ ಮೂಲಕ ಆರ್ಥಿ ಅಭಿವೃದ್ಧಿ ಹೊಂದಬೇಕು ಎಂದರು.

ಕಾರಂಜಾ ಜಲಾಶಯಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಬಾಗಿನ ಅರ್ಪಿಸಿದರು.

ಕಾರ್ಯಕ್ರಮದಲ್ಲಿ ಪೌರಾಡಳಿತ ಮತ್ತು ಹಜ್ ಸಚಿವ ರಹೀಂಖಾನ್. ಹುಮನಾಬಾದ ಶಾಸಕ ಡಾ. ಸಿದ್ದಲಿಂಗಪ್ಪ ಪಾಟೀಲ್. ವಿಧಾನ ಪರಿಷತ್ ಸದಸ್ಯ ಡಾ.ಎಂ.ಜಿ. ಮೂಳೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಮಾಲಾ ನಾರಾಯಣರಾವ್, ಬೀದರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಬ್ಯಾಲಹಳ್ಳಿ ಕೆ. ಗ್ರಾಮ ಪಂಚಾಯತ ಅಧ್ಯಕ್ಷ ಅಶೋಕ ಜಾಧವ, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ, ಕಲಬುರಗಿ ವಲಯ ಕ.ನೀ. ನಿ.ನಿ. ಮುಖ್ಯ ಅಭಿಯಂತರರಾದ ಸೂರ್ಯಕಾಂತ ಮಾಲೆ, ಅಪರ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ, ಕಾರಂಜಾ ಯೋಜನೆ ಕಾರ್ಯನಿರ್ವಾಹಕ ಎಂಜಿನಿಯರ ಅಬ್ದುಲ ಖುದ್ದುಸ ಸೇರಿದಂತೆ ಇತರೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ರೈತರು ಉಪಸ್ಥಿತರಿದ್ದರು.

ರೈತರ ಜೀವನಾಡಿ ಜಲಾಶಯ

1969-70 ರ ದಶಕದಲ್ಲಿ ಪ್ರಾರಂಭವಾದ ಕಾರಂಜಾ ಜಲಾಶಯ ಬೀದರ ಜಿಲ್ಲೆಯ ರೈತರ ಜೀವನಾಡಿಯಾಗಿದೆ. ಸಾವಿರಾರು ಹೆಕ್ಟೇರ್ ಜಮಿನಿಗೆ ನೀರು ಬರುತ್ತಿದ್ದು. ರೈತರ ಆರ್ಥಿಕತೆ ಹೆಚ್ಚಿಸಿದೆ. ಉತ್ತಮ ಇಳುವರಿ ಬೆಳೆಗಳನ್ನು ಬೆಳೆಯಲು ಅನುಕೂಲವಾಗಿದೆ. 131 ಕಿ.ಮಿ.ಬಲದಂಡೆ ಹಾಗೂ 31ಕಿ.ಮಿ.ಎಡದಂಡೆ ಕಾಲುವೆ ನಿರ್ಮಾಣದಿಂದ ರೈತರಿಗೆ ಅನುಕೂಲವಾಗಿದೆ ಎಂದು ಸಚಿವರು ತಿಳಿಸಿದರು.

ರಾಜ್ಯದ ಒಣ ಹವೆ ಪ್ರದೇಶಗಳಲ್ಲಿ ಬೀದರ ಕಲಬುರಗಿ ಜಿಲ್ಲೆಗಳು ಬರುತ್ತವೆ. ಬರುವ ದಿನಗಳಲ್ಲಿ ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳನ್ನು ನಮ್ಮ ಸರ್ಕಾರದ ವತಿಯಿಂದ ಕೈಗೊಳ್ಳಲಾಗುವುದು. ಜಲಾಶಯ ಹಿನ್ನೀರಿನಲ್ಲಿ ರೈತರ ಭೂಮಿ ಮುಳುಗಡೆಯಾಗುತ್ತಿರುವ ಬಗ್ಗೆ ಮತ್ತೊಮ್ಮೆ ಸರ್ವೆ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ.

-ಈಶ್ವರ ಖಂಡ್ರೆ, ಜಿಲ್ಲಾ ಉಸ್ತುವಾರಿ ಸಚಿವ

ಆತ್ಮ ಶುದ್ಧಿ ಇದ್ದಾಗ ಬದುಕು ಸುಂದರ: ಡಾ.ಗಂಗಾಧರ

ಯಾದಗಿರಿ: ನಮ್ಮ ಅಂತರಂಗವನ್ನು ಶುದ್ಧವಾಗಿಟ್ಟುಕೊಂಡಾಗ ಒಳಗಿನ ಆತ್ಮ ಇತರರಿಗೆ ಲೇಸನ್ನು ಬಯಸಲು ಪ್ರೇರೇಪಿಸುತ್ತದೆ. ಆತ್ಮ ಶುದ್ಧಿ ಇದ್ದಾಗ ಮಾತ್ರ ನಮ್ಮ ಬದುಕು ಸುಂದರವಾಗಿ ರೂಪುಗೊಳ್ಳುತ್ತದೆ ಎಂದು ಅಬ್ಬೆ ತುಮಕೂರಿನ ವಿಶ್ವಾರಾಧ್ಯ ಮಠದ ಡಾ.ಗಂಗಾಧರ ಮಹಾ ಸ್ವಾಮೀಜಿಗಳು ನುಡಿದರು.

ಮನುಷ್ಯ ಬದುಕು ಮಾರ್ಗದರ್ಶಿಯಾಗಬೇಕಾದರೆ ಮಾನವಿಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಅವಶ್ಯವಿದೆ ಎಂದರು. ಲೋಕ ಕಲ್ಯಾಣ ಮತ್ತು ಜನ ಕಲ್ಯಾಣವನ್ನು ಬಯಸಿ, ತಿಂಗಳ ಪರ್ಯಂತ ವಿಶೇಷ ಪೂಜೆಯನ್ನು ನೆರವೇರಿಸಿಕೊಂಡು ಬರಲಾಗಿದೆ. ಶ್ರೀ ವಿಶ್ವಾರಾಧ್ಯರು ಸಂಪ್ರೀತರಾಗಿ ಎಲ್ಲರಿಗೂ ಒಳಿತಾಗಲು ಹರಸುತ್ತಾರೆಂದು ಹೇಳಿದರು.

-ಡಾ.ಗಂಗಾಧರ ಮಹಾ ಸ್ವಾಮೀಜಿ, ವಿಶ್ವಾರಾಧ್ಯ ಮಠ

ಮಠದಲ್ಲಿ ಹಮ್ಮಿಕೊಂಡಿದ್ದ, ಶ್ರಾವಣ ಮಾಸದ ಕೊನೆಯ ಪೂಜಾ ಮಹಾಮಂಗಲ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದ ಅವರು, ಇಡೀ ವರುಷದುದ್ದಕ್ಕೂ ಪ್ರತಿಯೊಬ್ಬ ಮನುಷ್ಯ ಜೀವಿ ಸಾಂಸಾರಿಕ ಜೀವನದಲ್ಲಿ ತೊಡಗಿಸಿಕೊಂಡು ಅನೇಕ ಎಡರು- ತೊಡರುಗಳನ್ನು ಅನುಭವಿಸುತ್ತಾನೆ. ಈ ಸಂಕಷ್ಟಗಳಿಂದ ನೀಗಲು ಶ್ರಾವಣ ಮಾಸದಲ್ಲಿ ಪುರಾಣ-ಪುಣ್ಯ ಕಥೆಗಳನ್ನು ಆಲಿಸುವುದು ಅಗತ್ಯವಾಗಿದೆಯೆಂದು ಹೇಳಿದರು.

ಸಿದ್ಧರಾಮ ಮೇತ್ರೆ, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಚನ್ನಪ್ಪ ಗೌಡ ಮೋಸಂಬಿ, ರಾಚಣ್ಣಗೌಡ ಮುದ್ನಾಳ, ಡಾ. ಸುಭಾಶ್ಚಂದ್ರ

ಶ್ರಾವಣ ಮಾಸದ ಕೊನೆಯ ಪೂಜಾ ಮಹಾಮಂಗಲ ಕಾರ್ಯಕ್ರಮದ ಸಾನ್ನಿಧ್ಯವಹಿಸಿದ ವಿಶ್ವಾರಾಧ್ಯ ಮಠದ ಡಾ. ಗಂಗಾಧರ ಮಹಾ ಸ್ವಾಮೀಜಿಗಳು.

ಕೌಲಗಿ, ವಿಶ್ವನಾಥ ಶಿರವಾರ ಸೇರಿದಂತೆ ಅನೇಕ ಭಕ್ತರು ಇದ್ದರು. ಶಹಾಬಾದ, ಲಕ್ಷ್ಮೀಪೂರ, ಹತ್ತಿಕುಣಿ, ಯಾದಗಿರಿ, ಯರಗೋಳ ಮುಂತಾದ ಗ್ರಾಮಗಳಿಂದ ಆಗಮಿಸಿದ್ದ ಭಜನಾ ತಂಡದವರಿಂದ ನಡೆದ ಭಜನಾ ಮೇಳ ಭಕ್ತಿಯ ಮೆರಗನ್ನು ಹೆಚ್ಚಿಸಿತು.

ಪ್ರಸಾದ ವಿತರಣೆ: ಬೆಳಗ್ಗೆ ಶ್ರೀ ವಿಶ್ವಾರಾಧ್ಯರ ಗದ್ದುಗೆಗೆ ಗೋರಟಾ ಸಂಗೀತ ಬಳಗದವರಿಂದ ವಿಶೇಷ ರುದ್ರಾ ಭಿಷೇಕವನ್ನು ನೆರವೇರಿ ಸುವುದರೊಂದಿಗೆ ತಿಂಗಳ ಪರ್ಯಂತ ನಡೆಸಿಕೊಂಡು ಬಂದ ಪೂಜೆಯನ್ನು ಮಹಾ ಮಂಗಲಗೆಸಲಾಯಿತು. ತರುವಾಯ ಸಿದ್ದರಾಮ ಮೇತ್ರೆ ಪರಿವಾರದವರಿಂದ ಡಾ. ಗಂಗಾಧರ ಸ್ವಾಮೀಜಿ ಪಾದಪೂಜೆ ನಡೆಯಿತು.

ಅಪೌಷ್ಟಿಕ ಮುಕ್ತ ಜಿಲ್ಲೆಗೆ ಶ್ರಮಿಸಲು ಮನವಿ

ಬೀದರ: 2023ನೇ ಸಾಲಿನ ಸಮೀಕ್ಷೆಯಲ್ಲಿ ಅಪೌಷ್ಟಿಕತೆಯಲ್ಲಿ ಕೋಲಾರ ಮತ್ತು ಬೀದರ ಜಿಲ್ಲೆಗಳು ಗುರುತಿಸಿಕೊಂಡಿವೆ, ಅಂಗನವಾಡಿ ಕಾರ್ಯಕರ್ತೆಯರು ಗರ್ಭಿಣಿ ತಾಯಂದಿರಿಗೆ ಮತ್ತು ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಿ ರಕ್ತ ಹೀನತೆ ಕಡಿಮೆ ಮಾಡುವುದಕ್ಕೆ ಶ್ರಮಿಸಬೇಕು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಪ್ರಕಾಶ ಅರ್ಜುನ ಬನಸೊಡೆ ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಬೀದರ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೀದರ ಅವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಬಾಲಭವನ ಬೀದರದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಪೌಷ್ಟಿಕ ದಿನಾಚರಣೆಯ ಅಂಗವಾಗಿ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಭಾರತ ದೇಶವು ಕೃಷಿ ಪ್ರಧಾನ ದೇಶವಾಗಿರುವುದರಿಂದ ನಮ್ಮ ಪೂರ್ವಜರು ಮನೆಯ ಹಿತ್ತಲಲ್ಲಿಯೇ ಕಾಯಿ ಪಲ್ಯಗಳನ್ನು ಬೆಳೆದು ಅದನ್ನೇ ಸೇವಿಸುತ್ತಿದ್ದರು. ಆದರೆ ಬದಲಾದ ಕಾಲದಲ್ಲಿ ಕೀಟ ನಾಶಕಗಳನ್ನು ಅತೀ ಹೆಚ್ಚಾಗಿ ಬಳಸಿದ ಕಾಯಿ ಪಲ್ಯಗಳನ್ನು ಮತ್ತು ದವಸ ಧಾನ್ಯಗಳನ್ನು ತಿನ್ನುತ್ತಿದ್ದೇವೆ. ಅಲ್ಲದೇ ಇಂದಿನ ದಿನಮಾನಗಳಲ್ಲಿ ಕಲಬೆರಕೆಯ ಪದಾರ್ಥಗಳನ್ನು ಬಳಸುತ್ತಿರುವುದು ಹೆಚ್ಚಾಗುತ್ತಿದೆ ಇದರಿಂದ ಅನಾರೋಗ್ಯ ಉಂಟಾಗುತ್ತಿದೆ.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೀದರ ಉಪನಿರ್ದೇಶಕ ಗುರುರಾಜ. ಬೀದರ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಶಿವಶರಣಪ್ಪ ಪಾಟೀಲ,

ರಾಷ್ಟ್ರೀಯ ಪೌಷ್ಟಿಕ ದಿನಾಚರಣೆಯ ಅಂಗವಾಗಿ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮದಲ್ಲಿ ಪ್ರಕಾಶ ಅರ್ಜುನ ಬನಸೊಡೆ ಮಾತನಾಡಿದರು.

ಸಕಾಲದಲ್ಲಿ ಪೌಷ್ಟಿಕ ಆಹಾರ. ಶುದ್ಧ ಕುಡಿಯುವ ನೀರು ಮತ್ತು ಆರೋಗ್ಯ ತಪಾಸಣೆಯನ್ನು ಕೈಗೊಳ್ಳಬೇಕು. ಬೀದರ ಜಿಲ್ಲೆಯನ್ನು ಅಪೌಷ್ಟಿಕ ಮುಕ್ತ ಜಿಲ್ಲೆಯನ್ನಾಗಿ ಮಾಡಲು ಎಲ್ಲಾ ಸಹಭಾಗೀದಾರ ಇಲಾಖೆಯವರು ಕೈಜೋಡಿಸಬೇಕು.

-ಪ್ರಕಾಶ ಅರ್ಜುನ ಬನಸೊಡೆ, ಸದಸ್ಯ ಕಾರ್ಯದರ್ಶಿ

ಕಾರ್ಯದರ್ಶಿ ನಾಗೇಂದ್ರ ಬಿರಾದಾರ. ಬೀದರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಶಾರದಾ ಕಲ್ಮಲಕರ. ಬೀದರ ತಾಯಿ ಮತ್ತು ಮಕ್ಕಳ ಆರೋಗ್ಯಾಧಿಕಾರಿ ಶಿವಶಂಕರ ಭತಮುರ್ಗೆ. ಬೀದರ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ರಜೀಯಾ ಬಳಬಟ್ಟಿ ಬೀದರ ಮಕ್ಕಳ ರಕ್ಷಣಾಧಿಕಾರಿ ಗೌರಿಶಂಕರ ಪರತಾಪೂರೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮಕ್ಕಳು ಇಷ್ಟಪಡುವ ಶಿಕ್ಷಕರಾದರೆ ಬದುಕು ಸಾರ್ಥಕ

ಭಾಲ್ಕಿ: ವಿದ್ಯಾರ್ಥಿಗಳು ಇಷ್ಟಪಡುವ ಶಿಕ್ಷಕರಾದಾಗ ಮಾತ್ರ ಶಿಕ್ಷಕರ ಬದುಕು ಸಾರ್ಥಕ ಆಗುತ್ತದೆ ಎಂದು ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಬಸವಲಿಂಗ ಪಟ್ಟದೇವರು ಹೇಳಿದರು.

ತಾಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ಶಿಕ್ಷಣ ಸಮುಚ್ಚಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ.

ಆದರ್ಶ ಶಿಕ್ಷಕ ಸೇವಾ ಪ್ರಶಸ್ತಿ ಪ್ರದಾನ.

ಸ್ಟೈಲ್ ಗ್ಲೋಬಲ್ ಟೀಚರ್ಸ್ ಅಕಾಡೆಮಿ ಸಂಸ್ಥಾಪಕ ಮಹೇಶ ಮಾಸಾಳ್ ಅವರ ವಿಶೇಷ ಉಪನ್ಯಾಸ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದ ಅವರು, ಎಲ್ಲ ಶಿಕ್ಷಕರ, ಸಿಬ್ಬಂದಿ ಶ್ರಮದಿಂದ ಇಂದು ನಮ್ಮ ಶಿಕ್ಷಣ ಸಂಸ್ಥೆ ಹೆಮ್ಮರವಾಗಿ ಬೆಳೆದಿದೆ. ಆತ್ಮಸಾಕ್ಷಿಗೆ ಅನುಗುಣವಾಗಿ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ಮಾಡುತ್ತ ವಿದ್ಯಾರ್ಥಿಗಳ ಶಿಕ್ಷಕ ಸಿಬ್ಬಂದಿಯ ಮಹೋನ್ನತ ಬದುಕು ರೂಪಿಸಲು ಸಂಸ್ಥೆ ಶ್ರಮಿಸುತ್ತಿದೆ ಎಂದು ತಿಳಿಸಿದರು. ಗುಣಮಟ್ಟದ ಶಿಕ್ಷಣ ನೀಡುವುದೇ ನಮ್ಮ ಸಂಸ್ಥೆಯ ಧ್ಯೇಯ. ಗ್ರಾಮಾಂತರ ಭಾಗದ ಮಕ್ಕಳಿಗೆ ಕಡಿಮೆ ಖರ್ಚಿನಲ್ಲಿ ಉತ್ತಮ ಶಿಕ್ಷಣ ನೀಡಬೇಕು ಎಂಬ ಸದುದ್ದೇಶದಿಂದ ನಮ್ಮ ಎಲ್ಲ ಶಾಲೆಗಳನ್ನು ಗ್ರಾಮೀಣ ಪ್ರದೇಶದಲ್ಲಿಯೇ ತೆರೆದಿದ್ದೇವೆ ಎಂದು ಹೇಳಿದರು.

ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಮುಖ್ಯವಾಹಿನಿಗೆ ತರುವ ಗುರುತರ ಜವಾಬ್ದಾರಿ ಶಿಕ್ಷಕರ ಮೇಲಿದೆ. ಎಲ್ಲ ಶಿಕ್ಷಕರು ನಿತ್ಯ ತಮ್ಮ ಪಾಠ ಬೋಧನೆಯ ಆತ್ಮಾವಲೋಕನ ಮಾಡಿಕೊಂಡು ಉತ್ತಮ, ಶ್ರೇಷ್ಠ ಶಿಕ್ಷಕರಾಗಲು ಪ್ರಯತ್ನಿಸಬೇಕು ಎಂದರು.

ಅಕಾಡೆಮಿ ಸಂಸ್ಥಾಪಕ ಮಹೇಶ ಮಾಸಾಳ್ ಮಾತನಾಡಿದರು. ಸಂಸ್ಥೆಯ ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ. ಆಡಳಿತಾಧಿಕಾರಿ ಮೋಹನರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ, ಮದನ ಗಾಂವ್ಕರ್ ಸೇರಿದಂತೆ ಶಿಕ್ಷಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ತಾಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ಶಿಕ್ಷಣ ಸಮುಚ್ಚಯದಲ್ಲಿ ಶಿಕ್ಷಕರ ದಿನಾಚರಣೆ ಹಮ್ಮಿಕೊಂಡಿದ್ದರು.

ಆದರ್ಶ ಶಿಕ್ಷಕ ಸೇವಾ ಪ್ರಶಸ್ತಿ ಪ್ರದಾನ:

ಶಿಕ್ಷಕ ರಾಜೇಂದ್ರ ಪಾಟೀಲ.ಪ್ರಾಚಾರ್ಯ ನವೀಲಕುಮಾರ ಉತ್ಕಾರ್. ಮುಖ್ಯಶಿಕ್ಷಕರಾದ ರೇಖಾ ಪಿ.ಎಂ. ಉದಯಕುಮಾರ ಸಿರಂಜಿ. ಶಿವಕುಮಾರ ಕಾಬಾ.ಆದರ್ಶ ಶಿಕ್ಷಕ ಸೇವಾ ಪ್ರಶಸ್ತಿ ನೀಡಲಾಯಿತು.

ಸಂಪೂರ್ಣತಾ ಅಭಿಯಾನಕ್ಕೆ ಚಾಲನೆ



ತಾಲೂಕಿನ ಕೋರೆಕಲ್ ಗ್ರಾಪಂ ಅವರಣದಲ್ಲಿ ಸಂಪೂರ್ಣತಾ ಅಭಿಯಾನಕ್ಕೆ ಗ್ರಾಪಂ ಅಧ್ಯಕ್ಷೆ ಶೋಭಾವತಿ ಶಿಂಧೆ ಅವರು ಕಾರ್ಯಕ್ರಮ ಉದ್ಘಾಟಿಸುವ ಮೂಲಕ ಚಾಲನೆ ನೀಡಿದರು.

ಕಮಲನಗರ: ತಾಲೂಕಿನ ಕೋರೆಕಲ್ ಗ್ರಾಪಂ ಅವರಣದಲ್ಲಿ ಸಂಪೂರ್ಣತಾ ಅಭಿಯಾನಕ್ಕೆ ಗ್ರಾಪಂ ಅಧ್ಯಕ್ಷೆ ಶೋಭಾವತಿ ಶಿಂಧೆ ಅವರು ಕಾರ್ಯಕ್ರಮ ಉದ್ಘಾಟಿಸುವ ಮೂಲಕ ಚಾಲನೆ ನೀಡಿದರು. ಅಭಿಯಾನದ 6 ಸೂಚಕಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶವಾಗಿದೆ ಎಂದು ತಿಳಿಸಿದರು.

ಸಾರ್ವಜನಿಕರ ಅಗತ್ಯಗಳನ್ನು ಪೂರೈಸುವಲ್ಲಿ ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳ ಸಬಲಿಕರಣಕ್ಕಾಗಿ ಸಮಾನ ಅವಕಾಶಗಳನ್ನು ಒದಗಿಸಲು ನೀತಿ ಆಯೋಗವು ಸಹಾಯಕವಾಗಿದೆ. ಹಾಗೂ ಮಹತ್ವಾಕಾಂಕ್ಷೆ ತಾಲೂಕು ಕಾರ್ಯಕ್ರಮದ ಸಂಪೂರ್ಣತ ಅಭಿಯಾನ ಕಾರ್ಯಕ್ರಮದ ಆರು ಪ್ರಮುಖ ಸೂಚಕಗಳನ್ನು ಮತ್ತು ನಿರಂತರ ಪ್ರಯತ್ನ ಕೈಗೊಳ್ಳಲು ನೀತಿ ಆಯೋಗದ ಸಂಪೂರ್ಣತಾ ಅಭಿಯಾನವನ್ನು ಜು. 4 ರಿಂದ ಸೆ. 30 ರ ವರೆಗೆ ಮೂರು ತಿಂಗಳ ಅಭಿಯಾನವನ್ನು ಪ್ರಾರಂಭಿಸಿದೆ. ಸದರಿ ಕಾರ್ಯಕ್ರಮದ ಪ್ರಯೋಜನವನ್ನು ಪಡೆಯಿರಿ ಎಂದು ನೀತಿ ಆಯೋಗದ ಸಂಯೋಜಕರಾದ ಅಮರ ಕೋಟೆ ತಿಳಿಸಿದರು. ಅಂಗನವಾಡಿ ಮೇಲ್ವಿಚಾರಕಿಯಾದ ಶೋಭಾ, ರಾಜೇಶ್ವರಿ ಮಾತನಾಡಿ, ಮಹಿಳೆಯರು ಮೊದಲನೇ ತ್ರೈಮಾಸಿಕದಲ್ಲಿ ಪ್ರಸವ ಪೂರ್ವ ಆರೈಕೆ (ಎಎನ್ ಸಿ)ಗಾಗಿ ಗರ್ಭಿಣಿ ಮಹಿಳೆಯರನ್ನು ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು. ತಮ್ಮ ಮಗುವಿನ ಮತ್ತು ತಾಯಿಯ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಸಹಾಯವಾಗುತ್ತದೆ. ಗರ್ಭಿಣಿ ಮಹಿಳೆಯರ ಪೂರಕ ಪೋಷಣೆಯ ಆಹಾರವನ್ನು ನಿಯಮಿತವಾಗಿ ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಆರೋಗ್ಯ ಅಧಿಕಾರಿ ಡಾ.ಫೈಜಲ್ ಮಾತನಾಡಿ, ಆರೋಗ್ಯದ ಬಗ್ಗೆ ಬೇಜವಾಬ್ದಾರಿ ತೋರಿಸದೇ ತಪಾಸಣೆಯನ್ನು ಮಾಡಿಸಿಕೊಳ್ಳಿ ಮತ್ತು ಗರ್ಭಿಣಿ ಮಹಿಳೆಯರು ತಮ್ಮ ಪ್ರಸವ ಪೂರ್ವ ಆರೈಕೆಗೋಸ್ಕರ ರಿಜಿಸ್ಟ್ರೇಷನ್ ಮಾಡಸ್ಕೊಳ್ಳಿ ಹಾಗೂ 30 ವರ್ಷದ ಮೇಲ್ಪಟ್ಟ ಜನರು ಪ್ರತಿ ತಿಂಗಳಿಗೊಮ್ಮೆ ಕಡ್ಡಾಯವಾಗಿ ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಪರೀಕ್ಷೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು, ಗ್ರಾಮದ ಜನತೆಗೆ ಸಹಾಯವಾಗಲಿ ಎಂಬ ಕಾರಣದಿಂದ ತಿಂಗಳಿನಲ್ಲಿ ಎನ್ ಸಿಡಿ ಕ್ಯಾಂಪ್ ಮಾಡಲಾಗುತ್ತಿದೆ.

ಅದಕ್ಕಾಗಿ ಪಂಚಾಯತನ ಆವರಣದಲ್ಲಿ ಪಿಡಿಒ ಶ್ರೀನಿವಾಸ ದೇಶಪಾಂಡೆ. ಐಇಸಿ ಸಂಯೋಜಕ ಸವಿತಾ ನಾಗೇಶ. ಅಂಗವಾನಡಿ ಮೇಲ್ವಿಚಾರಕರು. ಗ್ರಾಪಂ ಸದಸ್ಯರು ಆಶಾ ಕಾರ್ಯಕರ್ತರು. ಸ್ವಸಹಾಯ ಸಂಘದ ಸದಸ್ಯರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಂಪೂರ್ಣತಾ ಅಭಿಯಾನ

ಕಾರ್ಯಕ್ರಮ ಅಡಿಯಲ್ಲಿ ಆರೋಗ್ಯ ಶಿಬಿರ ಏರ್ಪಡಿಸಲಾಗುತ್ತಿದೆ ಅದರ ಪ್ರಯೋಜನ ಪಡೆಯಬೇಕು ಎಂದು ಸೂಚಿಸಿದರು . ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕ ಕವಿತಾ ಬಿರಾದಾರ ಹೇಳಿದರು.

ನಾರಾಯಣಪುರ ಎಡದಂಡೆಗೆ ಡಿ.ರೆನಾಲ್ಟ್ ಭೇಟಿ

ಕೆಂಭಾವಿ: ರೈತರಿಗೆ ಕಾಲುವೆಗಳ ಮೂಲಕ ಸಮರ್ಪಕ ನೀರು ಒದಗಿಸಲು ಸರಕಾರ ಹಲವು ಕ್ರಮ ಕೈಗೊಂಡಿದ್ದು, ಅದರ ನಿರ್ವಹಣೆ ಕುರಿತು ವಿದೇಶಿ ತಂತ್ರಜ್ಞಾನದ ಅಳವಡಿಸಲು ಮುಂದಾಗಿದೆ. ಈ ನಿಟ್ಟಿನಲ್ಲಿ ಗುರುವಾರ ಫ್ರಾನ್ಸ್ ದೇಶದ ನೀರಾವರಿ ತಜ್ಞ ಡಿ.ರೆನಾಲ್ಟ್ ಅವರು ನಾರಾಯಣಪುರ ಎಡದಂಡೆ ಕಾಲುವೆಯ ಹಲವು ಉಪ ಕಾಲುವೆಗಳಿಗೆ ಭೇಟಿ ನೀಡಿ ಇಲ್ಲಿನ ಪರಿಸ್ಥಿತಿ ಅವಲೋಕಿಸಿದರು.

ನೂತನ ಸ್ಕಾಡಾ ತಂತ್ರಜ್ಞಾನ ಮೂಲಕ ಉಪಕಾಲುವೆಗಳಿಗೆ ನೀರು ಹರಿಸಿ ರೈತರಿಗೆ ಸಮರ್ಪಕ ನೀರು ತರುವಲ್ಲಿ ಅಧಿಕಾರಿಗಳು ಸ್ವಲ್ಪ ಮಟ್ಟಿಗೆ ಯಶಸ್ಸು ಕಂಡಿದ್ದಾರೆ. ಈಗ ಸ್ಕಾಡಾ ತಂತ್ರಜ್ಞಾದ ಬಳಕೆ ಮತ್ತು ಅವುಗಳ ನಿರ್ವಹಣೆ, ಕಾಲುವೆಯ ಕೊನೆಯ ಭಾಗದ ರೈತರಿಗೂ ನೀರು ಹರಿಸುವುದು, ಸ್ಕಾಡಾ ರಹಿತ ಪ್ರದೇಶದಲ್ಲೂ ರೈತರಿಗೆ ನೀರು ಒದಗಿಸುವುದು ಸೇರಿದಂತೆ ಹಲವು ಕ್ರಮಗಳ ಕುರಿತು ರೇನಾಲ್ಟ್ ಅವರು ಖುದ್ದು ಉಪ ಕಾಲುವೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈಗಾಗಲೇ ಆಲಮಟ್ಟಿಯಲ್ಲಿ ನೂತನ ತಂತ್ರಜಾನ ಮತ್ತು ನೀರಿನ ಬಳಕೆ ಕುರಿತು ಫ್ರಾನ್ಸ್ ದೇಶದ ನೀರಾವರಿ ನಿಪುಣರು ಅಧಿಕಾರಿಗಳಿಗೆ ತರಬೇತಿ ನೀಡುತ್ತಿದ್ದು ಮುಂಬರುವ ದಿನಗಳಲ್ಲಿ ಫ್ರಾನ್ಸ್ ದೇಶದ ತಂತ್ರಜ್ಞಾನ ಇಲ್ಲಿ ಅಳವಡಿಸುವ ಕುರಿತು ಚಿಂತನೆ ಹಾಗೂ ಹಿರಿಯ ಅಧಿಕಾರಿಗಳ ಮತ್ತು ಸರಕಾರದ ಮಟ್ಟದಲ್ಲಿ ನಡೆಯಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಅಧಿಕಾರಿ ಸುನಿಲ ಕುಮಾರ, ಗುರುರಾಜ, ಜಿ.ಡಿ. ಸಜ್ಜನ ಸೇರಿದಂತೆ ಹಲವು ಅಧಿಕಾರಿಗಳು ಜತೆಗಿದ್ದರು.

ಎಸ್‌ಎಫ್‌ಐ ಏಳನೇ ತಾಲೂಕು ಸಮ್ಮೇಳನ

ಶಹಾಪುರ: ನಗರದ ಸರಕಾರಿ ನೌಕರರ ಭವನದಲ್ಲಿ ಭಾರತ ವಿದ್ಯಾರ್ಥಿ ಫೆಡರೇಶನ್ ತಾಲೂಕ ಸಮಿತಿಯ ಏಳನೇಯ ತಾಲೂಕ ಸಮ್ಮೇಳನ ಜರುಗಿತು. ಎಸ್‌ಎಫ್‌ಐ ರಾಜ್ಯ ಸಮಿತಿ ಉಪಾಧ್ಯಕ್ಷ ರಮೇಶ ವೀರಾಪುರ ಸಮ್ಮೇಳನ ಉದ್ದೇಶಿಸಿ ಮಾತನಾಡಿ, ಸರ್ವರಿಗೂ ಶಿಕ್ಷಣ ಸರ್ವರಿಗೂ ಸಮಬಾಳು ಸಮಪಾಲು ಸಿಗಬೇಕು. ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ಸಿಗವಂತಾಗಬೇಕು. ಬಡ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳಿಂದ ವಂಚಿತರಾಗುತ್ತಿತ್ತು ಹೋರಾಟದ ಮೂಲಕ ಪಡೆಯುವಂತಾ ಗಬೇಕು. ಸಂಘಟನೆಯನ್ನು ಬಲಪಡಿಸುವುದು. ಗ್ರಾಮೀಣ ಪ್ರದೇಶದಿಂದ ಶಾಲಾ ಕಾಲೇಜಿಗೆ ಬರುವ ಮಕ್ಕಳಿಗೆ ಅನುಕೂಲಕ್ಕೆ ತಕ್ಕಂತೆ ಬಸ್ಸನ್ನು ಓಡಿಸಬೇಕು. ವಸತಿ ನಿಲಯಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಬೇಕು. ಶಾಲಾ ಕಾಲೇಜುಗಳಲ್ಲಿ ಪೋಕ್ಸ ಕಮಿಟಿ ರಚನೆ ಮಾಡಬೇಕು. ಸೆ.26 ,27 ಮತ್ತು 28 ರಂದು ಚಿಕ್ಕ ಬಳ್ಳಾಪುರದಲ್ಲಿ ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡ ಲಾಯಿತು. ತಾಲೂಕ ಅಧ್ಯಕ್ಷ್ಯ ಇನಾಮ್‌ಸಾಬ್ ನಧಾಫ್, ಉಪಾಧ್ಯಕ್ಷ ಬಸ್ಸಮ್ಮ ಹರಳಹಳ್ಳಿ, ಲಾಲು ಪ್ರಸಾದ, ಪ್ರಧಾನ ಕಾರ್ಯದರ್ಶಿ ಸುರೇಶ ಟಪ್ಪೇದಾರ, ಸಹ ಕಾರ್ಯದರ್ಶಿ ಸುದ್ದೊದನ ಬಡಿಗೇರ, ತಾಯಣ್ಣ ಟೋಕಾಪುರರನ್ನು ಆಯ್ಕೆ ಮಾಡಲಾಯಿತು. ರಾಜ್ಯ ಸಮಿತಿ ಸದಸ್ಯ ಸುಜಾತ ವೈ.ಗುಲ್ಬರ್ಗ ಇದ್ದರು. ತಾಲೂಕ ಸಮ್ಮೇಳನದ ಅಧ್ಯಕ್ಷತೆಯನ್ನು ಸುರೇಶ ಟಪ್ಪೇದಾರ ವಹಿಸಿದ್ದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು, ಯುವಕರು ಇದ್ದರು.

ಮಳೆಗೆ ಜನಜೀವನ ಅಸ್ತವ್ಯಸ್ತ

ಯಾದಗಿರಿ: ಜಿಲ್ಲೆಯಾದ್ಯಂತ ಕಳೆದ ಒಂದು ವಾರದಿಂದ ಮಳೆರಾಯ ನಿರಂತರವಾಗಿ ಸುರಿಯುತ್ತಿರುವ ಮಳೆ ಹಲವು ಭಾಗಗಳಲ್ಲಿ ಸದ್ಯಕ್ಕೆ ವಿರಾಮ ನೀಡಿದರೆ, ಇನ್ನೂ ಕೆಲವು ಕಡೆ ತನ್ನ ಆರ್ಭಟ ಮುಂದುವರಿಸಿ ಹಲವು ಆವಾಂತರ ಸೃಷ್ಠಿಯಾಗಿವೆ.

ಯಾದಗಿರಿ ನಗರ ಪ್ರದೇಶ ಹಾಗೂ ಗ್ರಾಮೀಣ ಭಾಗದಲ್ಲಿ ಮಳೆ ಮುಂದುವರೆದಿದ್ದು, ತೆಗ್ಗು ಗುಂಡಿಗಳಲ್ಲಿ ಎಂದಿನಂತೆ ನೀರು ತುಂಬಿದ್ದರಿಂದ ಸಂಚಾರಕ್ಕೆ ಕೆಲ ಕಾಲ ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಯಿತು. ಅಲ್ಲದೇ ಜನ ಜೀವನ ಅಸ್ತವ್ಯಸ್ತ ಉಂಟಾಗಿ ವ್ಯಾಪಾರ ವಹಿವಾಟಿಗೆ ತೊಡುಕು ತಂದಿತ್ತು. ಯಾದಗಿರಿ ತಾಲೂಕಿನ ಹಲವೆಡೆ ಸುರಿದ ಮಳೆಗೆ ಜನಜೀವನ ಅಸ್ತವ್ಯಸ್ತವಾಗಿದೆ. ಹಾಲಗೇರಾ ಗ್ರಾಮದ ಹಲವು ಮನೆಗಳು ಮನೆಗಳಲ್ಲಿ ನೀರು ಹೊಕ್ಕು ಜನತೆಯನ್ನು ಹೈರಾಣುಗೊಳಿಸಿದೆ. ಹತ್ತಿ, ಹೆಸರು, ತೊಗರಿ, ಭತ್ತದ ಬೆಳೆ ಜಲಾವೃತದಿಂದ ರೈತರಿಗೆ ಅಪಾರ ಪ್ರಮಾಣದ ನಷ್ಟ ಉಂಟಾಗಿದ್ದು, ಇದಕ್ಕೆ ಸೂಕ್ತ ಪರಿಹಾರ ವಿತರಣೆ ಮಾಡಬೇಕೆಂದು ರೈತರು ಸರಕಾರವನ್ನು ಆಗ್ರಹಿಸಿದ್ದಾರೆ.

ಮಲ್ಹಾರ ಗ್ರಾಮದಲ್ಲಿ ನಿರಂತರ ಮಳೆಗೆ ಮನೆ ಕುಸಿದು ಬಿದ್ದಿರುವ ಘಟನೆ ಕೂಡಾ ನಡೆದಿದೆ. ಇದೇ ರೀತಿಯಾಗಿ ಜಿಲ್ಲೆಯ ವಿವಿಧೆಡೆ ವರುಣನಾರ್ಭಟ ಮುಂದವರೆದು ನಾನಾ ಅವಾಂತರಗಳು ಸಂಭವಿಸಿವೆ. ಜಿಲ್ಲೆಯ ಹಲವು ಕಡೆ ಸೇತುವೆಗಳು ಮುಳುಗಡೆಯಾಗಿವೆ

ಶಿಕ್ಷಕರ ದಿನಾಚರಣೆ: ಖಂಡ್ರೆಗೆ ಆಹ್ವಾನ

ಭಾಲ್ಕಿ: ಬೀದರ ಸರಕಾರಿ ನೌಕರರ ಸಮುದಾಯ ಭವನದಲ್ಲಿ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೀದರ ವತಿಯಿಂದ ಸೆ18 ರಂದು ಶಿಕ್ಷಕರ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಶಿಕ್ಷಣ ಇಲಾಖೆ ಉಪನಿರ್ದೇಶಕ ಚಂದ್ರಕಾಂತ ಶಹಾಬಾದಕರ್ ತಿಳಿಸಿದ್ದಾರೆ. ಜಿಲ್ಲಾ ಪ್ರಾಂಶುಪಾಲರ ಸಂಘ ಮತ್ತು ಜಿಲ್ಲಾ ಉಪನ್ಯಾಸಕರ ಸಂಘದ ಪದಾಧಿಕಾರಿಗಳು ಶಿಕ್ಷಕರ ದಿನಾಚರಣೆ ಉದ್ಘಾಟನೆಗೆ ಆಗಮಿಸಲು ಸಚಿವ ಈಶ್ವರ ಖಂಡ್ರೆ ಅವರಿಗೆ ಆಹ್ವಾನ ಮಾಡಿದ್ದಾರೆ. ಅದೇ ರೀತಿ ಸಂಸದ ಸಾಗರ ಖಂಡ್ರೆ ಅವರಿಗೂ ಆಹ್ವಾನಿಸಿದರು. ಸಚಿವರು ಸಕರಾತ್ಮಕವಾಗಿ ಸ್ಪಂದಿಸಿ. ಜಿಲ್ಲೆಯ ಕಾಲೇಜ್ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳ ಕುರಿತು ಮಾಹಿತಿ ಪಡೆದುಕೊಂಡ ಸಚಿವರು ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಪಿಯು ಶಿಕ್ಷಣ ಅತ್ಯಂತ ಮಹತ್ವದಾಗಿದೆ.ಪಿಯು ಉಪನ್ಯಾಸಕರು ಫಲಿತಾಂಶ ವೃದ್ಧಿಸಲು ಹಗಲಿರಳು ಶ್ರಮಿಸಬೇಕು ಎಂದು ತಾಕೀತು ಮಾಡಿದರು. ಜಿಲ್ಲಾ ಪ್ರಾಂಶುಪಾಲರ ಸಂಘದ ಅಧ್ಯಕ್ಷ ಸುರೇಶ ಅಕ್ಕಣ್ಣ.ಪ್ರ.ಕಾರ್ಯದರ್ಶಿ ಡಾ.ಮನ್ಮತ ಡೋಳೆ,ರಾಜ್ಯ ಪ್ರತಿನಿಧಿ ಪ್ರಭು ಎಸ್,ಜಿಲ್ಲಾ ಉಪನ್ಯಾಸಕರ ಸಂಘದ ಅಧ್ಯಕ್ಷ ಓಂಕಾಂತ ಸೂರ್ಯವಂಶಿ.ಜಿಲ್ಲಾ ಪ್ರಾಚಾರ್ಯರ ಸಂಘಧ ಉಪಾಧ್ಯಕ್ಷ ಅಶೋಕ ರಾಜೋಳೆ. ಪ್ರಾಚಾರ್ಯರಾದ ಡಾ.ಜೈಶೇನ ಪ್ರಸಾದ. ಜೈಕಾಂತ ಗಂಗೋಜಿ. ಚಂದ್ರಕಾಂತ ಬಿರಾದಾರ. ಪ್ರಾಂಶುಪಾಲೆ ಮಲ್ಲಮ್ಮ ಪಾಟೀಲ. ಪೂ.ಕಾಲೇಜಿನ ಪ್ರಾಚಾರ್ಯ ಸುಖದೇವ ಬಿರಾದಾರ.ನಿರ್ಮಲಾ ಇತರರಿದ್ದರು.

ಅಲ್ಪಸಂಖ್ಯಾತರಿಗೆ ಆರ್ಥಿಕ ನೆರವು

ಶಹಾಪುರ: ಪರಸ್ಪರ ಸಹಕಾರ ಮನೋಭಾವದಿಂದ ಜನ್ಮ ತಾಳಿರುವ ಸಹಕಾರ ಸಂಘದ ಬ್ಯಾಂಕ್ ತನ್ನದೇ ಆದ ಹೊಸ ಮೈಲುಗಲ್ಲು ಸಾಧಿಸಿದೆ. 1,450 ಸದಸ್ಯರನ್ನು ಒಳಗೊಂಡ ಸಂಘವು 2.74ಕೋಟಿ ಬಂಡವಾಳದ ವಹಿವಾಟು ನಡೆಯಿಸಿ ಪ್ರಸಕ್ತ ಸಾಲಿನಲ್ಲಿ 7.85ಲಕ್ಷ ಲಾಭಾಂಶವನ್ನು ಹೊಂದಿದೆ.ಬೀದಿ ಬದಿ ಹಾಗೂ ಸಗಡು ವ್ಯಾಪಾರ ಕೈಗೊಳ್ಳುವ ಸದಸ್ಯರಿಗೆ ಕಡಿಮೆ ಬಡ್ಡಿ ದರದಲ್ಲಿ ಆರ್ಥಿಕ ನೆರವು ನೀಡುತ್ತಲಿದೆ ಎಂದು ದಿ.ಮುಸ್ಲಿಂ ಸೌಹಾರ್ಧ ಸಹಕಾರ ಸಂಘದ ಅಧ್ಯಕ್ಷ ಯೂಸೂಫ್ ಸಿದ್ದಕಿ ತಿಳಿಸಿದರು. ನಗರದಲ್ಲಿ ಭಾನುವಾರ ದಿ.ಮುಸ್ಲಿಂ ಸೌಹಾರ್ದ ಸಹಕಾರ ಸಂಘದ 30ನೇ ವಾರ್ಷಿಕೋತ್ಸವ ಸಭೆಯಲ್ಲಿ ಅವರು ಮಾತನಾಡಿದರು, ಅಲ್ಪಸಂಖ್ಯಾತರಿಗೆ ನೆರವು ನೀಡಬೇಕು ಎಂದು ಉದ್ದೇಶದಿಂದ ಅಂದಿನ ಬ್ಯಾಂಕಿನ ಅಧ್ಯಕ್ಷ ಇನಾಯಿತ್ ರಹಮಾನ ಸಿದ್ದಕಿ ಬ್ಯಾಂಕ್ ಸ್ಥಾಪನೆ ಮಾಡಿದರು. ಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷ ಅಬಿದ್ ಹುಸೇನ ಜಖಿಮಿ ಹಾಗೂ ನಿರ್ದೇಶಕರಾದ ನೂರಲ್ ಹಸನ್ ಇನಾಮದಾರ, ಅವದ್ ಬಿನ್ ಅಮರ ಚಾವುಸ್, ಇಷ್ತಿಕಾರ ಖುರೇಶಿ, ಇಮ್ತಿಯಾಜ್ ಶೇರಬಾಹಿ,ಅಬ್ದುಲ ಮತೀನ ಸಗರಿ, ಶೇಖ್ ಅಬೀದ್ ಬಡೇಘರ್ ಕಾನೂನು ಸಲಹೆಗಾರ ಸಯ್ಯದ ಇಬ್ರಾಹಿಂಸಾಬ್ ಜಮದಾರ ಹಾಗೂ ಸಯ್ಯದ ಖಾದ್ರಿ, ರಫೀಕ್ ಚೌದ್ರಿ, ಅಮರ ಬಿನ್ ಚಾವುಸ್,ಸಯ್ಯದ ಸಫಿಯುದ್ದೀನ್ ಖಾದ್ರಿ, ಮತ್ತು ಷೇರು ಸದಸ್ಯರು ಇದ್ದರು.

ಸಮಾಚಾರ ಸಣ್ಣದಲ್ಲ

ಶ್ರೀರಾಮ ಸೇನಾಯಿಂದ ಗಣೇಶ್ ಪ್ರತಿಷ್ಠಾಪನೆ

ಜೇವರ್ಗಿ: ತಾಲೂಕಿನ ಎಪಿಎಂಸಿ ಆವರಣದಲ್ಲಿ ಶ್ರೀರಾಮ ಸೇನಾ ಸಂಘಟನೆ ವತಿಯಿಂದ ಗಣೇಶ್ ಪ್ರತಿಷ್ಠಾಪನೆ ಜರುಗಿತು. ಆಂದೋಲದ ಕರುಣೇಶ್ವರ ಮಠದ ಪೂಜ್ಯರಾದ ಶ್ರೀ ಸಿದ್ದಲಿಂಗ ಸ್ವಾಮಿಗಳು ಗಣೇಶನಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಕಲಬುರ್ಗಿ ಗ್ರಾಮೀಣ ಬಿಜೆಪಿ ಜಿಲ್ಲಾಧ್ಯಕ್ಷರಾದ ಶಿವರಾಜ್ ಪಾಟೀಲ್ ರದ್ದೇವಡಗಿ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ರೇವಣಸಿದ್ದಪ್ಪ ಸಂಕಲಿ, ಮಲ್ಲಶೆಟ್ಟಪ್ಪಗೌಡ ಹಿರೇಗೌಡರ್, ಶ್ರೀರಾಮ ಸೈನ್ಯ ಸಂಘಟನೆ ತಾಲೂಕ ಅಧ್ಯಕ್ಷರಾದ ಮಲ್ಕಣ್ಣ ಹಿರಿ ಪೂಜಾರಿ ಚನ್ನೂರು, ಬಾಗೇಶ್ ಹೋತಿನಮಡು, ಸಾಗರ್ ಬಡಿಗೇರ್, ಉಮೇಶ್ ರಾಥೋಡ್, ಈಶ್ವರ್ ಹಿಪ್ಪರಗಿ, ಭೀಮು ಖಾದ್ಯಪುರ, ಬಾಗೇಶ್, ರಮೇಶ್ ಮಕಾಶಿ, ಪದಾಧಿಕಾರಿಗಳು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ಡಿಸಿ ಭೇಟಿ, ಬೆಳೆ ಹಾನಿ ಪರಿಶೀಲನೆ

ಕಲಬುರಗಿ: ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ರವಿವಾರ ಸೇಡಂ ತಾಲೂಕಿನ ಮಳಖೇಡ್ ಗ್ರಾಮಕ್ಕೆ ಭೇಟಿ ನೀಡಿ ನೆರೆ ಹಾವಳಿಯಿಂದ ಹಾನಿಗೊಳಗಾದ ಬೆಳೆ ಹಾನಿ ಪರಿಶೀಲಿಸಿದರು. ನೆರೆ ಹಾವಳಿಯಿಂದ ತತ್ತರಿಸಿದ ಪ್ರತಿಯೊಂದು ಹೊಲಕ್ಕೆ ಭೇಟಿ ನೀಡಿ ಬೆಳೆ ಹಾನಿ ಸಮೀಕ್ಷೆ ಕೈಗೊಂಡು ಕೂಡಲೆ ವರದಿ ನೀಡುವಂತೆ ಸ್ಥಳದಲ್ಲಿದ್ದ ತಹಸೀಲ್ದಾರ್ ಶ್ರೇಯಾಂಕಾ ಧನಶ್ರೀ ಅವರಿಗೆ ಸೂಚಿಸಿದರು. ಇದಕ್ಕು ಮುನ್ನ ಜಿಲ್ಲಾಧಿಕಾರಿಗಳು ಕಾಗಿಣಾ ನದಿಗೆ ಅಡ್ಡಲಾಗಿ ನಿರ್ಮಿಸಿ ಇತ್ತೀಚೆಗೆ ಲೋಕಾರ್ಪಣೆಗೊಳಿಸಿದ ಮಳ ಖೇಡ್ ಸೇತುವೆ, ಮಳೆಯಿಂದ ಕುಸಿದ ಮಳಖೇಡ್ ಕೋಟೆ ವೀಕ್ಷಿಸಿದರು. ಮಳಖೇಡ್ ಗ್ರಾಮದಲ್ಲಿ ಮಳೆಯಿಂದ ಕುಸಿದ ಮನೆಯೊಂದಕ್ಕೂ ಭೇಟಿ ನೀಡಿ ಸಂತ್ರಸ್ತರ ಅಹವಾಲು ಆಲಿಸಿದ ಅವರು, ಸಕಾರದ ಮಾರ್ಗಸೂಚಿಯಂತೆ ಪರಿಹಾರ ನೀಡಲಾಗುವುದೆಂದರು. ಸೇಡಂ ಸಹಾಯಕ ಆಯುಕ್ತ ಪ್ರಭುರೆಡ್ಡಿ, ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್, ತಾಲೂಕ ಪಂಚಾಯತ್ ಇ.ಓ ಚೆನ್ನಪ್ಪ ರಾಯಣ್ಣನವರ, ಸಹಾಯಕ ಕೃಷಿ ನಿರ್ದೇಶಕ ಹಂಪಣ್ಣ ಸೇರಿದಂತೆ ಅನೇಕ ಅಧಿಕಾರಿಗಳಿದ್ದರು.

ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ ಇಂದು

ಕಲಬುರಗಿ: ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಬೆಂಗಳೂರಿನಿಂದ ವಿಮಾನದ ಮೂಲಕ ಸೆಪ್ಟೆಂಬರ್ 9 ರಂದು ಸೋಮವಾರ ಬೆಳಗ್ಗೆ 9.20 ಗಂಟೆಗೆ ಕಲಬುರಗಿಗೆ ಆಗಮಿಸುವರು. ನಂತರ ಅಂದು ಬೆಳಿಗ್ಗೆ 11 ಗಂಟೆಗೆ ಕಲಬುರಗಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇದೇ ಸೆಪ್ಟೆಂಬರ್ 17 ರಂದು ಕಲಬುರಗಿಯಲ್ಲಿ 19ನೇ ಸಚಿವ ಸಂಪುಟ ಸಭೆ ಜರುಗಲಿರುವ ಹಿನ್ನೆಲೆಯಲ್ಲಿ ಪೂರ್ವ ಸಿದ್ಧತಾ ಸಭೆಯಲ್ಲಿ ಭಾಗವಹಿಸುವರು. ನಂತರ ಸಚಿವರು ನಿಗದಿತ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಕೆಡಿಪಿ ಸಭೆ ತಾತ್ಕಾಲಿಕ ಮುಂದೂಡಿಕೆ

ಕಲಬುರಗಿ: ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಅಧ್ಯಕ್ಷತೆ ಯಲ್ಲಿ ಇದೇ ಸೆ.9 ರಂದು ಕಲಬುರಗಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ

ನಿಗದಿಯಾಗಿದ್ದ ಕರ್ನಾಟಕ ಅಭಿವೃದ್ಧಿ ಕಾರ್ಯ ಕ್ರಮಗಳ (ಕೆ.ಡಿ.ಪಿ) ತ್ರೈಮಾಸಿಕ ಸಭೆಯು ತಾತ್ಕಾಲಿ ಕವಾಗಿ ಮುಂದೂಡಲಾಗಿದೆ ಎಂದು ಜಿಪಂ ಸಿ.ಇ.ಓ ಭಂವರ್ ಸಿಂಗ್ ಮೀನಾ ತಿಳಿಸಿದ್ದಾರೆ. ಇದೆ ಸೆ.17 ರಂದು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆಸಲು ಉದ್ದೇಶಿಸಿರುವುದರಿಂದ ಸದರಿ ಸಚಿವ ಸಂಪುಟ ಸಭೆಗೆ ಪೂರ್ವ ತಯ್ಯಾರಿ ಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಸಭೆ ಮುಂದೂಡುವಂತೆ ಸಚಿವರು ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ಈ ಸಭೆ ಮುಂದೂಡಲಾಗಿದೆ ಎಂದು ತಿಳಿಸಲಾಗಿದೆ.

ಅಗಲಿದ ಜೀವ

ವಿವೇಕಾನಂದ ಬೆಟಗೇರಿ

ಸೇಡಂ: ತಾಲೂಕಿನ ಮಳಖೇಡ ಗ್ರಾಮದಲ್ಲಿರುವ ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್ ಮಳಖೇಡ್ ಕಾರ್ಖಾನೆಯ ಇಆರ್-ಎಸ್.ಎಚ್ ಆಗಿ

ಕಾರ್ಯನಿರ್ವಹಿಸುತಿದ್ದ ವಿವೇಕಾನಂದ ವಿ.ಬೆಟಗೇರಿ ಅನಾರೋಗ್ಯದ ಕಾರಣ ಭಾನುವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೆ ನಿಧಾನರಾಗಿದ್ದಾರೆ. ವಿವೇಕಾನಂದ ಅವರ ನಿಧಾನಕ್ಕೆ ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್ ಕಾರ್ಖಾನೆಯ ಉಪಾಧ್ಯಕ್ಷ ಹಾಗೂ ಎಫ್.ಎಚ್-ಎಚ್.ಆರ್ ಕೆ.ವಿ.ವಿ.ಎಸ್ ನಾರಾಯಣ್, ಎಚ್.ಆರ್ ಮುಖ್ಯಸ್ಥ ನಾಗರಾಜ್ ಸುತಾರ, ಸ್ಟೋರ್ ಹೆಡ್ ವಿ.ವಿ ರಮಣ್ಣ, ರಾಮಚಂದ್ರ ಜೋಶಿ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ. ಮೃತರ ತವರೂರಾದ ಗೋಕಾಕ್ ಪಟ್ಟಣಕ್ಕೆ ಆಂಬುಲೆನ್ಸ್ ಶವ ಸಾಗಿಸಲಾಗಿದ್ದು, ಅಂತಿಮ ನಮನ ಬಳಿಕ ಸ್ವಂತ ಜಮೀನಿನಲ್ಲಿ ಅಂತಿಮ ಸಂಸ್ಕಾರ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

ಸಮಾಲೋಚನಾ ಸಭೆ । ಕಲ್ಯಾಣದ ರಚನಾತ್ಮಕ ಪ್ರಗತಿಯ ಬಗ್ಗೆ ಹೋರಾಟ ಸಮಿತಿ ಆಗ್ರಹ

ಕಲ್ಯಾಣದ ಸಮಸ್ಯೆ ಚರ್ಚಿಸಲಿ

ವಿಶ್ವಾವಾಣಿ ಸುದ್ದಿಮನೆ ಕಲಬುರಗಿ

ನಗರದಲ್ಲಿ ಸೆ.17ರಂದು ಸಂಪುಟ ಸಭೆ ನಡೆಯಲು ನಿರ್ಧಾರ ಕೈಗೊಂಡಿರುವುದಕ್ಕೆ ಸ್ವಾಗತಾರ್ಹ. ಆದರೆ, ಸಂಪುಟ ಸಭೆಯಲ್ಲಿ ಕಲ್ಯಾಣ ಕರ್ನಾಟಕದ ಜ್ವಲಂತ ಸಮಸ್ಯೆಗಳ ನಿವಾರಣೆಯ ಬಗ್ಗೆ ಮತ್ತು ರಚನಾತ್ಮಕ ಪ್ರಗತಿಗೆ ಸಂಬಂಧಿಸಿದ ವಿಷಯಗಳಿಗೆ ವಿಶೇಷ ಸ್ಪಂದನೆ ನೀಡಬೇಕು ಎಂದು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಗೌರವಾಧ್ಯಕ್ಷ ಬಸವರಾಜ ದೇಶಮುಖ, ಅಧ್ಯಕ್ಷ ಲಕ್ಷ್ಮಣ ದಸ್ತಿ ಸರಕಾರಕ್ಕೆ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಸಂಪುಟ ಸಭೆಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ರಚನಾತ್ಮಕ ಪ್ರಗತಿಗೆ ಮತ್ತು 371(ಜೆ) ಕಲಂ ಪರಿಣಾಮಕಾರಿ ಅನುಷ್ಠಾನಕ್ಕೆ ಪ್ರತ್ಯೇಕ ಸಚಿವಾಲಯ ಮಾಡಬೇಕು ಎಂದು ಆಗ್ರಹಿಸಿದರು.

371ಜೆ 12(ಎ) ಪ್ರಕಾರ ವಿಶೇಷ ಸ್ಥಾನಮಾನದಡಿ ಬರುವ ಸಮಸ್ಯೆಗಳ ಮತ್ತು ಅಪಿಲುಗಳ ನಿವಾರಣೆಗೆ ವಿಭಾಗೀಯ ಕೇಂದ್ರ ಕಲಬುರಗಿಯಲ್ಲಿ ಪ್ರತ್ಯೇಕ ಟ್ರಿಬ್ಯೂನಲ್ ಸ್ಥಾಪಿಸಬೇಕು, 371ಜೆ ನಿಯಮಗಳಲ್ಲಿ ಉಲ್ಲೇಖಿಸಿರುವಂತೆ ಸುಮಾರು 30 ನೆನೆಗುದಿಗೆ ಬಿದ್ದಿರುವ ಅಂಶಗಳನ್ನು ಅನುಷ್ಠಾನಗೊಳಿಸಬೇಕು, ಕಲ್ಯಾಣ ಕರ್ನಾಟಕ ಪ್ರದೇಶದ ರಚನಾತ್ಮಕ ಪ್ರಗತಿಗೆ ಮತ್ತು ಪ್ರಾದೇಶಿಕ ಅಸಮತೋಲನೆ ನಿವಾರಣೆಗೆ ಕೆಕೆಆರ್‌ಡಿಬಿಯಿಂದ ದೂರದೃಷ್ಟಿಕೋನ ವನ್ನಿಟ್ಟುಕೊಂಡು 5 ವರ್ಷದ ಕ್ರೀಯಾ ಯೋಜನೆಯನ್ನು ರಚಿಸಿ ಕಾಲಮಿತಿಯಲ್ಲಿ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು, ನಂಜುಂಡಪ್ಪ ವರದಿ ಮಾನದಂಡವಾಗಿ ಇಟ್ಟುಕೊಂಡು ಕಲ್ಯಾಣ ಕರ್ನಾಟಕದ ಒಂದು ಗ್ರಾಪಂ ಘಟಕ ಮಾಡಿಕೊಂಡು ಮೂಲ ಸೌಕರ್ಯಗಳು, ಆರೋಗ್ಯ ಸೇವೆಗಳು, ಆದಾಯದ ಮೂಲಗಳು ಸೇರಿದಂತೆ ಪ್ರಮುಖ ಸೂಚ್ಯಂಕಗಳನ್ನು ಗಮನದಲ್ಲಿಟ್ಟುಕೊಂಡು ವೈಜ್ಞಾನಿಕ ರೀತಿಯಲ್ಲಿ ವರದಿ ತಯರಿಸಿಕೊಂಡು ಆ ವರದಿಯ ಆಧಾರದಂತೆ ಕೆಕೆಆರ್‌ಡಿಬಿಯ ಮೂಲಕ 5 ವರ್ಷದ ವೈಜ್ಞಾನಿಕ ಕ್ರೀಯಾ ಯೋಜನೆಯನ್ನು ರಚಿಸಬೇಕು ಎಂದು ಆಗ್ರಹಿಸಿದರು. ಈಗಾಗಲೇ ಮುಖ್ಯಮಂತ್ರಿಯವರು ಕೇಂದ್ರ, ಸರಕಾರಕ್ಕೆ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಕೇಳಿರುವ ಪ್ಯಾಕೇಜ್ ಹಣಕ್ಕೆ ಪೂರಕವಾಗಿ ಕಲಬುರಗಿ ಕ್ಯಾಬಿನೆಟ್ ಮುಖಾಂತರ ಕೇಂದ್ರಕ್ಕೆ 10 ಸಾವಿರ ಕೋಟಿ ಹಣ ವಿಶೇಷ ಪ್ಯಾಕೇಜ್ ನೀಡಲು ಒತ್ತಾಯಿಸಬೇಕು, ಕೆಕೆಆರ್‌ಡಿಬಿಯಲ್ಲಿ ಪಾರದರ್ಶಕತೆಯಂತೆ ಗುಣಮಟ್ಟದ ಕಾರ್ಯಗಳು ನಡೆಯಲು ಮತ್ತು ವಿಶೇಷ ನಿಗಾ ವಹಿಸಲು ಮಂಡಳಿಯಡಿ ಮೇಲ್ವಿಚಾರಣಾ ಸಮಿತಿ, ಮೌಲ್ಯಮಾಪನ ಸಮಿತಿ, ಜಾಗೃತದಳ ರಚಿಸಬೇಕು, ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಗುಳೆ ಹೋಗುವುದನ್ನು ತಪ್ಪಿಸಲು ಕೃಷಿ ಕ್ಷೇತ್ರದಲ್ಲಿ ಮತ್ತು ಕೃಷಿಯೇತರ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಗೆ ವಿಶೇಷ ಆದ್ಯತೆ ನೀಡಬೇಕು, ಕೃಷ್ಣಾ ಜಲಾನಯನ ಪ್ರದೇಶದ ಬೃಹತ್ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕೇಂದ್ರ ಸರಕಾರದ ಯೋಜನೆಯಡಿ ಸೇರಿಸಲು ಈಗಾಗಲೆ ರಾಜ್ಯ ಸರಕಾರ ಮನವರಿಕೆ ಮಾಡಿರುವಂತೆ, ಇದಕ್ಕೆ ಪೂರಕವಾಗಿ ಕಲಬುರಗಿ ಸಂಪುಟದಿಂದ ಅಧಿಕೃತ ಒತ್ತಡ ಹಾಕಬೇಕು ಎಂದರು.

ಕೃಷ್ಣಾ ಮತ್ತು ಗೋದಾವರಿ ಕಣಿವೆ ಪ್ರದೇಶದ ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳು ಕಾಲಾವಧಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಪ್ರೊ.ಆರ್.ಕೆ.ಹುಡಗಿ, ಪ್ರೊ. ಬಸವರಾಜ ಕುಮನೂರ, ಡಾ.ಮಾಜಿದ್ ದಾಗಿ, ಮನೀಷ್ ಜಾಜು, ಡಾ.ಗಾಂಧೀಜಿ ಮೊಳಕೆರೆ, ಸುನೀಲ್ ಕುಲಕರ್ಣಿ, ಅಶೋಕ ಗುರುಜಿ, ಅಬ್ದುಲ ರಹೀಂ, ಅಸ್ಲಂ ಚೌಂಗೆ ಇತರರಿದ್ದರು.

ರೈಲ್ವೆ ವಿಭಾಗೀಯ ಕಚೇರಿ ಸ್ಥಾಪನೆಗೆ ಕೇಂದ್ರಕ್ಕೆ ಒತ್ತಡ ಹೇರಲಿ

13. ಕಲ್ಯಾಣ ಕರ್ನಾಟಕ ಪ್ರದೇಶದ ಪ್ರವಾಸಿ ತಾಣಗಳು ಅಭಿವೃದ್ದಿಗೊಳಿಸಲು ನಿರ್ಧಾರ ಕೈಗೊಳ್ಳಬೇಕು, ಕಲಬುರಗಿಯ ರೈಲ್ವೆ ವಿಭಾಗೀಯ ಕಚೇರಿ ಸ್ಥಾಪನೆಗೆ ಸಂಪುಟ ಸಭೆಯಿಂದ ಕೇಂದ್ರಕ್ಕೆ ಒತ್ತಡ ತರಬೇಕು ಎಂದು ಸಮಿತಿ ಅಧ್ಯಕ್ಷ ಲಕ್ಷ್ಮಣ ದಸ್ತಿ ಆಗ್ರಹಿಸಿದರು. ಬಸವಕಲ್ಯಾಣವನ್ನು ಜಿಲ್ಲಾ ಕೇಂದ್ರ ಎಂದು ಘೋಷಣೆ ಮಾಡಬೇಕು, ಸೇಡಂನ್ನು ರಾಷ್ಟ್ರಕೂಟ ಜಿಲ್ಲೆ ಎಂದು ಘೋಷಣೆ ಮಾಡಬೇಕು, ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಪ್ರತಿ ವರ್ಷ ಅರ್ಥಪೂರ್ಣವಾಗಿ ಆಚರಿಸಲು ಮೈಸೂರು ಉತ್ಸವ ಮಾದರಿಯಲ್ಲಿ ವಿಶೇಷ ಆದ್ಯತೆ ನೀಡಬೇಕು. ತೊಗರಿ ಮಂಡಳಿಗೆ ಬಲಿಷ್ಠ ಸ್ವರೂಪ ನೀಡಿ, ಅದರ ಮುಖಾಂತರ ಬೆಳೆಗೆ ಪ್ರೋತ್ಸಾಹ ಧನ, ಬೆಂಬಲ ಬೆಲೆ ನೀಡಿ ಖರೀದಿಸಿ ಇದರ ಉತ್ಪನ್ನಗಳ ವಿವಿಧ ಸ್ವರೂಪದ ಮಾರುಕಟ್ಟೆ ನಿರ್ಮಾಣ ಮಾಡಬೇಕು. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಹಸಿರು ಕಾರಿಡಾರ್ ನಿರ್ಮಾಣಕ್ಕೆ ಕಾಲಮಿತಿಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

16 ಅಂಶಗಳ ಕುರಿತು ಚರ್ಚೆ

ಇದಕ್ಕೂ ಮುನ್ನ, ಕಲ್ಯಾಣ ಕರ್ನಾಟಕ ಪ್ರದೇಶದ ರಚನಾತ್ಮಕ ಪ್ರಗತಿ ಮತ್ತು 371ನೇ(ಜೆ) ಕಲಂ ಪರಿಣಾಮಕಾರಿ ಅನುಷ್ಠಾನ ಸೇರಿದಂತೆ ಕಲ್ಯಾಣ ಕರ್ನಾಟಕದ ಅಭಿವೃದ್ದಿಪರ ಸುಮಾರು 16 ಅಂಶಗಳ ವಿಷಯಗಳ ಕುರಿತು ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರರಾದ ಬಿ.ಆರ್. ಪಟೇಲವರೊಂದಿಗೆ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ವತಿಯಿಂದ ಕಲ್ಯಾಣದ ಪರಿಣಿತ ತಜ್ಞರ, ಚಿಂತಕರ ಹಾಗೂ ಪ್ರಮುಖರ ಸಮಲೋಚನಾ ಸಭೆ ಐವಾನ್-ಇ-ಶಾಹಿ ಅತಿಥಿ ಗೃಹದಲ್ಲಿ ನಡೆಯಿತು.

ಉದ್ದಿನ ಕಾಳು,ಸೋಯಾಬಿನ್ ಖರೀದಿ ಪ್ರಕ್ರಿಯೆ ಪ್ರಾರಂಭ

ಬೆಂಬಲಬೆಲೆ ಯೋಜನೆಯ ಲಾಭ ಪಡೆದುಕೊಳ್ಳಲು ರೈತರಿಗೆ ಮನವಿ

ಕಲಬುರಗಿ: 2024-25 ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಉದ್ದಿನ ಕಾಳು ಹಾಗೂ ಸೋಯಾಬಿನ್ ಖರೀದಿಗೆ ರಾಜ್ಯ ಸರಕಾರ ಆದೇಶ ಹೊರಡಿಸಿದ್ದು ರೈತರು ಯೋಜನೆಯ ಲಾಭ

ಪಡೆದುಕೊಳ್ಳುವಂತೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಮನವಿ ಮಾಡಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಉದ್ದಿನ ಕಾಳು ಹಾಗೂ ಸೋಯಾಬಿನ್ (ಹಳದಿ) ಖರೀದಿ ಮಾಡುವ ಉದ್ದೇಶದಿಂದ ಸರಕಾರ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತವನ್ನು ನೋಡಲ್ ಏಜೆನ್ಸಿಯನ್ನಾಗಿ ನೇಮಿಸಿದೆ. ಈ ಹಿನ್ನೆಲೆ ಯಲ್ಲಿ, ಕಲಬುರಗಿ ಜಿಲ್ಲೆಯಲ್ಲಿ ಪರಿಣಿತ ಹೊಂದಿದ 29 ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ಅಥವಾ ರೈತ ಉತ್ಪಾದಕ ಸಂಘಗಳನ್ನು ಗುರಿತಿಸಲಾಗಿದೆ. ಹಾಗಾಗಿ, ತಕ್ಷಣ ರೈತರು ನೋಂದಣಿ ಕಾರ್ಯವನ್ನು ಮಾಡಕೊಳ್ಳಬೇಕು. ಈ ಪ್ರಕ್ರಿಯೆಗೆ ಸೆಪ್ಟೆಂಬರ್ 07 ರಿಂದ ಅಕ್ಟೋಬರ್ 20 ರವರೆಗೆ ನಿಗದಿಪಡಿಸಲಾಗಿದ್ದು ಸೆಪ್ಟೆಂಬರ್ 7 ರಿಂದ ಪ್ರಾಥಮಿಕ ಕೃಷಿ ಸಹಕಾರ ಸಂಘಗಳಲ್ಲಿ ಖರೀದಿ ಮಾಡಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

ಮುಂದುವರೆದು ಹೇಳಿರುವ ಸಚಿವರು ಜಿಲ್ಲೆಯ ರೈತರು ಉದ್ದಿನ ಬೇಳೆ ಹಾಗೂ ಸೋಯಾಬಿನ್ ಬೆಳೆಗಳನ್ನು ನಿಗದಿಪಡಿಸಲಾದ ಕೇಂದ್ರಗಳಲ್ಲಿ ಮಾರಾಟ ಮಾಡಬಹುದಾಗಿದೆ.

ನಿಗದಿಪಡಿಸಿದ ಕೇಂದ್ರಗಳು

ಕಲಬುರಗಿ

1) ಮಹಾಗಾಂವ್, 2) ದೇವರ ದಾಸಿಮಯ್ಯ ರೈತ ಉತ್ಪಾದಕರ ಕಂಪನಿ ಕಮಲಾಪುರ, 3) ಗ್ರಾಮೀಣ ತೋಟಗಾರಿಕೆ ರೈತ ಉತ್ಪಾದಕರ ಕಂಪನಿ ಕಮಲಾಪುರ.

ಆಳಂದ

1) ಪಡಸಾವಳಗಿ 2) ಹಿರೋಳಿ, 3) ಮನ್ನಳ್ಳಿ, 4) ಕಜೂರಿ, 5) ಯಳಸಂಗಿ, 6)ಕವಲಗಾ, 7) ಕಿಣ್ಣಿ ಸುಲ್ತಾನ, 8) ಮಡಿಕಿ, 9) ಅಂಬಲಗಾ, 10) ರುದ್ರವಾಡಿ, 11) ಹೋದಲೂರು, 12) ನಿರುಡಗಿ, 13) ಬೋದನ, 14) ಸರಸಂಬಾ ಹಾಗೂ 15) ತಡಕಲ್.

ಚಿತ್ತಾಪುರ

1) ಕಾಳಗಿ, 2) ಟೆಂಗಳಿ, 3) ನೀಲಕಂಠ ಕಾಳೇಶ್ವರ ರೈತ ಉತ್ಪಾದಕರ ಸಂಸ್ಥೆ ಕಾಳಗಿ.

ಚಿಂಚೋಳಿ

1) ಚಿಂಚೋಳಿ, 2) ಸಾಲೆಬಿರನಳ್ಳಿ, 3) ಕುಂಚಾವರಂ, 4) ಐನಾಪುರ, 5) ಸುಲೇಪೇಟ್, 6) ಚಿಮ್ಮನಚೋಡ್, 7) ಕೊಡ್ಲಿ ಹಾಗೂ 8) ಶಾದಿಪುರ.

ಅಯೋಧ್ಯ ರಾಮರೂಪಿ ಗಣೇಶ ಪ್ರತಿಷ್ಠಾಪನೆ

ಕಲಬುರಗಿ: ಹಿಂದು ಮಹಾಗಣಪತಿ ಸಮಿತಿ ಕಲಬುರಗಿ ವತಿಯಿಂದ ನಗರದ ಐತಿಹಾಸಿಕ ಕೋಟೆಯ ಮುಂಭಾಗದಲ್ಲಿ ಬಾಲ ರಾಮನ ಅವತಾರದಲ್ಲಿರುವ 6 ಅಡಿಯ ಎತ್ತರದ ಹಿಂದು ಮಹಾಗಣಪತಿ ಯನ್ನು ಶನಿವಾರ ವಿಶೇಷ ಪೂಜೆಗೈಯುವ ಮೂಲಕ ಅದ್ದೂರಿಯಾಗಿ ಪ್ರತಿಷ್ಠಾಪನೆ ಮಾಡಲಾಯಿತು.

ಕಳೆದ ಜನೇವರಿ 2024ರಲ್ಲಿ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಹಾಗೂ ಬಾಲ ರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆ, ಅಯೋಧ್ಯೆಯ ಸವಿನೆನಪಿಗಾಗಿ ಈ ಬಾರಿಯ ಅಲಂಕಾರವನ್ನು ವಿಶೇಷವಾಗಿ ರಾಮ ಮಂದಿರ ಹಾಗೂ ಬಾಲರಾಮನ ರೂಪದಲ್ಲಿ ಹಿಂದು ಮಹಾಗಣಪತಿಯ ಪ್ರತಿಷ್ಟಾಪನೆ ಮಾಡಲಾಯಿತು.

ಇದಕ್ಕೂ ಮುನ್ನ ನಗರದ ಶರಣಬಸವೇಶ್ವರ ದೇವಸ್ಥಾನದಿಂದ ಸಕಲ ವಾದ್ಯಗಳೊಂದಿಗೆ ಭವ್ಯ ಬಾಲರಾಮನ ಅವತಾರದಲ್ಲಿರುವ ಹಿಂದು ಮಹಾಗಣಪತಿಯ ಅದ್ದೂರಿ ಮೆರವಣಿಗೆ ಮಾಡುವ ಮೂಲಕ ಕೋಟೆಯ ಮುಂಭಾಗದಲ್ಲಿ ಪ್ರತಿಷ್ಟಾಪನೆ ಮಾಡಲಾಯಿತು.

ಇಂದಿನಿಂದ 21 ದಿನಗಳ ಕಾಲ ದಿನನಿತ್ಯ ಅರ್ಥಪೂರ್ಣವಾಗಿರುವ ಹತ್ತು ಹಲವು ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿದ್ದು, ಸಮಸ್ತ ಹಿಂದೂ ಬಾಂಧವರು ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಸಮಿತಿಯ ಸಂಸ್ಥಾಪಕ, ಅಧ್ಯಕ್ಷ ನಾಗೇಂದ್ರ ಕಾಬಡೆ ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಹಿಂದು ಮಹಾಗಣಪತಿ ಸಮಿತಿ ಗೌರವಾಧ್ಯಕ್ಷ ಮಲ್ಲಿಕಾರ್ಜುನ ಗಂಗಾ, ಸುರೇಶ್ ಟೆಂಗಳಿ, ಸಿದ್ದರಾಜ ಬಿರಾದಾರ, ಶೇಖರ ದೇವಾನಂದ, ಸುಮಂಗಲಾ ಚಕ್ರವರ್ತಿ, ಬಿಜೆಪಿ ಶಾಸಕ ಬಸವರಾಜ ಮತ್ತಿಮಡು, ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ್, ಶಿವರಾಜ್ ಪಾಟೀಲ್ ರದ್ದೇವಾಡಗಿ, ನಿತೀನ ಗುತ್ತೇದಾರ್, ಉಮೇಶ್ ಪಾಟೀಲ್, ಹರ್ಷಾನಂದ ಗುತ್ತೇದಾರ್, ಶಿವಯೋಗಿ ನಾಗೇನಹಳ್ಳಿ ಸೇರಿದಂತೆ ಹಿಂದು ಮಹಾಗಣಪತಿ ಸಮಿತಿಯ ಹಲವು ಸದಸ್ಯರು ಉಪಸ್ಥಿತರಿದ್ದರು.

ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ

ಆಳಂದ: ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರದ ಸಾಧನೆಗಳನ್ನು, ಅಭಿವೃದ್ಧಿ ಕಾರ್ಯಗಳನ್ನು ಮನೆ ಮನೆಗೆ ತೆರಳಿ ಮನವರಿಕೆ ಮಾಡಿಕೊಡುವುದರ ಜೊತೆಗೆ ಸದಸ್ಯತ್ವ ನೊಂದಣಿ ಮಾಡಲಾಗುತ್ತಿದೆ ಎಂದು ಮಾಜಿ ಶಾಸಕ ಸುಭಾಷ ಆರ್. ಗುತ್ತೇದಾರ ಹೇಳಿದರು.

ತಾಲೂಕಿನ ಮಾದನಹಿಪ್ಪರಗಾ ಗ್ರಾಮದಲ್ಲಿ ನಡೆದ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದ ಮಾತನಾಡಿದ ಅವರು ಪಕ್ಷದ ಕಾರ್ಯಕರ್ತರು ಮನೆ ಮನೆ ತೆರಳಿ ಹೆಚ್ಚಿನ ರೀತಿಯಲ್ಲಿ ಬಿಜೆಪಿ ಸದಸ್ಯತ್ವ ಪಡೆಯಲು ಸಕ್ರೀಯವಾಗಿ ಕಾರ್ಯನಿರ್ವಹಿಸಿ ಎಂದರು. ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಕಂದಗೂಳೆ, ಯಶವಂತರಾವ ಪಾಟೀಲ ಇಕ್ಕಳಕಿ, ಶಿವಪ್ಪ ಕೋಳಶೆಟ್ಟಿ, ಬಸವರಾಜ ಸಾಣಕ, ಸುಭಾಷ ಪಾಟೀಲ, ಎಸ್‌ಸಿ ಮೋರ್ಚಾ ಅಧ್ಯಕ್ಷ ರಾಜಕುಮಾರ ಘೂಳ, ಸೀತಾರಾಮ ಜಮಾದಾರ, ಪ್ರಕಾಶ ಮಾನೆ ಸೇರಿದಂತೆ ಇದ್ದರು.

ಚಿಂಚೋಳಿ ಪುರಸಭೆ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಾಳೆ

ಕಾಂಗ್ರೆಸ್ ಗೆ ಒಲಿಯುವುದೇ ಅಧ್ಯಕ್ಷ ಸ್ಥಾನ?

ಚಿಂಚೋಳಿ: ಸೆ.10 ರಂದು ಚಿಂಚೋಳಿ ಪುರಸಭೆ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ ಎಂದು ಚುನಾವಣಾಧಿಕಾರಿಯಾಗಿರುವ

ಚಿಂಚೋಳಿ ತಹಸೀಲ್ದಾರ್ ದಿನಾಂಕ ನಿಗದಿಪಡಿಸಿ ಈಗಾಗಲೇ ಚುನಾವಣೆ ನೋಟಿಸ್ ಹೊರಡಿಸಲಾಗಿದೆ.

ನಾಮಪತ್ರ ಸಲ್ಲಿಕೆಗೆ ಸೆ.10ರಂದು ಬೆಳಗ್ಗೆ 11 ಗಂಟೆ ವರೆಗೂ ಅವಕಾಶ ಕಲ್ಪಿಸಿಕೊಡಲಾಗಿದ್ದು, ಮಧ್ಯಾಹ್ನ 1 ಗಂಟೆಗೆ ಸಭೆ ಪ್ರಾರಂಭವಾಗಲಿದೆ. 1.10ಕ್ಕೆ ಹಾಜರಾತಿ ಮತ್ತು ಕೋರಂ ನಿರ್ಧಾರವಾಗಲಿದೆ. 1.10 ರಿಂದ 1.20 ರವರೆಗೆ ನಾಮ ಪತ್ರ ಪರಿಶೀಲನೆ ನಡೆಯಲಿದೆ. 1.20 ರಿಂದ 1.30 ರವರೆಗೆ ನಾಮಪತ್ರ ಹಿಂಪಡೆಯಲು ಅವಕಾಶ ಕಲ್ಪಿಸಿಕೊಡಲಾಗಿದೆ. 1.45 ರಿಂದ ಅಗತ್ಯವಿದ್ದಲ್ಲಿ ಕೈ ಎತ್ತುವ ಮೂಲಕ ಚುನಾವಣೆ ಪ್ರಕ್ರಿಯೆ ನಡೆಯಲಿದೆ ಎಂದು ಚುನಾವಣೆ ನೋಟಿಸ್ ನಲ್ಲಿ ತಿಳಿಸಿದ್ದಾರೆ.

ಅಧ್ಯಕ್ಷ ಸ್ಥಾನ ಮೀಸಲಾತಿ (ಅನುಸೂಚಿತ ಜಾತಿ) ಉಪಾಧ್ಯಕ್ಷ ಹಿಂದುಳಿದ ವರ್ಗ (ಅ) ಗೆ ಸೇರಿದೆ. ಪುರಸಭೆ ಚುನಾಯಿತ ಸದ್ಯಸರ ಒಟ್ಟು ಸಂಖ್ಯೆ ಬಲ 23 ಹೊಂದಿದೆ. ಬಿಜೆಪಿ ಪಕ್ಷದಿಂದ 05, ಜೆಡಿಎಸ್ 01, ಬಿಎಸ್ಪಿ 01, ಕಾಂಗ್ರೆಸ್ 12, ಪಕ್ಷೇತರ 04 ಸ್ಥಾನ ಹೊಂದಿದ್ದು, ಕಾಂಗ್ರೆಸ್ ಪಕ್ಷದಿಂದ ಹಿರಿಯ ಸದಸ್ಯ ಜಗನ್ನಾಥ ಗುತ್ತೇದಾರ, ಸುಲೋಚನಾ ಜಗನ್ನಾಥ ಕಟ್ಟಿ, ಕವಿತಾ ಬಸವರಾಜ ಕಡಬೂರ್, ಪಕ್ಷೇತರ ಅಭ್ಯರ್ಥಿ ಆನಂದ ಟೈಗರ್ ಅಧ್ಯಕ್ಷ ಸ್ಥಾನಕ್ಕೆ ತೀವ್ರ ಪೈಪೋಟಿ ನಡೆಸಿದ್ದಾರೆ ಎಂದು ಎನ್ನಲಾಗಿದೆ.

ಇನ್ನೂ, ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಹಿರಿಯ ಮುಖಂಡ ಹಾಗೂ ಮಾಜಿ ಪುರಸಭೆ ಸದಸ್ಯ ಸೈಯದ್ ಹಾದಿಮಿಯಾ ಅವರ ಧರ್ಮ ಪತ್ನಿ ಸದಸ್ಯೆ ಫಾರ್ಜಾನ ಬೇಗಂ, ಸಂತೋಷ ಮಾಳಪ್ಪನೂರ್, ಅನ್ವರ್ ಕತೀಬ್ ಅವರು ಪೈಪೋಟಿ ನಡೆಸಿದ್ದಾರೆ ಎನ್ನಲಾಗುತ್ತಿದೆ.

ಜಗನ್ನಾಥ ಗುತ್ತೇದಾರ ಅವರು ಪ. ಜಾ ಭೋವಿ ವಡ್ಡರ್ ಸಮಾಜಕ್ಕೆ ಸೇರಿದ ಏಕೈಕ ಹಿರಿಯ ನಾಯಕರಾಗಿದ್ದು, ಪಟ್ಟಣ ಪಂಚಾಯ್ತಿ 1996 ರಿಂದ 2018ರ ಪ್ರಸುತ್ತ ವರ್ಷದವರೆಗೆ ಪುರಸಭೆಗೆ ಚುನಾಯಿತರಾಗಿ ಹಿರಿಯ ಸದಸ್ಯರೆನ್ನಿಸಿಕೊಂಡಿದ್ದಾರ. ಅಧ್ಯಕ್ಷ ಸ್ಥಾನಕ್ಕೆ ಪ್ರಬಲ ಪೈಪೋಟಿಯಲ್ಲಿದ್ದಾರೆ. ಬಲಗೈ ಅನುಸೂಚಿತ ಸಮುದಾಯದ ಆನಂದ ಟೈಗರ್ ಪಕ್ಷೇತರ ಅಭ್ಯರ್ಥಿಯಾಗಿ ಚುನಾಯಿತರಾಗಿ ಕಾಂಗ್ರೆಸ್ ಪಕ್ಷದಿಂದ ಒಂದು ಅವಧಿಗೆ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಅಧಿಕಾರದ ಅನುಭವ ಹೊಂದಿದ್ದಾರೆ. ಎಡಗೈ ಅನುಸೂಚಿತ ಸಮುದಾಯದವರಾದ ಸುಲೋಚನಾ ಜಗನ್ನಾಥ ಕಟ್ಟಿ ಉಪಾಧ್ಯಕ್ಷರಾಗಿ ಅಧಿಕಾರ ನಿರ್ವಹಿಸಿದವರಾಗಿದ್ದಾರೆ.

> ಪುರಸಭೆಯ ಅಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣೆ ಹಿನ್ನಲೆ ನೋಟಿಸ್ ನಲ್ಲಿ ತಿಳಿಸಿರುವ ಮೀಸಲಾತಿಯ ಅಭ್ಯರ್ಥಿಗಳು ಬಿಜೆಪಿ ಪಕ್ಷದಲ್ಲಿ ಇಲ್ಲದಿರುವುದರಿಂದ ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ ನಡೆಸುವುದರ ಬಗ್ಗೆ ಪಕ್ಷದಲ್ಲಿ ಯಾವುದೇ ತೀರ್ಮಾನ ಕೈಗೊಂಡಿಲ್ಲ.
>
> - ವಿಜಯಕುಮಾರ ಚೆಂಗಂಟೆ
> ಅಧ್ಯಕ್ಷ, ಬಿಜೆಪಿ ಮಂಡಲ

ಕಾಂಗ್ರೆಸ್ ಸಭೆ ಇಂದು

ಚಿಂಚೋಳಿ ಪುರಸಭೆಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಸೆ.10 ಮಂಗಳವಾರ ಚುನಾವಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಎಲ್ಲಾ ಸದಸ್ಯರು ಕಲಬುರಗಿಯ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ್ ಹಾಗೂ ಪ್ರಿಯಾಂಕ ಖರ್ಗೆ ಅವರು, ಮಾಜಿ ವಿಧಾನ ಪರಿಷತ್ ಸದಸ್ಯ ಶರಣಪ್ಪ ಮಟ್ಟೂರ್ ಅವರ ನೇತೃತ್ವದಲ್ಲಿ ಪಕ್ಷದ ಪುರಸಭೆ ಚುನಾಯಿತ ಎಲ್ಲಾ ಸದಸ್ಯರಿಗೆ ಬೆಳಗ್ಗೆ 11 ಗಂಟೆಗೆ ಸಭೆ ಕರೆಯಲಾಗಿದೆ. ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ಯಾರು ನಾಮ ಪತ್ರ ಸಲ್ಲಿಸಬೇಕೆಂಬುದು ತೀರ್ಮಾನವಾಗಲಿದೆ. ಪಕ್ಷ ಕೈಗೊಂಡ ತೀರ್ಮಾನಕ್ಕೆ ಚುನಾಯಿತ ಸದಸ್ಯರು ಬದ್ದರಾಗಿರಬೇಕಾಗುತ್ತದೆ ಮತ್ತು ಉಲ್ಲಂಘಿಸದಂತೆ ಪಕ್ಷದಿಂದ ವಿಪ್ ಜಾರಿ ಮಾಡಲಾಗುತ್ತದೆ ಎಂದು ಚಿಂಚೋಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಮಾಲಿ ತಿಳಿಸಿದ್ದಾರೆ.

ಜಾಗೃತ ಹನುಮಾನ್ ಶ್ರಾವಣ ಮಾಸದ ಭಜನಾ ಮಂಗಲೋತ್ಸವ

ಕಲಬುರಗಿ: ನಗರದ ಹೊರವಲಯದ ಕೂಟನೂರ್ (ಡಿ) ಗ್ರಾಮದ ನ್ಯೂ ವೆಂಕಟೇಶ್ ನಗರ ಹಾಗೂ ವಿಜಯ ವಿದ್ಯಾಲಯ ಬಡಾವಣೆಯ ಜೈ ಹನುಮಾನ್ ಸೇವಾ ಸಂಘದ ವತಿಯಿಂದ ಜಾಗೃತ ಹನುಮಾನ್ ದೇವಸ್ಥಾನದಲ್ಲಿ ಕಳೆದ 48 ದಿನಗಳಿಂದ ನಡೆದ ಶ್ರಾವಣ ಭಜನಾ ಮಂಗಲೋತ್ಸವ ಶನಿವಾರ ಅದ್ದೂರಿಯಾಗಿ ಜರುಗಿತು. ಭಾನುವಾರ ಬೆಳಗ್ಗೆ 6 ಗಂಟೆಗೆ ಹನುಮಾನ್ ದೇವರ ರುದ್ರಾಭಿಷೇಕ ನಡೆಯಿತು. ಶ್ರಾವಣ ಮಾಸದ ನಿಮಿತ್ತ ಕಳೆದ 48 ದಿನಗಳ ವರೆಗೆ ಪ್ರತಿದಿನ ಸಾಯಂಕಾಲ ಜೈ ಹನುಮಾನ್ ಸೇವಾ ಸಂಘದ ಸದಸ್ಯರೆಲ್ಲರೂ ಜಾಗೃತ ಹನುಮಾನ್ ದೇವಸ್ಥಾನದಲ್ಲಿ ಭಜನೆ ನಡೆಸಿದರು. ಶನಿವಾರ ರಾತ್ರಿ ಭಜನೆ ಮಾಡುವ ಮೂಲಕ ಜಾಗರಣೆ ಮಾಡಿದರು. ಭಾನುವಾರ ಭಜನಾ ಮಂಗಲೋತ್ಸವ ಅಂಗವಾಗಿ ಶ್ರೀ ನಂದಿಬಸವೇಶ್ವರ, ವಿಘ್ನೇಶ್ವರನಿಗೆ ಹಾಗೂ ಗ್ರಾಮದೊಳಗಿನ ಹನುಮಾನ್ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಜೈ ಹನುಮಾನ್ ಸೇವಾ ಸಂಘದ ಪದಾಧಿಕಾರಿಗಳು ಹಾಗೂ

ಕೂಟನೂರ್ (ಡಿ) ಗ್ರಾಮದ ವಿಜಯ ವಿದ್ಯಾಲಯ ಹಾಗೂ ನ್ಯೂ ವೆಂಕಟೇಶ್ ನಗರದ ಹಿರಿಯರು, ಮಹಿಳೆಯರು, ಮಕ್ಕಳು ಪಾಲ್ಗೊಂಡಿದರು.

ವಿಶೇಷ ಚೇತನರ ಅನುದಾನ ದುರ್ಬಳಕೆ: ಆರೋಪ

ಚಿತ್ತಾಪುರ: ಅಂಗವಿಕಲರಿಗಾಗಿ ಮೀಸಲಿದ್ದ ಅನುದಾನವನ್ನು ಗ್ರಾಪಂ ಪಿಡಿಓ ಹಾಗೂ ಅಧ್ಯಕ್ಷರು ಸೇರಿ ದುರ್ಬಳಕೆ ಮಾಡಿಕೊಂಡಿದ್ದು ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು

ಎಂದು ಗ್ರಾಪಂ ಸದಸ್ಯ ಸುಭಾಸ್ ಜೈರಾಮ್ ರಾಠೋಡ ಹಾಗೂ ಮುಖಂಡರಾದ ಕೊರಿ ಸಿದ್ದ ಗಂಜಿ ಹಾಗೂ ಶಿವರಾಜ ಬಳಗಾರ ಒತ್ತಾ ಯಿಸಿದ್ದಾರೆ. ತಾಲೂಕಿನ ಕರದಾಳ ಗ್ರಾಮ ಪಂಚಾಯಿತಿಯಲ್ಲಿನ ಕರದಾಳ, ಅಣಿಕೇರಾ ಇಂತಹ ಅಂಗವಿಕಲರರಿಗಾಗಿ ಮೀಸಲಿಟ್ಟ ಅನುದಾನವನ್ನು ಕಳೆದ ಮೂರು ವರ್ಷಗಳಲ್ಲಿ ಒಟ್ಟು ಐದು ಲಕ್ಷ ರೂಪಾಯಿ ದುರುಪ ಯೋಗ ಮಾಡಿಕೊಂಡಿದ್ದು ಅಂಗವಿಕಲರಿಗೆ ಅನ್ಯಾಯ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಗ್ರಾಮ ಪಂಚಾಯತಿ ಸದಸ್ಯ ಸುಭಾಸ್ ಜೈರಾಮ್ ರಾಠೋಡ ಅವರು ತಾಲೂಕು ಪಂಚಾಯತಿ ಇಓ ಮಹ್ಮದ್ ಅಕ್ರಮ್ ಪಾಷಾ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮನವಿ ಪತ್ರ ಸಲ್ಲಿಸಿ ಗ್ರಾಪಂ ಅಧ್ಯಕ್ಷೆ ಸುನೀತಾ ಬಸವರಾಜ ಹಾಗೂ ಪಿಡಿಓ ಸುನೀತಾ ಕಟ್ಟಿಮನಿ ಅವರು ಅವ್ಯವಹಾರ ಮಾಡಿದ್ದು ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಜರುಗಿಸಬೇಕು. ಇಲ್ಲದಿದ್ದರೆ ಮುಂಬರುವ ದಿನಗಳಲ್ಲಿ ಪ್ರತಿಭಟನೆ ನಡಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರ ವಿರುದ್ಧ ಸಿದ್ದಲಿಂಗ ಶ್ರೀ ಕಿಡಿ

ಕಲಬುರಗಿ: ಇಡೀ ನಾಗರೀಕರೆ ತಲೆತಗ್ಗಿಸುವಂತಹ ಘಟನೆಗಳು ಜಿಲ್ಲೆಯಲ್ಲಿ ಪಡೆಯುತ್ತಿದ್ದರು, ಇಲ್ಲಿಯ ಸ್ಟ್ರಾಂಗ್ ಮಿನಿಸ್ಟರ್ ಎಂದೆ

ನಿಸಿಕೊಂಡಿರುವ ಜಿಲ್ಲಾ ಉಸ್ತುವಾರಿ ಸಚಿವರು ಯಾಕೇ ಆರೋಪಿಗಳ ತನಿಖೆಗೆ ಮುಂದಾಗುತ್ತಿಲ್ಲ ಎಂದು ಶ್ರೀ ರಾಮ ಸೇನೆಯ ರಾಷ್ಟ್ರೀಯ ಗೌರವಾಧ್ಯಕ್ಷ ಶ್ರೀ ಸಿದ್ದಲಿಂಗ ಸ್ವಾಮೀಜಿ ಪ್ರಶ್ನಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ದಿನೇ ದಿನೇ ಕಲಬುರಗಿ ಜಿಲ್ಲೆ ಕುಖ್ಯಾತಿಗೆ ಒಳಗಾಗುತ್ತಿದೆ. ಅಮಾಯಕ ಹೆಣ್ಣುಮಕ್ಕಳನ್ನು ಬಳಸಿಕೊಂಡು ಹಾಗೂ ನ್ಯಾಯಕ್ಕಾಗಿ ಅಂಗಲಾಚಿಕೊಂಡು ಬಂದಿರುವಂತಹ ಯುವತಿಯರನ್ನು ಜಿಲ್ಲೆಯಲ್ಲಿ ಹನಿಟ್ರ್ಯಾಫ್‌ಗೆ ಬಳಸಿಕೊಳ್ಳಲಾಗುತ್ತಿದೆ. ಇದು ಜಿಲ್ಲೆ ಸೇರಿದಂತೆ ಇಡೀ ರಾಜ್ಯದ ನಾಗರೀಕರಿಗೆ ತಲೆತಗ್ಗಿಸುವಂತಹ ಕೃತ್ಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಾಜಸೇವೆಯ ಮುಖವಾಡವನ್ನು ಧರಿಸಿ ದೇಶದ ಪ್ರಧಾನಮಂತ್ರಿಯಿಂದ ಹಿಡಿದು ಸಾಮಾನ್ಯ ವ್ಯಕ್ತಿಗಳನ್ನು ಟೀಕಿಸುತ್ತಿದ್ದ ಡಿ.ಎಲ್.ಟಿ (ದಲಿತ ಸೇನೆ) ಇದೊಂದು ಕ್ರೂರ ಸಂಘಟನೆಯಾಗಿದೆ. ಈ ಹನಿಟ್ರ್ಯಾಪ್ ಕುರಿತು ಸ್ವತಃ ಸಂತ್ರಸ್ಥರೇ ಪೊಲೀಸ್ ಠಾಣೆಯಲ್ಲಿ ದೂರು ನೀಡಿದರು ಇಲ್ಲಿಯ ಜಿಲ್ಲಾ ಉಸ್ತುವಾರಿ ಸಚಿವರಾಗಲಿ ಹಾಗೂ ಜಿಲ್ಲೆಯ ಪೊಲೀಸ್ ಆಗಲಿ ತನಿಖೆಗೆ ಮುಂದಾಗದೇ ಇರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ಹೇಳಿದರು.

ಮಾಧ್ಯಮಗಳ ಮುಂದೆ ಪ್ರಕರಣದ ಎ3 ಆರೋಪಿ ಮಾತನಾಡಿದರು, ಪೋಲಿಸರು ಮಾತ್ರ ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ. ದಲಿತ ಸೇನೆಯೊಂದಿಗೆ ಕೂಡಿಕೊಂಡು ಪ್ರಕರಣವನ್ನು ಮುಚ್ಚಿಹಾಕಲು ಪ್ರಯತ್ನ ನಡೆಸಲಾಗುತ್ತಿದೆ. ಇಡೀ ಕಲಬುರಗಿ ಜನತೆಗೆ ಈ ಪ್ರಕರಣದಿಂದ ಕರ್ನಾಟಕದಲ್ಲಿ ಅವಮಾನವಾಗಿದೆ ಎಂದರು.

ಜಿಲ್ಲಾ ಉಸ್ತುವಾರಿ ತುಟಿಕ್ ಪಿಟಿಕ್

ಕಲಬುರ್ಗಿಯಲ್ಲಿ ಇಷ್ಟೆಲ್ಲಾ ಹನಿಟ್ರ್ಯಾಫ್ ಪ್ರಕರಣಗಳು ನಡೆದಿವೆ.ಆದರೆ,ಇಲ್ಲಿಯ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಮಾತ್ರ ಎಲ್ಲಿದ್ದಾರೊ ಗೊತ್ತಿಲ್ಲ.?. ಪ್ರಕರಣದ ಬಗ್ಗೆ ಇಲ್ಲಿಯವರೆಗೂ ಒಂದೇ ಒಂದು ಹೇಳಿಕೆ ಕೊಟ್ಟಿಲ್ಲ. ಇವರೆಲ್ಲರೂ ನಿಮ್ಮವರೆಂದು ಸುಮ್ಮನಿದ್ದಿರಾ ಹೇಗೆ ಎಂದು ಪ್ರಶ್ನಿಸಿದ ಶ್ರೀಗಳು, ಅಮಾಯಕ ಯುವತಿಯರು ಯಾರ್ಯಾರ ಮೇಲೆ ಆರೋಪ ಮಾಡಿದ್ದಾರೆ ಅವರೆಲ್ಲರನ್ನೂ ಬಂಧಿಸಿ ಕ್ರಮಕೈಗೊಳ್ಳುವ ಮೂಲಕ ಇಂತವರನ್ನು ಜೈಲಿಗೆ ಅಟ್ಟಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶ್ರೀರಾಮ ಸೇನೆಯ ಮಾಜಿ ಜಿಲ್ಲಾಧ್ಯಕ್ಷ ಮಹೇಶ್ ಗೊಬ್ಬುರ ಸೇರಿದಂತೆ ಕಾರ್ಯಕರ್ತರು ಇದ್ದರು.

> ಪ್ರಕರಣದ ಉಳಿದ ಆರೋಪಿಗಳನ್ನು ಪೋಲಿಸರು ತಕ್ಷಣವೇ ಬಂಧಿಸಬೇಕು. ಇವರೆಲ್ಲರನ್ನೂ ಹೀಗೆ ಬಿಟ್ಟರೆ ಸಾಕ್ಷಿ ನಾಶ ಮಾಡುತ್ತಾರೆ. ಇಂತಹದಕ್ಕೆಲ್ಲಾ ಕಡಿವಾಣ ಹಾಕದೇ ಹೋದರೆ ಮುಂಬರುವ ದಿನಗಳಲ್ಲಿ ಪೋಲಿಸ್ ಆಯುಕ್ತರ ಕಚೇರಿ ಎದುರಿಗೆ ಪ್ರತಿಭಟನೆ ಮಾಡಬೇಕಾಗುತ್ತದೆ.
>
> -ಶ್ರೀ ಸಿದ್ದಲಿಂಗ ಸ್ವಾಮೀಜಿ
> ಶ್ರೀರಾಮ ಸೇನೆಯ ರಾಷ್ಟ್ರೀಯ ಗೌರವಾಧ್ಯಕ್ಷ

ಪತ್ರಕರ್ತರ ಸಂಘದ ಪದಗ್ರಹಣ ನಾಳೆ

ಕಮಲಾಪುರ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ರಿ) ಕಮಾಪುರ ತಾಲೂಕಾ ಘಟಕದ ನೂತನ ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಪದಗ್ರಹಣ, ವಿವಿಧ ಕ್ಷೇತ್ರದ ಪ್ರಮುಖರಿಗೆ

ವಿಶೇಷ ಸತ್ಕಾರ, ಮಾಜಿ ಸೈನಿ ಕರು, ಸ್ನಾತಕೋತ್ತರ ವಿಭಾ ಗದ ಪ್ರತಿಭಾವಂತ ವಿದ್ಯಾ ರ್ಥಿಗಳು ಹಾಗೂ ಪ್ರಾಥ ಮಿಕ ಹಾಗೂ ಪ್ರೌಢಶಾಲಾ ವಿಭಾಗದ ಸಾಧಕ ವಿದ್ಯಾರ್ಥಿ ಗಳಿಗೆ ಸತ್ಕಾರ ಸಮಾರಂಭವು ದಿನಾಂಕ ಮಂಗಳವಾರ ಕಮಲಾಪುರದ ಆಕೃತಿ (ಬಿರಾದರ) ಕಲ್ಯಾಣ ಮಂಟಪದಲ್ಲಿ 11ಗಂಟೆಗೆ ಜರುಗಲಿದೆ ಎಂದು ಪತ್ರಕರ್ತರ ಸಂಘದ ನೂತನ ಅಧ್ಯಕ್ಷ ಸುರೇಶ ಲೇಂಗಟಿ ಹಾಗೂ ನೂತನ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಮೂಲಗೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸೊಂತ- ಕಲಮೂಡ ಮುಲ್ಲಾಮಾರಿ ತೀರ್ಥ ಕ್ಷೇತ್ರದ ಶ್ರೀ ಅಭಿನವ ಶರಣ ಶಂಕರಲಿಂಗ ಮಹಾರಾಜರು ದಿವ್ಯ ಸಾನಿಧ್ಯ ವಹಿಸಲಿದ್ದು, ಗ್ರಾಮೀಣ ಶಾಸಕ ಬಸವರಾಜ ಮತ್ತಿಮಡು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷರಾದ ಬಾಬುರಾವ ಯಡ್ರಾಮಿ ಗೌರವ ಉಪಸ್ಥಿತಿ ವಹಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಸಚಿವ ರೇವುನಾಯಕ ಬೆಳಮಗಿ, ವೈಜನಾಥ ತಡಕಲ, ಶಿವಪ್ರಭು ಪಾಟೀಲ, ಭಾಗವಸಲಿದ್ದಾರೆ.

ಸಮಾಚಾರ ಸಣ್ಣದಲ್ಲ

ರಥದ ಚಕ್ರಕ್ಕೆ ಸಿಲುಕಿ ಯುವಕ ಸಾವು

ವಿಜಯಪುರ: ಜಾತ್ರಾ ರಥೋತ್ಸವದ ವೇಳೆ ರಥದ ಚಕ್ರಕ್ಕೆ ಸಿಲುಕಿ ಯುವಕ ಸಾವನ್ನಪ್ಪಿದ ಘಟನೆ ವಿಜಯಪುರ ಜಿಲ್ಲೆಯ ದೇವರಹಿಪ್ಪರ ತಾಲೂಕಿನ ಬಿಬಿ ಇಂಗಳಗಿ ಗ್ರಾಮದಲ್ಲಿ ನಡೆದಿದೆ. ದೇವೇಂದ್ರ ಬಡಿಗೇರ್ (24) ಮೃತ ದುರ್ದೈವಿ.

ಘನ ಗುರುಸಿದ್ದೇಶ್ವರ ದೇವರ ಜಾತ್ರೆಯಲ್ಲಿ ಅವಘಡ ಸಂಭವಿಸಿದ್ದು, ದುರಂತದ ದೃಶ್ಯ ಮೊಬೈಲ್ ಕ್ಯಾಮೆರಾದಲ್ಲಿ ಸೆರೆಯಾಗಿದೆ. ರಥವನ್ನು ಎಳೆಯುವ ವೇಳೆ ಯುವಕ ಆಯತಪ್ಪಿ ಚಕ್ರದ ಅಡಿಗೆ ಸಿಲುಕಿದ್ದಾನೆ. ಆಸ್ಪತ್ರೆಗೆ ಸಾಗಿಸುವ ದಾರಿ ಮಧ್ಯೆ ದೇವೇಂದ್ರ ಕೊನೆಯುಸಿರೆಳೆದಿದ್ದಾನೆ. ಈ ಕುರಿತು ಕಲಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೀರಲ್ಲಿ ಮುಳುಗಿ ಸಾವು

ಚನ್ನಪಟ್ಟಣ: ಗೌರಿ-ಗಣೇಶ ಹಬ್ಬದ ಅಂಗವಾಗಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಯನ್ನು ಕೆರೆಯಲ್ಲಿ ವಿಸರ್ಜನೆ ಮಾಡುವಾಗ ಪಾಪಣ್ಣ (60) ಎಂಬುವರು ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ತಾಲೂಕಿನ ಗರಕಹಳ್ಳಿಯಲ್ಲಿ ಶನಿವಾರ ರಾತ್ರಿ ನಡೆದಿದೆ.

ಗ್ರಾಮದಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪಿಸಿ ರಾತ್ರಿಯೇ ವಿಸರ್ಜಿಸಲು ತೀರ್ಮಾನಿಸಲಾಗಿತ್ತು. ಗ್ರಾಮದಲ್ಲಿ ರಾತ್ರಿ ಮೂರ್ತಿಯನ್ನು ಮೆರವಣಿಗೆ ಮಾಡಿದ್ದ ಗ್ರಾಮಸ್ಥರು, ಊರಾಚೆಗಿನ ಕೆರೆಗೆ ಮಧ್ಯರಾತ್ರಿ 2 ಗಂಟೆ ಸುಮಾರಿಗೆ ವಿಸರ್ಜನೆಗೆ ತೆಗೆದುಕೊಂಡು ಹೋಗಿದ್ದರು. ಈ ಸಂದರ್ಭದಲ್ಲಿ ಪಾಪಣ್ಣ ಕೂಡ ಜೊತೆಗಿದ್ದರು. ಈ ವೇಳೆ ಅವರು ಸ್ವಲ್ಪ ಮದ್ಯಪಾನ ಕೂಡ ಮಾಡಿದ್ದರು ಎಂದು ಅಕ್ಕೂರು ಠಾಣೆ ಪೊಲೀಸರು ತಿಳಿಸಿದರು.

ಪ್ರೇಮ ವೈಫಲ್ಯ: ಯುವಕನ ಆತ್ಮಹತ್ಯೆ

ಧಾರವಾಡ: ಪ್ರೇಮ ವೈಫಲ್ಯದ ಹಿನ್ನೆಲೆಯಲ್ಲಿ ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ಧಾರವಾಡ ರೈಲ್ವೆ ನಿಲ್ದಾಣ ಸಮೀಪದ ವಸತಿಗೃಹದಲ್ಲಿ ನಡೆದಿದೆ. ಚಿಕ್ಕಮಗಳೂರು ಜಿಲ್ಲೆಯ ಸಿಗೆಹಡ್ಲು ಕಾಮನಕೆರೆ ನಿವಾಸಿ ಚಿನ್ಮಯ್ ಆತ್ಮಹತ್ಯೆಗೆ ಶರಣಾದ ಯುವಕ. ಸೆ.4ರಂದು ಚಿನ್ಮಯ್ ಲಾಡ್ಜ್‌ನಲ್ಲಿ ತಂಗಿದ್ದ. ಸೆ.6ರಂದು ಸಂಜೆ ರೂಮ್ ಸ್ವಚ್ಛತೆಗೆ ಸಿಬ್ಬಂದಿ ಹೋಗಿದ್ದ ವೇಳೆ ಒಳಗಿನಿಂದ ಲಾಕ್ ಆಗಿತ್ತು. ಮರುದಿನ ರಾತ್ರಿ ಸಿಬ್ಬಂದಿ ಮತ್ತೆ ರೂಮ್ ಬಾಗಿಲು ತಟ್ಟಿದ್ದಾರೆ. ಆದರೂ ಚಿನ್ಮಯ್ ಬಾಗಿಲು ತೆರೆಯದ ಕಾರಣ ಅನುಮಾನಗೊಂಡು ಮತ್ತೊಂದು ಬೀಗ ಬಳಸಿ ಲಾಕ್ ತೆರೆದಾಗ ಘಟನೆ ಬೆಳಕಿಗೆ ಬಂದಿದೆ. ತಕ್ಷಣ ವಸತಿಗೃಹದ ಮಾಲೀಕ ಧಾರವಾಡದ ವಿದ್ಯಾಗಿರಿ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಯುವಕನ ಕುಟುಂಬಸ್ಥರನ್ನು ಸಂಪರ್ಕಿಸಿ ವಿಷಯ ತಿಳಿಸಿದ್ದಾರೆ. ಮೃತದೇಹವನ್ನು ಧಾರವಾಡ ಜಿಲ್ಲಾಸ್ಪತ್ರೆಗೆ ಆಸ್ಪತ್ರೆಗೆ ರವಾನಿಸಿದ್ದಾರೆ. ಯುವಕ ಡೆತ್‌ನೋಟ್ ಬರೆದಿಟ್ಟು, ವಿಡಿಯೊ ಮಾಡಿ ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ತಿಳಿದು ಬಂದಿದೆ. ಧಾರವಾಡ ವಿದ್ಯಾಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಧಿಕಾರಿ, ಉದ್ಯಮಿಗಳಿಂದ ಲಕ್ಷ ಲಕ್ಷ ಹಣ ವಸೂಲಿ | ದಲಿತ ಮುಖಂಡನ ಸೆರೆ

ಹನಿಟ್ರ್ಯಾಪ್ ದಂಧೆ: ಎಂಟು ಜನರ ವಿರುದ್ಧ ಎಫ್‌ಐಆರ್

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಅಮಾಯಕ ಯುವತಿಯರನ್ನು ಮುಂದಿಟ್ಟುಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಅವರನ್ನು ಪರಿಚಯ ಮಾಡಿಕೊಂಡು ಬಳಸಿಕೊಳ್ಳುವ ಮೂಲಕ ಕಲಬುರಗಿಯಲ್ಲಿನ ಸರಕಾರಿ ಅಧಿಕಾರಿಗಳ, ಉದ್ಯಮಿಗಳಿಗೆ ಹನಿಟ್ರ್ಯಾಪ್ ಮಾಡಿ ಲಕ್ಷ ಲಕ್ಷ ಹಣ ವಸೂಲಿ ಮಾಡುವ ದಂಧೆ ಎಗ್ಗಿಲ್ಲದೆ ನಡೆಯುತ್ತಿದೆ.

10ಕ್ಕೂ ಅಧಿಕ ಅಮಾಯಕ ಯುವತಿಯರನ್ನು ಬಳಸಿಕೊಂಡುಹನಿಟ್ರ್ಯಾಪ್ ದಂಧೆ ಮಾಡುತ್ತಿರುವ ಗ್ಯಾಂಗ್‌ನ ರಾಜು ಲೇಂಗಟಿ ಸೇರಿದಂತೆ 8 ಜನರ ವಿರುದ್ಧ ಇದೀಗ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಇನ್ನುಳಿದ ಗ್ಯಾಂಗ್,ನ ಸದಸ್ಯರ ಹುಡುಕಾಟಕ್ಕಾಗಿ ಪೊಲೀಸರು ತಮ್ಮ ಜಾಲವನ್ನು ಬಿಸಾಡಿದ್ದಾರೆ.

ದಲಿತ ಸೇನೆಯ ಮುಖಂಡನ ಬಂಧನ

ಯುವತಿಯರನ್ನು ಬಳಸಿಕೊಂಡು ಉದ್ಯಮಿಗಳಿಗೆ ಹಾಗೂ ಸರಕಾರಿ ಅಧಿಕಾರಿಗಳಿಗೆ ಬ್ಲ್ಯಾಕ್ ಮೇಲ್ ಆರೋಪದ ಹಿನ್ನಲೆಯಲ್ಲಿ ದಲಿತ ಸೇನೆಯ ಮುಖಂಡ ರಾಜು ಲೇಂಗಟಿ ಅವರನ್ನು ಇದೀಗ ಪೊಲೀಸರು ಬಂಧನ ಮಾಡಿದ್ದಾರೆ. ಮುಂಬೈ ಮೂಲದ ಯುವತಿ ಹಾಗೂ ಸ್ಥಳೀಯ ಮಹಿಳೆ ಸೇರಿ ಮೂವರ ಮೇಲೆ ಅತ್ಯಾಚಾರ ಹಾಗೂ ಬ್ಲ್ಯಾಕ್ ಮೇಲ್,ಗೂ ಯುವತಿಯರನ್ನು ಬಳಸಿಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಆಡಿಯೊ ಬಿಡುಗಡೆ: ಕಲಬುರಿಗಿಯಲ್ಲಿ ಯುವತಿಯರನ್ನು ಬಳಸಿಕೊಂಡು ಹನಿಟ್ರ್ಯಾಪ್ ಮತ್ತು ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಅತ್ಯಾಚಾರ ಪ್ರಕರಣದ ಎ1 ಆರೋಪಿಯಾಗಿರುವ ರಾಜು ಲೇಂಗಟಿ ಹಾಗೂ ಸಂತ್ರಸ್ತೆ ಯುವತಿಯ ನಡುವಿನ ಮಾತುಕತೆಯ ಆಡಿಯೊ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಉದ್ಯಮಿಯೊಬ್ಬರ ಬಳಿ ಪಡೆದಿರುವ ಹಣದ ಕುರಿತಾಗಿ ಆರೋಪಿ ರಾಜು ಲೇಂಗಟಿ ಆಡಿಯೋದಲ್ಲಿ ಮಾತನಾಡಿದ್ದು,ಇದೀಗ ಬಹಿರಂಗವಾಗಿದೆ. 40 ಲಕ್ಷ ಡೀಲ್ ನಲ್ಲಿ ಹಣದ ಬಗ್ಗೆಯ ಗೊಂದಲವನ್ನು ಸೃಷ್ಟಿ ಮಾಡಿಕೊಂಡಿರುವ ಹನಿಟ್ರ್ಯಾಪ್ ಗ್ಯಾಂಗ್,ಆಡಿಯೊದಲ್ಲಿ ಎಲ್ಲವೂ ಮಾತನಾಡಿರುವುದು ಬೆಳಕಿಗೆ ಬಂದಿದೆ. ಯುವತಿಯ ಜೊತೆಗೆ ಮಾತನಾಡುವಾಗಲೇ ಉದ್ಯಮಿಗೆ ಕರೆ ಮಾಡಿ ಡೀಲ್ ಹಣದ ಸ್ಪಷ್ಟತೆಯನ್ನು ಆರೋಪಿ ರಾಜು ಲೇಂಗಟಿ ನೀಡಿದ್ದಾನೆ. 40 ಲಕ್ಷ ಹಣ ಡೀಲ ಆಗಿದೆ. ಹತ್ತು ಲಕ್ಷ ಹಣ ಈಗಾಗಲೇ ಕೊಟ್ಟಿದ್ದು,ಉಳಿದ ಹಣವನ್ನು ಆಮೇಲೆ ನೀಡುವುದಾಗಿ ಹೇಳಿದ್ದಾರೆ. ಎಲ್ಲರಿಗೂ ಎರಡು ಎರಡು ಲಕ್ಷ ಹಂಚಿಕೊಳ್ಳುವುದಾಗಿ ಅಂತ ಆಡಿಯೋದಲ್ಲಿ ರಾಜು ಮಾತನಾಡಿದ್ದು, ಪ್ರಭು ಹಿರೇಮಠ ನಿಮಗೆ ಗೊಂದಲ ಸೃಷ್ಟಿ ಮಾಡುತ್ತಿದ್ದಾನೆ ಎಂದು ಆಡಿಯೋ ಮಾಡಿ ಇದೀಗ ವಿವರಣೆ ನೀಡಿದ ಆಡಿಯೊ ಇದೀಗ ಬಹಿರಂಗವಾಗಿದೆ.



ಸದ್ಯಕ್ಕೆ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ದಲಿತ ಸೇನೆಯ ಮುಖಂಡ ಎ1 ಆರೋಪಿ ರಾಜು ಲೇಂಗಟಿ ಅವರನ್ನು ಬಂಧಿಸಲಾಗಿದೆ. ಎಂಟು ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಉಳಿದವರ ಪಾತ್ರ ಏನಿದೆ ಎಂಬುದರ ಬಗ್ಗೆ ತನಿಖೆ ನಡೆಸಲಾಗುವುದು.

– ಡಾ.ಎಸ್.ಡಿ ಶರಣಪ್ಪ
ನಗರ ಪೊಲೀಸ್ ಆಯುಕ್ತ

ಅಜ್ಞಾತ ಸ್ಥಳದಿಂದ ವಿಡಿಯೊ ಬಿಡುಗಡೆ

ಅಮಾಯಕ ಯುವತಿಯರನ್ನು ಬಳಸಿಕೊಂಡು ಹನಿಟ್ರ್ಯಾಪ್ ಮತ್ತು ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಕರಾಳ ದಂಧೆಯ ಮುಖವಾಡ ಬಗೆದಷ್ಟೂ ಬಯಲಾಗುತ್ತಿದ್ದು, ಹನಿಟ್ರ್ಯಾಪ್ ಪ್ರಕರಣದ ಆರೋಪಿ ಪ್ರಭುಸ್ವಾಮಿ ಅಜ್ಞಾತ ಸ್ಥಳದಿಂದ ವಿಡಿಯೊ ಬಿಡುಗಡೆ ಮಾಡಿದ್ದಾನೆ. ವಿಡಿಯೊ ಬಿಡುಗಡೆ ಮಾಡಿ, ಉದ್ಯಮಿಯಿಂದ ರಾಜು ಲೇಂಗಟಿ ಅವರು 6 ಲಕ್ಷ ಹಣವನ್ನು ಪಡೆದು ನನ್ನ ಖಾತೆಗೆ ಆರ್ ಟಿ ಜಿ ಎಸ್ ಮೂಲಕ ಹಾಕಿದ್ದರು. ಅದಾದ ಬಳಿಕ ನಮ್ಮ ಮಾವನ ಖಾತೆಗೆ 8 ಲಕ್ಷ ಹಣವನ್ನು ಪುನಃ ನೆಫ್ಟ್, ಆರ್‌ಟಿಜಿಎಸ್ ಮೂಲಕ ಹಾಕಿದ್ದಾರೆ. ಹೀಗೆ ನನ್ನ ಹಾಗೂ ನನ್ನ ಮಾವನ ಖಾತೆಗೆ ಹಾಕಿದ ಹಣವನ್ನು ರಾಜು ಲೇಂಗಟಿ ಅವರು ವಿತ್ ಡ್ರಾ ಮಾಡಿಕೊಂಡಿದ್ದಾರೆ. ಯಾರಿಗೋ ಕೊಡಬೇಕು ಅಂತ ಹೇಳಿ ನನ್ನ ಹಾಗೂ ನನ್ನ ಮಾವನ ಖಾತೆಗೆ ಹಾಕಿಸಿದ್ದು,ಹಣ ಹಾಕಿದ ಬಳಿಕ ಅವರೇ ವಿತ್ ಡ್ರಾ ಮಾಡಿಕೊಂಡಿದ್ದಾರೆ.ರಾಜು ಲೇಂಗಟಿ ಅವರನ್ನು ಕೇಳಿದಾಗ ಸಂಘಟನೆಯವರಿಗೆ ಕೊಡಬೇಕು ಎಂದು ಹೇಳಿದ್ದರು. ಸಾಲದಂತೆ ಹಣದ ವಿಚಾರದಲ್ಲಿ ಗಲಾಟೆ ಮಾಡಿ ನನ್ನ ಮೇಲೆ ಕೇಸ್ ಮಾಡುವುದಾಗಿ ಬೆದರಿಕೆ ಕೂಡ ಹಾಕಿದ್ದಾನೆ ಎಂದು ಪ್ರಕರಣದ ಆರೋಪಿ ಪ್ರಭುಸ್ವಾಮಿ ವಿಡಿಯೊ ಮೂಲಕ ಹೇಳಿಕೆಯೊಂದನ್ನು ಸೋಮವಾರ ಬಿಡುಗಡೆ ಮಾಡಿದ್ದಾನೆ.

ಡೊಳ್ಳು ಬಾರಿಸುವ ವಿಚಾರಕ್ಕೆ ಗಲಾಟೆ, ಕಲ್ಲು ತೂರಾಟ

ಹೊಳೆಹೊನ್ನೂರು ಠಾಣೆ ವ್ಯಾಪ್ತಿಯ ಅರಬಿಳಚಿ ಕ್ಯಾಂಪ್ ಗ್ರಾಮದಲ್ಲಿ ಘಟನೆ | ಇಬ್ಬರು ಪೇದೆಗಳಿಗೆ ಗಾಯ

ಶಿವಮೊಗ್ಗ: ಹೊಳೆಹೊನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯ ಅರಬಿಳಚಿ ಕ್ಯಾಂಪ್ ಗ್ರಾಮದಲ್ಲಿ ಶನಿವಾರ ಸಂಜೆ ಗಣೇಶ ಹಬ್ಬದ ವೇಳೆ ಡೊಳ್ಳು ಬಾರಿಸುವ ವಿಚಾರವಾಗಿ ಎರಡು ಗುಂಪುಗಳ ಮಧ್ಯೆ ಗಲಾಟೆ ನಡೆದಿದೆ. ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಪರಸ್ಪರ ಕಲ್ಲು ತೂರಾಟ ದೊಣ್ಣೆಗಳಿಂದ ಹೊಡೆದಾಡಿಕೊಂಡಿದ್ದಾರೆ. ಘರ್ಷಣೆಯಲ್ಲಿ ಇಬ್ಬರು ಪೊಲೀಸ್ ಕಾನ್‌ಸ್ಟೇಬಲ್ ಸೇರಿ ಕೆಲವರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಎರಡು ಗಣಪತಿ ಸಂಘಗಳು ಒಂದೇ ಡೊಳ್ಳಿನ ತಂಡದವರಿಗೆ ಹೇಳಿದ್ದರು. ಆದರೆ ಎರಡೂ ಸಂಘಗಳ ಮೆರವಣಿಗೆ ಒಂದೇ ವೇಳೆ ಇದ್ದಿದ್ದರಿಂದ ಡೊಳ್ಳಿನ ತಂಡಕ್ಕೆ ಇನ್ನೊಂದು ಗಣಪತಿ ಸಂಘದ ಮೆರವಣಿಗೆಗೆ ಹೋಗಲು ತಡವಾಗಿದೆ. ಇದರಿಂದ ಗಣಪತಿ ಸಂಘದವರು ಆಗಮಿಸಿದಾಗ ಗಲಾಟೆಯಾಗಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಸ್ಥಳದಲ್ಲಿ ಪೊಲೀಸ್ ತುಕಡಿ ನಿಯೋಜಿಸಲಾಗಿದೆ. ಘಟನಾ ಸ್ಥಳಕ್ಕೆ ಹೆಚ್ಚುವರಿ ಜಿಲ್ಲಾ ರಕ್ಷಣಾಧಿಕಾರಿ, ಭದ್ರಾವತಿ ಡಿವೈಎಸ್‌ಪಿ ಹಾಗೂ ಹೊಳೆಹೊನ್ನೂರು ಪೊಲೀಸ್ ಇನ್‌ಸ್ಪೆಕ್ಟರ್ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಗ್ರಾಮದ ಎರಡು ಸಂಘಟನೆಯವರು ಒಂದೇ ಡೊಳ್ಳಿನ ತಂಡಕ್ಕೆ ಬಾರಿಸಲು ಹೇಳಿದ್ದಾರೆ. ಡೊಳ್ಳಿನವರು ಮೊದಲನೇ ಗಣಪತಿ ಬಳಿ ಬಾರಿಸುವಾಗ, ಇನ್ನೊಂದು ಗಣಪತಿ ಸಂಘದವರು ಬಂದು ವಿಚಾರಿಸಿದ ವೇಳೆ ಮಾತಿಗೆ ಮಾತು ಬೆಳೆದು ಗಲಾಟೆ ನಡೆದಿದೆ. ಈ ವೇಳೆ ಗ್ರಾಮಸ್ಥರು ಸೇರಿದಂತೆ ನಮ್ಮ ಓರ್ವ ಪೊಲೀಸ್ ಸಿಬ್ಬಂದಿಗೂ ಸಣ್ಣ ಗಾಯವಾಗಿದೆ. ಸದ್ಯ ಗ್ರಾಮ ಶಾಂತಿಯುತವಾಗಿದೆ. ಇಂದೇ ಎಲ್ಲಾ ಗಣಪತಿ ನಿಮಜ್ಜನಕ್ಕೆ ಮನವಿ ಮಾಡಿದ್ದೆವು. ನಮ್ಮ ಪೊಲೀಸ್ ಸಿಬ್ಬಂದಿಯು ಗ್ರಾಮದಲ್ಲಿ ಬೀಡು ಬಿಟ್ಟಿದ್ದಾರೆ.

–ಮಿಥುನ್ ಕುಮಾರ್ ಎಸ್‌ಪಿ

ತಟ್ಟೆಯಲ್ಲಿ ಅನ್ನ ಬಿಟ್ಟರೆ ₹20 ಕಾಣಿಕೆ

ಬೆಳ್ತಂಗಡಿ ಗಣೇಶೋತ್ಸವದಲ್ಲಿ ಗಮನ ಸೆಳೆದ ಬೋರ್ಡ್

ಬೆಳ್ತಂಗಡಿ: ಅನ್ನಂ ಪರಬ್ರಹ್ಮ ಸ್ವರೂಪಂ ಅಂದ್ರೆ ನಾವು ತಿನ್ನುವ ಅನ್ನ ದೇವರಿಗೆ ಸಮಾನ ಎಂದರ್ಥ. ಹಾಗಾಗಿ ಊಟ ಮಾಡುವಾಗ ಆಹಾರ ಅರ್ಧಂಬರ್ಧ ತಿಂದು ಇನ್ನುಳಿದದ್ದನ್ನು ಕಸಕ್ಕೆ ಹಾಕುವ ಪ್ರವೃತ್ತಿ ಕೆಲವರಲ್ಲಿರುತ್ತೆ. ಈ ಹಿನ್ನೆಲೆ ಆಹಾರ ವ್ಯರ್ಥ ಮಾಡಬಾರದು ಎಂಬ ಉದ್ದೇಶದಿಂದ ತಟ್ಟೆಯಲ್ಲಿ ಅನ್ನ ಬಿಟ್ಟರೆ ರು. 20 ಕಾಣಿಕೆ ಹಾಕಬೇಕು ಎಂಬ ಬೋರ್ಡ್ ಅನ್ನು ಪಡಂಗಡಿ ಸಾರ್ವಜನಿಕ ಗಣೇಶೋತ್ಸವ ಕಾರ್ಯಕ್ರಮದಲ್ಲಿ ಅಳವಡಿಸಿರುವುದು ಎಲ್ಲರ ಗಮನ ಸೆಳೆಯುತ್ತಿದೆ.

ಸಾರ್ವಜನಿಕರ ಹಣ ಸಾಮಾಜಿಕವಾಗಿ ಉಪಯೋಗ ಆಗಬೇಕೇ ಹೊರತು ಈ ರೀತಿ ಹಾಳಾಗಬಾರದು ಎಂಬ ವಿಚಾರಕ್ಕೆ ಇಲ್ಲಿ ಗಣೇಶೋತ್ಸವ ಕಾರ್ಯಕ್ರಮ ದಲ್ಲಿ ಅನ್ನ ಹಾಳು ಮಾಡುವವರಿಗಾಗಿಯೇ ಈ ಬೋರ್ಡ್ ಅಳವಡಿಸಲಾಗಿದೆ. ಅದಲ್ಲದೇ ಅನ್ನ ಬಹಳ ಮೌಲ್ಯಯುತವಾದ ವಸ್ತು ಅದನ್ನು ಭಕ್ತಿಯಿಂದ ಸ್ವೀಕರಿಸಬೇಕು, ಬಿಸಾಡಬಾರದು ಎಂಬ ಸಂದೇಶ ಜನರಿಗೆ ತಿಳಿಯಬೇಕು ಎಂಬ ಉದ್ದೇಶದಿಂದ ಈ ರೀತಿಯ ಬೋರ್ಡ್ ಅಳವಡಿಸಲಾಗಿದೆ ಎಂದು ಸಮಿತಿಯ ಸಂತೋಷ್ ಜೈನ್ ಪಡಂಗಡಿ ಮಾಹಿತಿ ನೀಡಿದ್ದಾರೆ. ಇದೀಗ ಈ ಬೋರ್ಡ್ ಎಲ್ಲೆಡೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದು ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರಲ್ಲದೆ ಅನ್ನವನ್ನು ಬಿಸಾಡಬೇಡಿ ಬೆಲೆ ನೀಡಿ ಎಂಬ ಸಂದೇಶವನ್ನು ಹಾಕುತ್ತಿದ್ದಾರೆ.

ನೀರಲ್ಲಿ ಮುಳುಗಿ ಇಬ್ಬರು ಕಮಾಂಡೋಗಳ ಸಾವು

ತಿಲಾರಿ ಡ್ಯಾಂನಲ್ಲಿ ತರಬೇತಿ ವೇಳೆ ನಡೆದ ಘಟನೆ

ಬೆಳಗಾವಿ: ಡ್ಯಾಂ ಹಿನ್ನಿರಿನಲ್ಲಿ ತರಬೇತಿಗೆ ಹೋಗಿದ್ದ ಇಬ್ಬರು ಬೆಳಗಾವಿ ಕಮಾಂಡೋ ಸೆಂಟರ್‌ನ ಇಬ್ಬರು ಕಮಾಂಡೋಗಳು ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಶನಿವಾರ ನೆರೆಯ ಮಹಾರಾಷ್ಟ್ರದಲ್ಲಿರುವ ತಿಲಾರಿ ಡ್ಯಾಂ ನಲ್ಲಿ ನಡೆದಿದೆ.

ಬೆಳಗಾವಿಯ ಜೂನಿಯರ್ ಲೀಡರ್ (ಜೆಎಲ್) ವಿಂಗ್ ಕಮಾಂಡೋ ತರಬೇತಿ ಕೇಂದ್ರದ ರಾಜಸ್ಥಾನ ಮೂಲದ ವಿಜಯಕುಮಾರ ದಿನವಾಲ್ (28) ಹಾಗೂ ಪಶ್ಚಿಮ ಬಂಗಾಳದ ದಿವಾಕರ ರಾಯ್(26) ಮೃತಪಟ್ಟಿದ್ದಾರೆ. ರಾಜಪುತದ ರೈಫಲ್ಸ್ ಕಮಾಂಡೊ ಆಗಿದ್ದರು. ಚಂದಗಡ ತಾಲೂಕಿನ ಹಾಜಗೋಳಿ ಬಳಿ ಜವಾನರು ಕಮಾಂಡೋ ಸೆಂಟರ್‌ನ ಸೈನಿಕರಿಗೆ ನೀರಿನಲ್ಲಿ ತರಬೇತಿ ನೀಡುತ್ತಿದ್ದರು. ಬೋಟ್‌ನಲ್ಲಿದ್ದ ಆರು ಜನ ಸೈನಿಕರ ಪೈಕಿ ಇಬ್ಬರು ಮೃತಪಟ್ಟಿದ್ದು, ನಾಲ್ವರು ಈಜಿ ದಡ ಸೇರಿ ಬದುಕುಳಿದಿದ್ದಾರೆ. ಬೆಳಗಾವಿಯ ಕಮಾಂಡೋ ತರಬೇತಿ ವಿಭಾಗದ ಇಬ್ಬರು ಸೈನಿಕರು ತರಬೇತಿ ಪಡೆಯಲು ತಿಲ್ಲಾರಿ ಡ್ಯಾಂ ಹಿನ್ನೀರಿನ ಜಲಪ್ರದೇಶಕ್ಕೆ ತೆರಳಿದ್ದರು. ಹಿನ್ನೀರಿನ ಒಂದು ದಡದಿಂದ ಇನ್ನೊಂದು ದಡಕ್ಕೆ ಬೋಟ್‌ನಲ್ಲಿ ಆರು ಜನ ಸೈನಿಕರು ತೆರಳಿದ್ದರು. ನೀರಿನ ಮಧ್ಯದಲ್ಲಿಯೇ ಬೋಟ್ ಮುಳುಗಿದ್ದರಿಂದ ಇಬ್ಬರು ಮೃತಪಟ್ಟಿದ್ದಾರೆ. ಈ ಘಟನೆ ಸಂಬಂಸಿದಂತೆ ಜೆ ಎಲ್ ವಿಂಗ್‌ನ ಹಿರಿಯ ಅಧಿಕಾರಿಗಳು ಘಟನಾ ಸ್ಥಳಕ್ಕೆ ದೌಡಾಯಿಸಿ ಪರಿಶೀಲನೆ ನಡೆಸಿದರು. ಈ ಕುರಿತು ಚಂದಗಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿರತೆ ಮರಿ ಕಳೇಬರ ಪತ್ತೆ

ತುರುವೇಕೆರೆ: ತಾಲೂಕಿನ ಮಾವಿನಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಡಿಗೆರೆ ಗ್ರಾಮದ ಹೊರ ವಲಯದಲ್ಲಿ ಚಿರತೆ ಮರಿ ಕಳೇಬರ ಭಾನುವಾರ ಪತ್ತೆಯಾಗಿದೆ. ಗ್ರಾಮದ ರೈತರು ಭಾನುವಾರ ತೋಟಕ್ಕೆ ತೆರಳಿದ ವೇಳೆ ಜವರೇಗೌಡರ ಪಾಳು ಭೂಮಿಯಲ್ಲಿ ಚಿರತೆ ಕಳೇಬರ ಕಂಡಿದೆ.

ಅರಣ್ಯಾಧಿಕಾರಿ ಮತ್ತು ಸಿಬ್ಬಂದಿ ಸ್ಥಳ ಪರಿಶೀಲಿಸಿದ್ದಾರೆ. ಆರು ತಿಂಗಳ ಗಂಡು ಚಿರತೆ ಮರಿಯಾಗಿದ್ದು, ಎರಡೂ ಚಿರತೆಗಳು ಕಚ್ಚಾಡಿಕೊಂಡು ಮೃತಪಟ್ಟಿರುವ ಶಂಕೆ ವ್ಯಕ್ತಪಡಿಸಿದ್ದಾರೆ. ಪಶುವೈದ್ಯಾಧಿಕಾರಿ ಮರಣೋತ್ತರ ಪರೀಕ್ಷೆ ನಡೆಸಿದರು. ನ್ಯಾಯಾಲಯದ ಅನುಮತಿ ಪಡೆದು ಕಳೇಬರವನ್ನು ಸುಡಲಾಗುವುದು ಎಂದು ಅರಣ್ಯಾಧಿಕಾರಿ ತಿಳಿಸಿದ್ದಾರೆ.

ಮಹದಾಯಿ ಹಿನ್ನಡೆಗೆ ಕಾರಣ ಕಾಂಗ್ರೆಸ್

ಹಾವೇರಿ: ಮಹದಾಯಿ ಯೋಜನೆಗೆ ಹಿನ್ನಡೆ ಉಂಟುಮಾಡಿದ್ದು ಕಾಂಗ್ರೆಸ್ ಪಕ್ಷ ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಮಹದಾಯಿ ಕುರಿತು ಕೇಂದ್ರಕ್ಕೆ ಸರ್ವಪಕ್ಷ ನಿಯೋಗ ಕರೆದೊಯ್ಯುವುದಾಗಿ ಸಚಿವ ಎಚ್.ಕೆ. ಪಾಟೀಲ್‌ರ ಹೇಳಿಕೆಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ಯೋಜನೆಗೆ ಯಾರಾದರೂ ಹಿನ್ನಡೆ ಮಾಡಿದ್ದರೆ ಅದು ಕಾಂಗ್ರೆಸ್. ಮಹದಾಯಿಯ ಹನಿ ನೀರನ್ನೂ ಕರ್ನಾಟಕಕ್ಕೆ ಕೊಡುವುದಿಲ್ಲ ಎಂದು ಹಿಂದೆಯೇ ಸೋನಿಯಾ ಗಾಂಧಿ ಹೇಳಿದ್ದರು. ಅಗತ್ಯ ಇಲ್ಲದಿದ್ದರೂ ನ್ಯಾಯಾಧಿಕರಣ ರಚಿಸಿದ್ದರು ಎಂದು ಕಟುಟೀಕೆ ಮಾಡಿದರು.

ಸಂಪರ್ಕ ಕಾಲುವೆಗೆ ಗೋಡೆ ಕಟ್ಟಿದರು: ಮಹದಾಯಿ ನ್ಯಾಯಾಧೀಕರಣದ ಅಧ್ಯಕ್ಷರಿಗೆ ಒಂದು ಕಚೇರಿ ಕೂಡಾ ಕೊಡದೆ ವಿಳಂಬ ಮಾಡಿದ್ದರು. ಟ್ರಿಬ್ಯುನಲ್ ನಲ್ಲಿ ನಾವೇ ಬರೆದು ಕೊಟ್ಟು, ನಾವು ನಿರ್ಮಿಸಿದ ಅಂತರ ಸಂಪರ್ಕ ಕಾಲುವೆಗೆ ಕಾಂಗ್ರೆಸ್‌ನವರು ಗೋಡೆ ಕಟ್ಟಿದರು. ಇದೆಲ್ಲ ಇತಿಹಾಸ . ಈಗ ವನ್ಯಜೀವಿ ಮಂಡಳಿಯ ಅನುಮತಿ ಪಡೆಯಬೇಕು. ಅದಕ್ಕೆ ಈಗಾಗಲೇ ಕೇಂದ್ರ ಸಚಿವ ಜೋಶಿ ಉತ್ತರ ಕೊಟ್ಟಿದ್ದಾರೆ. ನಮಗೆ ಅನುಮತಿ ಸಿಗುತ್ತದೆ ಎಂಬ ವಿಶ್ವಾಸವಿದೆ. 11 ವಿಧೇಯಕಗಳನ್ನು ವಾಪಸ್ ಕಳುಹಿಸಿದ್ದಕ್ಕೆ ರಾಜ್ಯಪಾಲರ ವಿರುದ್ಧ ರಾಜ್ಯ ಸರಕಾರ ಕಾನೂನು ಹೋರಾಟ ನಡೆಸುವ ಚಿಂತನೆ ವಿಚಾರಕ್ಕೆ ಮಾತನಾಡಿ, ಕಾನೂನು ಹೋರಾಟ ಮಾಡಲು ಅವಕಾಶವಿದೆ, ಮಾಡಲಿ. ಆಗ ವಿಧೇಯಕಗಳು ಏಕೆ ವಾಪಸಾದವು ಎಂಬುದು ಬಹಿರಂಗವಾಗುತ್ತದೆ ಎಂದು ಬೊಮ್ಮಾಯಿ ಮಾರ್ಮಿಕವಾಗಿ ನುಡಿದರು.

ಪುರಸಭೆ ಕಾರ್ಯಾಲಯ ಸವಣೂರ
ಶಿಗ್ಗಾಂವ ರಸ್ತೆ, ಸವಣೂರ–581118 ಜಿ।ಹಾವೇರಿ Phone:08378 241623
website: http://savanurtown.mrc.gov.in
ಕ್ರ.ಸಂ/ಪುಸಸ/ತಾವಿ/15ನೇಹ/ಟೆಪ್ರ/ವಹಿ/2024–25 ದಿನಾಂಕ:–07-09-2024

ಇ–ಪ್ರೊಕ್ಯೂರಮೆಂಟ್ ಮೂಲಕ ಅಲ್ಪಾವಧಿ ಟೆಂಡರ ಪ್ರಕಟಣೆ

ಸನ್ 2024–25ನೇ ಸಾಲಿನ 15ನೇ ಹಣಕಾಸು ಯೋಜನೆಯ ನಿರ್ಬಂಧಿತ ಹಾಗೂ ಮುಕ್ತ ಅನುದಾನ ಮತ್ತು ಸನ್ 2024–25ನೇ ಎಸ್.ಎಫ್.ಸಿ ಅನುದಾನದಲ್ಲಿ 04 ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 2000 ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರ ಟೆಂಡರಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಕರ್ನಾಟಕ ಸ್ಟ್ಯಾಂಡರ್ಡ ಟೆಂಡರ ಡಾಕ್ಯುಮೆಂಟ್ಸ್ KW-1ರಂತೆ ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ಟೆಂಡರನಲ್ಲಿ ಬಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಕಾಮಗಾರಿಗಳ ವಿವರ, ಇ.ಎಂ.ಡಿ, ಟೆಂಡರ್ ಫಾರ್ಮ ಫೀ ಮತ್ತು ಗುತ್ತಿಗೆದಾರರ ದರ್ಜೆಗಳ ಬಗ್ಗೆ ಹಾಗೂ ಇತರೆ ಯಾವುದೇ ಹೆಚ್ಚಿನ ಮಾಹಿತಿ ಬೇಕಾದಲ್ಲಿ https://kppp.karnataka.gov.in/ನ ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ತಿಳಿದುಕೊಳ್ಳಬಹುದು ಹಾಗೂ ಕಛೇರಿ ವೇಳೆಯಲ್ಲಿ ಪುರಸಭೆಯ ತಾಂತ್ರಿಕ ವಿಭಾಗದಲ್ಲಿ ಕೇಳಿ ತಿಳಿದುಕೊಳ್ಳಬಹುದು ಟೆಂಡರಗಳ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಗಳ ವಿವರ :– 1) INDENT29449 – 6.50ಲಕ್ಷಗಳು 2) INDENT29451 –18.21ಲಕ್ಷಗಳು 3)INDENT29456 –3.34ಲಕ್ಷಗಳು 4) INDENT29462–7.00ಲಕ್ಷಗಳು.

1)ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಆನಲೈನ್‌ನಲ್ಲಿ ಅರ್ಜಿ ಸಲ್ಲಿಸಿ ದರವಾರು ಸಲ್ಲಿಸಲು ಕೊನೆಯ ದಿನಾಂಕ:20–09–2024 ಸಂಜೆ 5.00ಘಂಟೆವರೆಗೆ.

2)ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23–09–2024 ಸಂಜೆ 5.30 ಘಂಟೆ ನಂತರ ಆನಲೈನ್ ಮೂಲಕ.

ಸಹಿ/– ಮುಖ್ಯಾಧಿಕಾರಿ, ಪುರಸಭೆ ಸವಣೂರ
ಸಹಿ/– ಅಧ್ಯಕ್ಷರು, ಪುರಸಭೆ ಸವಣೂರ

ನಗರಸಭಾ ಕಾರ್ಯಾಲಯ, ಹರಿಹರ–577601
ಫೋ:08192–244266 ka.harihar.cmc@gmail.com
ನಂ.ನಸಹ/ತಾಂತ್ರಿಕ/ಸಿಆರ್–01/2024–25 ದಿನಾಂಕ: 05–09–2024

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2023–24ನೇ ಸಾಲಿನ 15ನೇ ಹಣಕಾಸು ಅನುದಾನ ಯೋಜನೆಯಡಿ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ–1999–2000ರ Act 2000ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1 ಮತ್ತು 2ರ ನಿಯಮದನ್ವಯ ಈ ಕೆಳಗಿನಂತೆ ಇಂಡೆಂಟ್ ನಂಬರ್ ನೀಡಲಾದ ಕಾಮಗಾರಿಗಳನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು ಇಚ್ಛೆಯುಳ್ಳ ಗುತ್ತಿಗೆದಾರರು ಈ ಕೆಳಗಿನ ಕಾಮಗಾರಿಗಳಿಗೆ ತಮ್ಮ ದರಗಳನ್ನು e-procurement ಮುಖಾಂತರ ಸಲ್ಲಿಸಲು ಕೋರಿದೆ. ಗುತ್ತಿಗೆದಾರರು ತಮಗೆ ಅನ್ವಯಿಸುವ ಟೆಂಡರ್ ದಾಖಲೆಗಳನ್ನುhttps://kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರ್‌ಗಳನ್ನು e-procurement ವೆಬ್‌ಸೈಟ್ ಮೂಲಕ ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಯನ್ನು ತಾಂತ್ರಿಕ ಶಾಖೆ ನಗರಸಭೆ, ಹರಿಹರ ಇವರಿಂದ ಪಡೆಯಬಹುದಾಗಿದೆ.

(1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 19–09–2024 ರಂದು ಸಾಯಂಕಾಲ 05–00 ಗಂಟೆಯವರೆಗೆ (2) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21–09–2024 ರಂದು ಬೆಳಿಗ್ಗೆ 11–30 ಗಂಟೆಗೆ **ಕಾಮಗಾರಿಗಳ ವಿವರ:–**
(1) DMA/2023-24/OW/WORK_INDENT17514 ಕಾಯ್ದಿರಿಸಿದೆ:–ಸಾಮಾನ್ಯ.
(2) DMA/2024-25/OW/WORK_INDENT17383 ಕಾಯ್ದಿರಿಸಿದೆ:–ಸಾಮಾನ್ಯ.
(3) DMA/2024-25/OW/WORK INDENT26040 ಕಾಯ್ದಿರಿಸಿದೆ:–ಸಾಮಾನ್ಯ.
(4) DMA/2024-25/OW/WORK_INDENT17512 ಕಾಯ್ದಿರಿಸಿದೆ:–ಸಾಮಾನ್ಯ.

ಸಹಿ/–ಪೌರಾಯುಕ್ತರು, ನಗರಸಭೆ, ಹರಿಹರ.
ವಾಸಾಇ/ಡಿವಿಜಿ/307/ಕೆಎಸ್‌ಎಂಸಿಎ/2024–25
ಸಹಿ/– ಆಡಳಿತಾಧಿಕಾರಿಗಳು ನಗರಸಭೆ, ಹರಿಹರ.

ಕುಕನೂರು: ಪತಿಯಿಂದಲೇ ಪತ್ನಿಯ ಕೊಲೆ?

ಕುಕನೂರು: ಮಕ್ಕಳಾಗಲಿಲ್ಲ ಎನ್ನುವ ಕಾರಣಕ್ಕೆ ಪತಿಯೇ ಪತ್ನಿಯನ್ನು ಕೊಲೆ ಮಾಡಿರುವ ಆರೋಪ ತಾಲೂಕಿನ ಅರಕೇರಿ ಗ್ರಾಮದಲ್ಲಿ ಕೇಳಿಬಂದಿದೆ.

ವಿವಾಹ ಪೂರ್ವದಿಂದಲೂ ಸಂಬಂಧಿಕರೇ ಆಗಿದ್ದ ಕೊಲೆ ಆರೋಪಿ ಅರಕೇರಿ ಗ್ರಾಮದ ದೇವರಡ್ಡೆಪ್ಪ ಭಾವಿಕಟ್ಟಿ ಹಾಗೂ ಗೀತಾ(25) ಆರು ವರ್ಷಗಳ ಹಿಂದೆ ದಾಂಪತ್ಯ ಬದುಕಿಗೆ ಕಾಲಿಟ್ಟಿದ್ದರು.

ಮಕ್ಕಳಾಗದ ಕಾರಣಕ್ಕೆ ಅವರ ನಡುವೆ ಹಲವು ಬಾರಿ ಸಂಘರ್ಷವಾಗಿತ್ತು. ಸೆ. 7ರಂದು ತಡರಾತ್ರಿ ತಮ್ಮ ಮನೆಯಲ್ಲಿ ಪತ್ನಿಗೆ ಕಟ್ಟಿಗೆಯಿಂದ ಮುಖಕ್ಕೆ ಹೊಡೆದು ಪತಿ ಗಾಯಗೊಳಿಸಿ ಕೊಲೆ ಮಾಡಿದ್ದಾನೆ ಎಂದು ಮೃತ ಗೀತಾ ಅವರ ಸಹೋದರ ಸಿದ್ದರೆಡ್ಡಿ ಗಿರಡ್ಡಿ ಇಲ್ಲಿನ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಾಗಿದೆ.

ಆರೋಪಿ, ಅವರ ತಂದೆ ಮಲ್ಲಾರಡ್ಡೆಪ್ಪ ಭಾವಿಕಟ್ಟಿ ಹಾಗೂ ಇತರರು ಗೀತಾ ಅವರ ಪೋಷಕರಿಗೆ ಸುಳ್ಳುಹೇಳಿ ಅವಸರದಿಂದಲೇ ಮೃತದೇಹವನ್ನು ಸುಟ್ಟು ಹಾಕಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಘಟನೆಯಿಂದಾಗಿ ಗ್ರಾಮದಲ್ಲಿ ನೀರವ ಮೌನ ಆವರಿಸಿತ್ತು.

ಘಟನೆ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಗೀತಾ ಅವರ ತಂದೆ ಈಶಪ್ಪ , ಮಾವನ ಮಗನಿಗೇ ಮಗಳನ್ನು ಕೊಟ್ಟಿದ್ದೆ. ಎರಡು ದಿನಗಳ ಹಿಂದೆ ರಾತ್ರಿ ನಮ್ಮ ಮನೆಗೆ ಬಂದು ಊಟ ಮಾಡಿ ಗಂಡನ ಮನೆಗೆ ಹೋಗಿದ್ದಳು. ರಾತ್ರಿ ವೇಳೆ ಕುಡಿದು ಬಂದ ಗಂಡ ಆಕೆಯನ್ನು ಹೊಡೆದು ಕೊಂದಿದ್ದಾನೆ. ಆಕೆಗೆ ಮಕ್ಕಳಾಗಿಲ್ಲ ಎನ್ನುವ ಒಂದು ಕಾರಣಕ್ಕೆ ಆಕೆಯನ್ನು ಕೊಂದಿದ್ದಾನೆ' ಎಂದು ಆರೋಪಿಸಿದರು.

ಪತ್ರಿಕಾ ವಿತರಕರ ರಾಜ್ಯ ಸಮ್ಮೇಳನದಲ್ಲಿ ಕೆ.ವಿ.ಪ್ರಭಾಕರ್ ಅಭಿಮತ

ವಿತರಕರೇ ಪತ್ರಿಕೋದ್ಯಮದ ನರಮಂಡಲ

ಚಿತ್ರದುರ್ಗ: ಪತ್ರಿಕಾ ವಿತರಕರೇ ಪತ್ರಿಕೋದ್ಯಮ ನರಮಂಡಲ ಎಂದು ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಪತ್ರಿಕಾ ವಿತರಕರ ನಾಲ್ಕನೇ ರಾಜ್ಯ ಸಮ್ಮೇಳನ ಉದ್ಘಾಟಿಸಿದ ಅವರು, ನಮ್ಮ ಹೃದಯಕ್ಕೆ, ಮೆದುಳಿಗೆ ರಕ್ತ , ಆಮ್ಲಜನಕ ಪೂರೈಸುವುದು ಈ ನರಮಂಡಲವೇ. ಹೀಗೆ ಪತ್ರಿಕೋದ್ಯಮದ ನರಮಂಡಲ ನಮ್ಮ ಪತ್ರಿಕಾ ವಿತರಕರು ಎಂದರು.

ಸುದ್ದಿಮನೆಯಲ್ಲಿ ಲೇಔಟ್ ಆಗಿ, ಪ್ರೆಸ್‌ನಲ್ಲಿ ಮುದ್ರಣವಾಗುವ ಪತ್ರಿಕೆಗಳನ್ನು ರಾಜ್ಯದ ಮೂಲೆಮೂಲೆಯಲ್ಲಿರುವ ಓದುಗರ ಮನೆ ಬಾಗಿಲಿಗೆ ತಲುಪಿಸಲು ಪತ್ರಿಕಾ ವಿರತಕರ ನರಮಂಡಲ ವ್ಯವಸ್ಥಿತವಾಗಿರಬೇಕು. ಸುದ್ದಿಮನೆಗಳು ಎಷ್ಟೇ ಹೈಟೆಕ್ ಆಗಿದ್ದರೂ,ಮುದ್ರಣಾಲಯಗಳು ಎಷ್ಟೇ ಆಧುನಿಕವಾಗಿದ್ದರೂ ಪತ್ರಿಕಾ ವಿತರಕರ ನರಮಂಡಲ ಸರಿಯಾಗಿ ಇಲ್ಲ ಅಂದರೆ ಪ್ರಯೋಜನವಿಲ್ಲ ಎಂದು ಪ್ರಭಾಕರ್ ವಿಶ್ಲೇಷಿಸಿದರು.

ಆರ್ಥಿಕತೆಗೆ ವಿತರಕರ ಕೊಡುಗೆ: ಪತ್ರಿಕಾ ವಿತರಕರು ಆರ್ಥಿಕವಾಗಿ ಹಿಂದುಳಿದ ಕುಟುಂಬದ ಹಿನ್ನಲೆಯುಳ್ಳವರಾಗಿದ್ದು, ವಿದ್ಯಾರ್ಥಿಗಳಿಂದ ವಯಸ್ಕರವರೆಗೂ ಪ್ರತಿನಿತ್ಯ ಸೂರ್ಯ ಉದಯಿಸುವ ಮೊದಲೇ ಚಳಿ, ಮಳೆ ಎನ್ನದೆ ಪತ್ರಿಕೆಯನ್ನು ಮನೆಮನೆಗೆ ತಲುಪಿಸುತ್ತಾರೆ. ವಿತರಕ ವಿದ್ಯಾರ್ಥಿಗಳು ಓದಿನ ಜೊತೆಗೆ ದುಡಿಮೆಯಲ್ಲೂ ತೊಡಗುತ್ತಾರೆ. ಇದು ಅವರ ಕುಟುಂಬಕ್ಕೆ ಮತ್ತು ನಾಡಿನ ಆರ್ಥಿಕತೆಗೂ ಅವರ ಪಾಲಿನ ಕೊಡುಗೆ ಕೊಟ್ಟಂತೆ ಎಂದರು.

ನಾನೂ ಕೂಡ ಮಾಧ್ಯಮ ಸಂಸ್ಥೆಗಳು, ಸರಕಾರ ಮತ್ತು ಖಾಸಗಿ ಕಂಪನಿಗಳ ಸಹಯೋಗದಲ್ಲಿ ಸಿಎಸ್ ಆರ್ ನಿಧಿಯ ನೆರವಿನಿಂದ ಏನೆಲ್ಲಾ ಮಾಡಬಹುದು ಎನ್ನುವ ಬಗ್ಗೆ ಯೋಜನೆ ಮಾಡುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಇವೆಲ್ಲಾ ಸಾಕಾರಗೊಳ್ಳಬಹುದು ಎನ್ನುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ತರಳಬಾಳು ಶ್ರೀಗಳಾಗದ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ, ಭೋವಿ ಮಠದ ಇಮ್ಮಡಿ ಸಿದ್ದರಾಮೇಶ್ವರ ಶ್ರೀಗಳ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ವಿಆರ್ ಎಲ್ ಸಮೂಹ ಸಂಸ್ಥೆಗಳ ಮಾಲೀಕ ವಿಜಯ ಸಂಕೇಶ್ವರ, ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಚಿತ್ರದುರ್ಗದಲ್ಲಿ ನಡೆದ ಪತ್ರಿಕಾ ವಿತರಕರ ನಾಲ್ಕನೇ ರಾಜ್ಯ ಸಮ್ಮೇಳನದಲ್ಲಿ ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಮಾತನಾಡಿದರು.

ವಿತರಕರ ಕಲ್ಯಾಣಕ್ಕೆ ಪ್ರತ್ಯೇಕ ನಿಧಿ ಅವಶ್ಯ

ಪತ್ರಿಕೆ ವಿತರಕರ ಸಮಗ್ರ ಕಲ್ಯಾಣಕ್ಕೆ ಪ್ರತ್ಯೇಕ ನಿಧಿ ಸ್ಥಾಪನೆ ಮಾಡಬೇಕು. ಉಚಿತ ಪಡಿತರ, ವಿದ್ಯಾರ್ಥಿ ವೇತನ ನೀಡಬೇಕು. ಜೀವವಿಮೆ, ಆರೋಗ್ಯ ಕಾರ್ಡ್ ನೀಡಬೇಕು. ಬೈಕ್, ಸೈಕಲ್ ಖರೀದಿಸಲು ಶೇ.50 ರಷ್ಟು ರಿಯಾಯ್ತಿ ಒದಗಿಸಬೇಕು, ಜರ್ಕಿನ್ ಗಳನ್ನು ಒದಗಿಸಬೇಕು. ಜೀವವಿಮೆ ಮಾಡಿಸಿಕೊಡಬೇಕು ಎನ್ನುವ ಬಹು ವರ್ಷಗಳ ಬೇಡಿಕೆಗಳಿವೆ. ಎಲ್ಲವನ್ನೂ ಸರಕಾರವೇ ನೇರವಾಗಿ ಒದಗಿಸುವುದು ಕಷ್ಟ. ಹೀಗಾಗಿ ಮಾಧ್ಯಮ ಸಂಸ್ಥೆಗಳು ಖಾಸಗಿ ಕಂಪನಿಗಳ ಸಹಯೋಗದಲ್ಲಿ ಸಿಎಸ್‌ಆರ್ ಬಳಸಿಕೊಂಡು ಈ ಬೇಡಿಕೆಗಳಲ್ಲಿ ಬಹಳಷ್ಟನ್ನು ಈಡೇರಿಸಬಹುದು ಎಂದು ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ತಿಳಿಸಿದರು.

ಬೆಂಗಳೂರಿನಲ್ಲಿ ಶೇ.30 ವಾಯುಮಾಲಿನ್ಯ ಕಡಿಮೆ

← ಮೊದಲಪುಟದಿಂದ

ರಾಜ್ಯದ ದಾವಣಗೆರೆ, ರಾಷ್ಟ್ರ ರಾಜಧಾನಿ ದೆಹಲಿ, ಹೌರಾ, ಥಾಣೆ, ಚಿತ್ತೂರು, ಕಾಲಾ ಅಂಬ್, ಮಂಡಿ ಗೋವಿಂದಗಡ, ಅಮರಾವತಿ, ಪಟಿಯಾಲಾ, ಜೈಪುರ, ಒಂಗೋಲ್, ಚಂದ್ರಾಪುರ, ನಾಸಿಕ್, ಝೂನ್ಸಿ, ಸಾಂಗ್ಲಿ, ಕೋಟಾ ಮತ್ತು ರಾಜಮುಂಡ್ರಿಗಳಲ್ಲಿ ಪಿಎಂ10 ವಾಯುಮಾಲಿನ್ಯ ಶೇ.10ರಿಂದ 20ರಷ್ಟು ಇಳಿಕೆಯಾಗಿದೆ. ಗಾಳಿಯ ಗುಣಮಟ್ಟ/ವಾಯು ಮಾಲಿನ್ಯದ ಪ್ರಮಾಣವನ್ನು ಮೌಲ್ಯಮಾಪನ ಮಾಡುವಾಗ ಸಾಮಾನ್ಯವಾಗಿ 10 ಮೈಕ್ರಾನ್‌ಗಿಂತ ಕಡಿಮೆ ತೂಕದ ಮಾಲಿನ್ಯಕಾರಕ ಕಣಗಳನ್ನು ಮಾತ್ರ ಪರಿಗಣಿಸಲಾಗುತ್ತದೆ.

50 ವರ್ಷದಲ್ಲಾಗದ ರೈಲ್ವೆ ಕೆಲಸ ಮಾಡಿ ತೋರಿಸುವೆ

ನಾಗಮಂಗಲ: ಕಳೆದ 50 ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಆಗದಿರುವ ರೈಲ್ವೆಯೋಜನೆಯ ಕೆಲಸಗಳನ್ನು ಮುಂದಿನ 2 ವರ್ಷಗಳಲ್ಲಿ ಮಾಡಿ ತೋರಿಸುತ್ತೇನೆ ಎಂದು ಜಲಶಕ್ತಿ ಮತ್ತು ರೈಲ್ವೆ ರಾಜ್ಯಖಾತೆ ಸಚಿವ ವಿ.ಸೋಮಣ್ಣ ಹೇಳಿದರು.

ಆದಿಚುಂಚನಗಿರಿ ಮಠಕ್ಕೆ ಭಾನುವಾರ ಭೇಟಿ ನೀಡಿದ ವೇಳೆ ಸಚಿವ ಸೋಮಣ್ಣ ಸುದ್ದಿಗಾರರೊಂದಿಗೆ ಮಾತನಾಡಿ, ಆಂಧ್ರಪ್ರದೇಶದ ರಾಯದುರ್ಗ– ತುಮಕೂರು ನಡುವಿನ 206 ಕಿ.ಮೀ. ಉದ್ದದ ರೈಲ್ವೆ ಯೋಜನೆಗೆ ಈಗಾಗಲೇ ಭೂಸ್ವಾಧೀನ ಮಾಡಲಾಗಿದೆ. 6 ಸಾವಿರ ಕೋಟಿಯ ಕಾಮಗಾರಿಯಾಗಿದ್ದು ಈಗಾಗಲೇ 4 ಭಾಗದಲ್ಲಿ ಕಾಮಗಾರಿ ನಡೆಯುತ್ತಿದೆ. ತುಮಕೂರು, ಚಿತ್ರದುರ್ಗ, ದಾವಣಗೆರೆ ಮಾರ್ಗದ 192 ಕಿ.ಮೀ. ಉದ್ದದ ರೈಲ್ವೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ ಎಂದರು.

ಬಾಲಗಂಗಾಧರನಾಥ ಶ್ರೀಗಳ ಹೆಸರು: ರಾಜ್ಯದಲ್ಲಿನ ರೈಲ್ವೆಗೆ ಬಾಲಗಂಗಾಧರನಾಥ ಸ್ವಾಮೀಜಿ ಅವರ ಹೆಸರಿಡುವಂತೆ ಆದಿಚುಂಚನಗಿರಿ ಮಠದ ಭಕ್ತರು ಮನವಿ ಸಲ್ಲಿಸಿದ್ದಾರೆ. ಆದಿಚುಂಚನಗಿರಿಮಠ ಒಂದು ವರ್ಗಕ್ಕೆ ಸೀಮಿತವಾಗಿಲ್ಲ, ನಾನು 1999ರಲ್ಲಿ ಸ್ವತಂತ್ರವಾಗಿ ಶಾಸಕನಾಗಿದ್ದು ಬಾಲಗಂಗಾಧರನಾಥ ಸ್ವಾಮೀಜಿ ಮತ್ತು ಸಿದ್ದಗಂಗೆಯ ಶಿವಕುಮಾರಸ್ವಾಮೀಜಿ ಅವರ ಆಶೀರ್ವಾದದಿಂದ. ನರೇಂದ್ರಮೋದಿ ಅವರ ದೂರದೃಷ್ಟಿಯ ಯೋಜನೆಗಳಿಂದ ರಾಜ್ಯಕ್ಕೆ ಅನುಕೂಲವಾಗಲಿದೆ. ಅವುಗಳನ್ನು ಮಾಡಿ ತೋರಿಸುವ ಮೂಲಕ ರೈಲ್ವೆ ಯೋಜನೆಗಳ ಮೂಲಕ ರಾಜ್ಯವೇ ಹೆಮ್ಮೆ ಪಡುವಂತೆ ಮಾಡಿ ತೋರಿಸುತ್ತೇನೆ ಎಂದರು.

ಕಾಲಭೈರವನಿಗೆ ಪೂಜೆ: ಆದಿಚುಂಚನಗಿರಿ ಮಠಕ್ಕೆ ಆಗಮಿಸಿದ ಸಚಿವ ವಿ.ಸೋಮಣ್ಣ ಶ್ರೀಕಾಲಭೈರವೇಶ್ವರಸ್ವಾಮಿಗೆ ಪೂಜೆ ಸಲ್ಲಿಸಿದರು.ನಂತರ ಬಾಲಗಂಗಾಧರನಾಥ ಸ್ವಾಮೀಜಿ ಅವರ ಗದ್ದುಗೆಗೆ ಪೂಜೆ ಸಲ್ಲಿಸಿದರು. ಬಳಿಕ ನಿರ್ಮಲಾನಂದನಾಥ ಶ್ರೀಗಳ ಆಶೀರ್ವಾದ ಪಡೆದು ಕೆಲಕಾಲ ಮಾತುಕತೆ ನಡೆಸಿದರು. ಗ್ರಾಮಾಂತರ ಶಾಸಕ ಸುರೇಶ್ ಗೌಡ, ಮುಖಂಡ ಗೌರೀಶ್ ಇದ್ದರು.

ಟ್ವೀಟೂ-ಖಾರಾ

ಕಾಂಗ್ರೆಸ್, ಕರ್ನಾಟಕ

ಭಾರತ ಐಕ್ಯತಾ ಯಾತ್ರೆ.. ಪ್ರೀತಿ ಮತ್ತು ಸಹೋದರತ್ವದ ಆ ಅಧ್ಯಾಯ ಇಡೀ ಭಾರತವನ್ನೇ ಒಗ್ಗೂಡಿಸಿತು. ಭಾರತ ಪ್ರೀತಿಯ ದೇಶ. ಇಲ್ಲಿ ದ್ವೇಷಕ್ಕ ಜಾಗವಿಲ್ಲ ಎಂಬುದನ್ನು ಅದು ಸಾಬೀತುಪಡಿಸಿತು. ಯಾತ್ರೆ ಜಾರಿಯಲ್ಲಿದೆ...

ಅರವಿಂದ ಹೊಸಮನೆ, ಬೆಂಗಳೂರು

ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ ಪ್ರಜಾಪ್ರಭುತ್ವದ ಅಡಿಪಾಯಗಳಾದ ಸಹಕಾರಿ ಸಂಘಗಳು ಸಾರ್ವಜನಿಕ ಸಂಸ್ಥೆಗಳು, ಉದ್ದಿಮೆಗಳನ್ನು ನಡೆಸಲಾಗದೆ ಖಾಸಗೀಕರಣಕ್ಕೆ ಮಣೆ ಹಾಕಿ ನಕಲಿ ಜಾತ್ಯತೀತದಡಿ ಕೆಟ್ಟ, ಸ್ವಾರ್ಥ ರಾಜಕಾರಣಿಗಳನ್ನು ಹುಟ್ಟುಹಾಕಿದ್ದೇ ಸಾಧನೆ. ಒಂದೇ ರಾಷ್ಟ್ರ ಒಂದೇ ಕಾನೂನು ಇರುವ ಏಕರೂಪ ನಾಗರಿಕ ಸಂಹಿತೆ ಜಾರಿಮಾಡಲಿಲ್ಲ.

ಸಮಾಚಾರ ಸಣ್ಣದಲ್ಲ

ಸಾರಿಗೆ ಬಸ್ ಹರಿದು ಬಾಲಕ ಸಾವು

ಅಥಣಿ: ಅಥಣಿ ಪಟ್ಟಣ ಶಂಕರ ನಗರದ ರಸ್ತೆ ಬದಿ ನಿಂತಿದ್ದ ಬಾಲಕನ ಮೇಲೆ ವಾಯುವ್ಯ ಕರ್ನಾಟಕ ಸಾರಿಗೆ ಬಸ್ ಹರಿದ ಪರಿಣಾಮ ಬಾಲಕ ಸ್ಥಳದಲ್ಲೇ

ಮೃತಪಟ್ಟ ಘಟನೆ ರವಿವಾರ ಮುಂಜಾನೆ ಜರುಗಿದೆ. ಸೃಜನ ಸುನೀಲ ಬಂಡರಗರ (10 ವರ್ಷ) ಮೃತ ದುರ್ದೈವಿ. ಶಂಕರ್ ನಗರದ ಟ್ಯೂಷನ್ ಕೇಂದ್ರದಲ್ಲಿ ಟ್ಯೂಷನ್ ಮುಗಿಸಿಕೊಂಡು ಮೂತ್ರ ವಿಸರ್ಜನೆಗೆಂದು ರಸ್ತೆ ಬದಿ ಗೆಳೆಯರ ಜತೆ ನಿಂತಿದ್ದ. ಈ ವೇಳೆ ಅಥಣಿಯಿಂದ ಕಾರವಾರಕ್ಕೆ ಹೊರಟಿದ್ದ ಸರಕಾರಿ ಬಸ್ ಶರವೇಗದಲ್ಲಿ ಬಂದು ಹುಡುಗರ ಮೇಲೆಯೇ ಬರುತ್ತಿರುವುದನ್ನು ಕಂಡು ಕೆಲವು ಮಕ್ಕಳು ಓಡಿ ಹೋಗಿದ್ದು, ಸೃಜನ ಎಂಬ ಬಾಲಕನಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಚಾಲಕನ ನಿರ್ಲಕ್ಷ್ಯಕ್ಕೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಥಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೋಟೆಲ್‌ಗೆ ಒಂಟಿ ಸಲಗ ಎಂಟ್ರಿ

ಚಾಮರಾಜನಗರ: ಪ್ರಸಿದ್ಧ ಪ್ರವಾಸಿ ತಾಣ ಯಳಂದೂರು ತಾಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ಕಾಡಾನೆಯೊಂದು ಸೀದಾ ಹೋಟೆಲ್ ಪ್ರವೇಶಿಸಿ ಕೆಲಕಾಲ ಜನರನ್ನು ಬೆಚ್ಚಿಬೀಳಿಸಿದೆ. ಬಿಳಿಗಿರಿರಂಗನ

ಬೆಟ್ಟದಲ್ಲಿ ಶನಿವಾರ ರಾತ್ರಿ ಕಾಡಾನೆ ಕಾಣಿಸಿಕೊಂಡಿದ್ದು, ಪ್ರವಾಸೋದ್ಯಮ ಇಲಾಖೆಯು ನಡೆಸುತ್ತಿರುವ ಹೋಟೆಲ್ ಮಯೂರ ಆವರಣದಲ್ಲಿ ಓಡಾಡಿದೆ. ಆನೆ ಸಂಚಾರ ನೋಡಿ ಅಲ್ಲಿದ್ದವರು ಬೆಚ್ಚಿಬಿದ್ದರು. ಆನೆ ಬಂದದ್ದನ್ನು ಗಮನಿಸಿದ ಸಿಬ್ಬಂದಿ ಗದ್ದಲ ಮಾಡಿ ಓಡಿಸಿ ಹೋಟೆಲ್ ಗೇಟ್ ಮುಚ್ಚಿದ್ದಾರೆ. ಆನೆ ಓಡಾಟದ ವಿಡಿಯೋ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಕಳೆದ ಕೆಲವು ದಿನಗಳ ಹಿಂದೆಯಷ್ಟೇ ಆನೆಯೊಂದು ಬೆಟ್ಟದ ತೇರಿನ ಬೀದಿಗೆ ಅಂಗಡಿಗಳ ಮೇಲೆ ದಾಳಿ ಮಾಡಿತ್ತು. ಹಲಸಿನ ಹಣ್ಣಿನ ಆಸೆಗೆ ಬರುತ್ತಿದ್ದ ಕಾಡಾನೆ ಈಗ ವಸತಿ ಪ್ರದೇಶಗಳಲ್ಲೂ ಓಡಾಡುತ್ತಿರುವುದು ಸ್ಥಳೀಯರನ್ನು ಆತಂಕಕ್ಕೆ ಗುರಿಮಾಡಿದೆ.

ಸಿಲಿಂಡರ್ ಸ್ಫೋಟ: ನಾಲ್ವರಿಗೆ ಗಂಭೀರ ಗಾಯ

ಹುಬ್ಬಳ್ಳಿ: ಗೃಹ ಬಳಕೆ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ನಾಲ್ವರು ಗಂಭೀರವಾಗಿ ಗಾಯಗೊಂಡ ಘಟನೆ ಕುಂದಗೋಳ ತಾಲೂಕಿನ ರೊಟ್ಟಿಗವಾಡ ಗ್ರಾಮದಲ್ಲಿ ನಡೆದಿದೆ.ಮನೆಯ ಯಜಮಾನ ಸಿದ್ದಲಿಂಗಯ್ಯ ಹಿರೇಮಠ(43), ಪತ್ನಿ ವಿಶಾಲಾ ಹಿರೇಮಠ (35), ಪುತ್ರ ಶ್ರೀಪಾದಯ್ಯ ಹಿರೇಮಠ 17, ಸಿದ್ದಲಿಂಗಯ್ಯ ಅವರ ತಮ್ಮನ ಹೆಂಡತಿ ನಿರ್ಮಲಾ ಹಿರೇಮಠಗೆ ಗಂಭೀರ ಗಾಯಗಳಾಗಿದ್ದು, ಗಾಯಗಳು ಗಳನ್ನು ಕೆಎಂಸಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಭಾನುವಾರ ಬೆಳಗ್ಗೆ ಅಡುಗೆ ಮನೆಯಲ್ಲಿದ್ದ ಸಿಲಿಂಡರ್ ಏಕಾಏಕಿ ಸ್ಫೋಟಗೊಂಡಿದೆ. ಪರಿಣಾಮವಾಗಿ ಅಡುಗೆ ಮನೆಯಲ್ಲಿದ್ದ ಇಬ್ಬರು ಸೇರಿ ಬಾತ್ ರೂಮ್ನಲ್ಲಿದ್ದವರಿಗೆ ಗಂಭೀರ ಗಾಯಗಳಾಗಿವೆ. ಸಿಲಿಂಡರ್ ಸ್ಫೋಟದ ದಿಂದಾಗಿ ಮನೆಗೂ ಹಾನಿಯಾಗಿದೆ. ಗಾಯಾಳುಗಳಿಗೆ ಕೆಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕುಂದ ಗೋಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

{**ಎಚ್.ಡಿ.ಕುಮಾರಸ್ವಾಮಿ**} ಕೇಂದ್ರ ಸಚಿವ

ಭಾರತದ ಹೆಮ್ಮೆಯ ಕಾರ್ಖಾನೆಗಳಲ್ಲಿ ಒಂದಾಗಿದ್ದ ಎಚ್‌ಎಂಟಿ ಕಾರ್ಖಾನೆಗೆ ಕಾಯಕಲ್ಪ ನೀಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ಪ್ರಧಾನಿ ಮಾರ್ಗದರ್ಶನದಲ್ಲಿ ಎಲ್ಲ ರೀತಿಯ ಮಾರ್ಗೋಪಾಯ ಹುಡುಕಲಾಗುತ್ತಿದೆ. ಈಗಾಗಲೇ ನಾನು ದೇಶದ ಬಹುತೇಕ ಎಲ್ಲ ರಾಜ್ಯಗಳ ಘಟಕಗಳಿಗೆ ಭೇಟಿ ನೀಡಿದ್ದೇನೆ.



ಡೆಂಘೀ ಪ್ರಕರಣ ಹೆಚ್ಚಿದಂತೆ ಪ್ಯಾರಾಸಿಟಮಾಲ್‌ಗೆ ಬೇಡಿಕೆ | 500ಎಂಜಿ ಮಾತ್ರೆ ಖರೀದಿಸದ ಆರೋಗ್ಯಾಧಿಕಾರಿಗಳು | 3 ಸಾವಿರಕ್ಕೂ ಅಧಿಕ ಆಸ್ಪತ್ರೆಗಳಲ್ಲಿ ಪ್ಯಾರಾಸಿಟಮಲ್ ಕೊರತೆ

ಪ್ಯಾರಾಸಿಟಮಾಲ್ ಮಾತ್ರೆ ದಾಸ್ತಾನಿಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಡೆಂಘೀ ಪ್ರಕರಣಗಳು ಹೆಚ್ಚಾಗುತ್ತಿದ್ದು, ಈ ಜ್ವರದಿಂದ ಬಳಲುತ್ತಿರುವ ರೋಗಿಗಳಿಗೆ ನೀಡಬೇಕಾದ ಔಷಧಗಳು ಸೂಕ್ತ ಪ್ರಮಾಣದಲ್ಲಿ ದಾಸ್ತಾನು ಮಾಡಿಕೊಳ್ಳದಿರುವುದು ತಡವಾಗಿ ಬೆಳಕಿಗೆ ಬಂದಿದೆ.

ಆಸ್ಪತ್ರೆಗಳಿಗೆ ದಾಖಲಾಗುವ ರೋಗಿಗಳಿಗೆ ಪ್ಯಾರಾಸಿಟಮಾಲ್ 500 ಎಂಜಿ ಸೇರಿ ಇತರ ಔಷಧ ನೀಡಬೇಕಾಗುತ್ತದೆ. ಸೂಕ್ತ ಔಷಧ ನೀಡಿದರೆ ಮಾತ್ರವೇ ಈ ಕಾಯಿಲೆ ವಾಸಿಯಾಗುತ್ತದೆ. ಇಲ್ಲದಿದ್ದರೆ, ರೋಗಿಗಳ ಪ್ರಾಣಕ್ಕೆ ತೊಂದರೆಯಾಗುತ್ತದೆ. ಹೀಗಿರುವಾಗ, ಆರೋಗ್ಯ ಇಲಾಖೆ ಅಧೀನದ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ (ಕೆಎಸ್‌ಎಂಎಸ್‌ಸಿಎಲ್) ಅಧಿಕಾರಿಗಳು ಪ್ಯಾರಾಸಿಟಮಾಲ್ 500 ಎಂಜಿ ಮಾತ್ರೆಯನ್ನು ಖರೀದಿಸಿ ದಾಸ್ತಾನು ಮಾಡಿಕೊಂಡಿಲ್ಲ. ಇದರಿಂದಾಗಿ ಮೂರು ಸಾವಿರಕ್ಕೂ ಅಧಿಕ ಸರಕಾರಿ ಆಸ್ಪತ್ರೆಗಳಲ್ಲಿ ಈ ಔಷಧ ಕೊರತೆ ಎದುರಾಗಿದೆ.

ಡೆಂಘೀ ತೀವ್ರ ಸ್ವರೂಪ : ರಾಜ್ಯದಲ್ಲಿ ಪ್ರಸಕ್ತ ವರ್ಷ ಡೆಂಘೀ ಜ್ವರ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಇದೇ ಮೊದಲ ಬಾರಿಗೆ 25 ಸಾವಿರಕ್ಕೂ ಅಧಿಕ ಡೆಂಘೀ ಪ್ರಕರಣ ವರದಿಯಾಗಿವೆ. ಈವರೆಗೂ (ಸೆ. 4) 25,802 ಮಂದಿ ಸೋಂಕಿನಿಂದ ಬಳಲಿದ್ದು, 12 ಮಂದಿ ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಡೆಂಘೀ ಪ್ರಕರಣಗಳು ಗಮನಾರ್ಹವಾಗಿ ಏರಿಕೆ ಕಂಡಿದ್ದು, ಆ. 3ರವರೆಗೆ ವರದಿಯಾದ ಸಂಖ್ಯೆಗಳು ಕಳೆದ ವರ್ಷ (2023ರ) ವರದಿಯಾಗಿದ್ದ ಒಟ್ಟು (16,539) ಪ್ರಕರಣಗಳನ್ನು ಮೀರಿದೆ. ಕಳೆದ 45 ದಿನಗಳಲ್ಲಿ 15 ಸಾವಿರಕ್ಕೂ ಅಧಿಕ ಮಂದಿಗೆ ಸೋಂಕು ದೃಢಪಟ್ಟಿದೆ. ಕೇವಲ ಒಂದು ತಿಂಗಳಲ್ಲಿ (ಆಗಸ್ಟ್) 6 ಸಾವಿರಕ್ಕೂ ಅಧಿಕ ಪ್ರಕರಣ ವರದಿಯಾಗಿವೆ. ಆರೋಗ್ಯ ಇಲಾಖೆ ಅಂಕಿ-ಅಂಶಗಳ ಪ್ರಕಾರ, ಬುಧವಾರದ ವೇಳೆಗೆ 1,526 ಸಕ್ರಿಯ ಪ್ರಕರಣಗಳಿವೆ. ಅದರಲ್ಲಿ 193 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ. ನಾಲ್ವರ ಸ್ಥಿತಿ ಗಂಭೀರವಾಗಿದ್ದು, ತುರ್ತು ನಿಗಾ ಘಟಕದಲ್ಲಿದ್ದಾರೆ.

526 ಹಸುಗೂಸುಗಳಿಗೆ ಸೋಂಕು: ಈವರೆಗೂ ವರದಿಯಾಗಿರುವ 25,589 ಪ್ರಕರಣಗಳಲ್ಲಿ 526 ಸೋಂಕಿತರು ಒಂದು ವರ್ಷದೊಳಗಿನ ಮಕ್ಕಳಾಗಿದ್ದಾರೆ. 9,193 ಮಂದಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿದ್ದಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಮೂವರು, ಶಿವಮೊಗ್ಗ, ಧಾರವಾಡ ಮತ್ತು ಹಾಸನದಲ್ಲಿ ತಲಾ ಇಬ್ಬರು ಹಾಗೂ ದಾವಣಗೆರೆ, ಹಾವೇರಿ ಮತ್ತು ಮೈಸೂರಿನಲ್ಲಿ ತಲಾ ಒಬ್ಬರಂತೆ ಈವರೆಗೂ 12 ಮಂದಿ ಡೆಂಘೀ ಜ್ವರಕ್ಕೆ ಬಲಿಯಾಗಿದ್ದಾರೆ. ಸಾಲುಸಾಲು ವಿವಾದ, ಎಡವಟ್ಟುಗಳ ಮೂಲಕ ಅಪಖ್ಯಾತಿಗೀಡಾಗಿರುವ ಕರ್ನಾಟಕ ರಾಜ್ಯ ನಿಗಮವು ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ಎಂಬ ಪರಿಪಾಠ ಬೆಳೆಸಿಕೊಂಡಿದೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಡೆಂಘೀ ನಿಯಂತ್ರಿಸುವ ಔಷಧಗಳನ್ನು ಖರೀದಿಸಿ ಸರಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಬೇಕಿದ್ದ ನಿಗಮಕ್ಕೆ ಅಧಿಕಾರಿಗಳು ಕ್ಯಾರೆ ಎನ್ನುತ್ತಿಲ್ಲ ಎಂದು ಸಾರ್ವಜನಿಕ ವಲಯದಲ್ಲಿ ದೂರು ಕೇಳಿಬಂದಿದೆ.

ಜು.4ರ ವೇಳೆಗೆ 3.7 ಕೋಟಿ ಮೌಲ್ಯದ ಮಾತ್ರೆ ಲಭ್ಯ

ಇತ್ತೀಚಿಗೆ ಡೆಂಘೀ ಜ್ವರ ಹೆಚ್ಚಳ ಹಿನ್ನೆಲೆ ಪ್ಯಾರಸಿಟಮಾಲ್ ಮಾತ್ರೆ ಕೊರತೆ ಆರೋಪ ಕೇಳಿ ಬಂದಿತ್ತು. ಕೆಎಸ್ ಎಂಎಸ್‌ಎಲ್ ಸಂಸ್ಥೆಯು ಅವಶ್ಯಕ ಔಷಧಗಳನ್ನು ದಾಸ್ತಾನು ನೀಡಿದೆ. ವಾರ್ಷಿಕ ಬೇಡಿಕೆಯ ಟೆಂಡರ್ ಮಾಡಿ ಅವಶ್ಯಕ ಔಷಧಿ ದಾಸ್ತಾನು ನೀಡಿದೆ. ಆರೋಗ್ಯ ಉಪಕರಣ ಔಷಧ 27 ಉಗ್ರಾಣು ದಾಸ್ತಾನುಗಳಿಗೆ ತಲುಪಿಸಿದೆ. 2023-24ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ಯಾರಸಿಟಮಾಲ್ 650 ಎಂಜಿಗೆ ವಾರ್ಷಿಕ ಬೇಡಿಕೆ ಪ್ರಮಾಣ 8,72,20,40 ಮಾತ್ರೆಗಳಿಗೆ ಬಂದಿದ್ದು, 8.27 ಕೋಟಿ ಮೌಲ್ಯದ ಪ್ಯಾರಸಿಟಮಾಲ್ 650 ಎಂಜಿ ಖರೀದಿಸಲಾಗಿದೆ. ಪ್ರಸ್ತುತ ಈ ಔಷಧವು ಎಲ್ಲಾ ಉಗ್ರಾಣಗಳಿಗೆ ಸರಬರಾಜು ಆಗಿದೆ. 2024 ಜು.4ರ ವೇಳೆಗೆ 3.7 ಕೋಟಿ ಮೌಲ್ಯದ ಮಾತ್ರೆಗಳು ಲಭ್ಯತೆ ಇದೆ. ಸದ್ಯ ಆರೋಗ್ಯ ಸಂಸ್ಥೆಗಳಲ್ಲಿ 3.18 ಕೋಟಿ ಮೌಲ್ಯದ ಮಾತ್ರೆಗಳು ಲಭ್ಯ ಇದೆ. ರಾಜ್ಯದ ವಿವಿಧ ಆರೋಗ್ಯ ಸಂಸ್ಥೆಗಳಲ್ಲಿ ಮಾತ್ರೆಗಳು ಲಭ್ಯ ಇದೆ ಎಂದು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ತಿಳಿಸಿತ್ತು.



- ರಾಜ್ಯದಲ್ಲಿ ಡೆಂಘೀ ವ್ಯಾಪಕ, 25 ಸಾವಿರ ಪ್ರಕರಣ ವರದಿ
- ಆಗಸ್ಟ್ ತಿಂಗಳಲ್ಲಿ ಸೋಂಕಿನ ಪ್ರಕರಣ ಹೆಚ್ಚು, 12 ಮಂದಿ ಸಾವು
- 526 ಹಸುಗೂಸುಗಳು ಡೆಂಘೀ ಪೀಡಿತರು
- ಗಂಭೀರ ಪರಿಸ್ಥಿತಿಯಲ್ಲಿ ಪ್ಯಾರಾಸಿಟಮಾಲ್ ಮಾತ್ರೆ ಖರೀದಿಗೆ ಅಧಿಕಾರಿಗಳ ಉದಾಸೀನತೆ
- ಸಾರ್ವಜನಿಕ ವಲಯದಲ್ಲಿ ವ್ಯಾಪಕ ಆಕ್ರೋಶ, ಟೀಕೆ

ತೆರಳುವ ಮೊದಲು ಸಿಎಂ ಸಿದ್ದರಾಮಯ್ಯ ಜತೆ ಚರ್ಚೆ
ಖಾಸಗಿ ಭೇಟಿಯೆಂದು ಸ್ಪಷ್ಟನೆ ನೀಡಿದ ಡಿ.ಕೆ.ಶಿವಕುಮಾರ್

ಅಮೆರಿಕಕ್ಕೆ ತೆರಳಿದ ಡಿಸಿಎಂ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾನುವಾರ ರಾತ್ರಿ ಅಮೆರಿಕಕ್ಕೆ ಪ್ರಯಾಣಿಸಿದ್ದು, ಮುಂದಿನ ಒಂದು ವಾರಗಳ ಕಾಲ ಅಮೆರಿಕದಲ್ಲಿ ರಲಿದ್ದಾರೆ.

ಕುಟುಂಬ ಸಮೇತರಾಗಿ ತೆರಳಿದ ಅವರು, ಅಮೆರಿಕ್ಕೆ ತೆರಳುವ ಮೊದಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು. ಅಮೆರಿಕಕ್ಕೆ ತೆರಳುತ್ತಿರುವ ಬಗ್ಗೆ ಮಾಹಿತಿ ಹಂಚಿಕೊಂಡು, ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಕೆಲಕಾಲ ಚರ್ಚಿಸಿದರು.

ಕುಟುಂಬ ಸಮೇತರಾಗಿ ಅಮೆರಿಕಕ್ಕೆ ತೆರಳಿರುವ ಡಿ.ಕೆ. ಶಿವಕುಮಾರ್ ಅವರು ಖಾಸಗಿ ಕಾರ್ಯಕ್ರಮವೊಂದಿಗೆ ಸರಕಾರಿ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಲಿದ್ದಾರೆ ಎಂದು ಹೇಳಲಾಗಿತ್ತು. ಮೂಲಗಳು ತಿಳಿಸಿವೆ. ಪ್ರಮುಖವಾಗಿ ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರ ಆಹ್ವಾನದ ಮೇರೆಗೆ ತೆರಳುತ್ತಿದ್ದಾರೆ. ನ್ಯಾರ್ಥ್ ಕ್ಯಾರೋಲಿನಾದಲ್ಲಿ ಕಮಲಾ ಹ್ಯಾರಿಸ್ ಅವರು ಆಯೋಜಿಸಿರುವ 'ಪ್ರಜಾಪ್ರಭುತ್ವ ಮತ್ತು ಚುನಾವಣೆ' ಎನ್ನುವ ಸಂವಾದ ಕಾರ್ಯಕ್ರಮದಲ್ಲಿ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಈ ವೇಳೆ ಡಿಕೆಶಿ ಅವರು ಒಬಾಮಾ ಅವರನ್ನು ಭೇಟಿಯಾಗುವ ಸಾಧ್ಯತೆಯಿದೆ ಎಂದು ಹೇಳಲಾಗಿತ್ತು.

ಈ ಕಾರ್ಯಕ್ರಮದ ಬಳಿಕ ಚಿಕಾಗೋಗೆ ಪ್ರಯಾಣ ಬೆಳಸಲಿರುವ ಡಿ.ಕೆ.ಶಿವಕುಮಾರ್ ಅವರು ರಾಜ್ಯಕ್ಕೆ ಬಂಡವಾಳ ಆಕರ್ಷಣೆಗೆ ಸಂಬಂಧಿಸಿದಂತೆ ಕೈಗಾರಿಕೋದ್ಯಮಿಗಳೊಂದಿಗೆ ಚರ್ಚಿಸಲಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೂ ಚರ್ಚಿಸಿದ್ದಾರೆ. ಈ ಎರಡು ಕಾರ್ಯಕ್ರಮದ ಬಳಿಕ ಕುಟುಂಬದೊಂದಿಗೆ ಅಮೆರಿಕದ ವಿವಿಧ ಸ್ಥಳಗಳಿಗೆ ಪ್ರವಾಸ ಬೆಳಸಲಿದ್ದಾರೆ. ಸೆ.14ಕ್ಕೆ ಬೆಂಗಳೂರಿಗೆ ವಾಪಸಾಗಲಿದ್ದಾರೆ ಎಂದು ಹೇಳಲಾಗಿತ್ತು.

ಆದರೆ ಈ ಬಗ್ಗೆ ಸ್ಪಷ್ಟನೆ ನೀಡಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ತಾವು ಕುಟುಂಬ ಸದಸ್ಯರ ಜತೆ ಕೈಗೊಳ್ಳುತ್ತಿರುವ ಒಂದು ವಾರದ ಅಮೆರಿಕ ಪ್ರವಾಸ ಖಾಸಗಿಯದ್ದಾಗಿದ್ದು, ತಾವು ಯಾವುದೇ ನಾಯಕರನ್ನು ಭೇಟಿ ಮಾಡುತ್ತಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬರೆದಿರುವ ಪತ್ರವನ್ನು ಸಹ ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದಾರೆ.

ಅಮೆರಿಕಕ್ಕೆ ಕುಟುಂಬ ಸದಸ್ಯರೊಂದಿಗೆ ತೆರಳುತ್ತಿದ್ದೇವೆ. ಇದರಲ್ಲಿ ವಿಶೇಷತೆ ಏನಿಲ್ಲ. ಇದೊಂದು ಖಾಸಗಿ ಕಾರ್ಯಕ್ರಮ. ವಾಪಸು ಬರುವ ವೇಳೆಗೆ ಏನೆಲ್ಲ ಕೆಲಸಗಳಾಗಿರಬೇಕು ಎನ್ನುವ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ.
-ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಸಿಎಂ ಕುರ್ಚಿ ವಿಚಾರದಲ್ಲಿ ಸಚಿವರ ಮಾತಿನ ಸಮರ

ವಿಜಯಪುರ: ಸಿಎಂ ಸ್ಥಾನದ ವಿಚಾರವಾಗಿ ಸಚಿವರಾದ ಶಿವಾನಂದ ಪಾಟೀಲ್ ಹಾಗೂ ಎಂ ಬಿ ಪಾಟೀಲ್ ಮಧ್ಯೆ ಮಾತಿನ ಸಮರ ಮುಂದುವರಿದಿದೆ. ಸಿದ್ದರಾಮಯ್ಯ

ಇರುವವರೆಗೂ ಅವರೇ ಮುಖ್ಯಮಂತ್ರಿ ಆಗಿರುತ್ತಾರೆ. ಎಂ.ಬಿ.ಪಾಟೀಲ್ ಸಿಎಂ ಆದರೆ ನನ್ನ ಅಭ್ಯಂತರವಿಲ್ಲ. ನಮ್ಮಲ್ಲಿ ಹಿರಿಯರು ಬಹಳ ಜನರಿದ್ದಾರೆ. ಹಿರಿಯರ ಬಳಿಕ ಕಿರಿಯರ ಸರದಿ ಎಂದು ಸಚಿವ ಶಿವಾನಂದ ಪಾಟೀಲ್ ಹೇಳಿದ್ದಾರೆ.

ಎಂಬಿ ಪಾಟೀಲ್ ಗಿಂತ ಹಿರಿಯರು ಪಕ್ಷದಲ್ಲಿ ಇದ್ದಾರೆ, ಅವರ ಸರದಿ ಬಳಿಕ ಎಂ. ಬಿ. ಪಾಟೀಲ್ ಸರದಿ ಎಂಬ ತಮ್ಮ ಹೇಳಿಕೆಗೆ ಎಂ.ಬಿ.ಪಾಟೀಲ್ ನೀಡಿದ ಉತ್ತರದ ಬಗ್ಗೆ ಸಚಿವ ಶಿವಾನಂದ ಪಾಟೀಲ್ ಭಾನುವಾರ ಸ್ಪಷ್ಟನೆ ನೀಡಿದರು.

ಮಾಧ್ಯಮಗಳಿಂದ ವಿವಾದ ಸೃಷ್ಟಿ: ನಾನು ಬೆಂಗಳೂರಿನಲ್ಲಿ ಅಭಿವೃದ್ಧಿ ವಿಚಾರವಾಗಿ ಸುದ್ದಿಗೋಷ್ಠಿ ನಡೆಸಿದ್ದೆ. ಆದರೆ ಅಲ್ಲಿ ಅಭಿವೃದ್ಧಿಯ ವಿಚಾರ ಬಿಟ್ಟು ರಾಜಕೀಯದ ಪ್ರಶ್ನೆ ಕೇಳಲಾಯಿತು. ಗೃಹ ಸಚಿವ ಪರಮೇಶ್ವರ ನಿವಾಸಕ್ಕೆ ಎಂ.ಬಿ. ಪಾಟೀಲ್ ಭೇಟಿ ತಪ್ಪೇನು? ಸಿಎಂ ವಿಚಾರವಾಗಿ ಹೈಕಮಾಂಡ್, ಶಾಸಕರು ನಿರ್ಧಾರ ಮಾಡುತ್ತಾರೆ. ಆದರೆ ನನ್ನ ಹೇಳಿಕೆಯನ್ನು ಮಾಧ್ಯಮಗಳು ವಿವಾದ ಮಾಡಿವೆ. ನಾನು ಸುದ್ದಿಗೋಷ್ಠಿ ನಡೆಸಿದ್ದು ನನ್ನ ಇಲಾಖೆಯ ಅಭಿವೃದ್ಧಿ ಕೆಲಸಗಳ ಕುರಿತ ಮಾಹಿತಿ ನೀಡಲು, ನಾಲ್ಕು ಬೆಳೆಗಳಿಗೆ ಬೆಂಬಲ ಬೆಲೆ ಸಿಗುವ ಕುರಿತು ಹೇಳಲು ಕರೆದಿದ್ದೆ. ಅದನ್ನು ಬಿಟ್ಟು ಮಾಧ್ಯಮಗಳು ವಿವಾದ ಸೃಷ್ಟಿಸಿದವು ಎಂದು ಬೇಸರ ವ್ಯಕ್ತಪಡಿಸಿದರು.

ಯಾರು ಬೇಕಾದರೂ ಸಿಎಂ ಆಗಲಿ

ಕೆಲವೊಬ್ಬರು ರಾಜಕಾರಣ ಮಾಡುವುದರಲ್ಲೇ ನಿರತರಾಗಿದ್ದಾರೆ. ನಾನು ಅಭಿವೃದ್ಧಿ ಮಾಡುವುದರಲ್ಲಿ ನಿರತ. ನನಗೆ ಮೂರು ಇಲಾಖೆಗಳಿಗೆ ಅಭಿವೃದ್ಧಿ ಬಿಟ್ಟು ಬೇರೆ ಮಾಡಿಲ್ಲ. ಯಾರು ಬೇಕಾದವರೂ ಸಿಎಂ ಆಗಬಹುದು, ಅದರಲ್ಲೇನಿದೆ, ' ಖುದಾ ಮೆಹರ್ಬಾನ್ ಗಧಾ ಪೈಲ್ವಾನ್' ಎಂದು ಸಚಿವ ಶಿವಾನಂದ ಪಾಟೀಲ ಮಾರ್ಮಿಕವಾಗಿ ನುಡಿದರು. ಜಾರಕಿಹೋಳಿ, ಪರಮೇಶ್ವರ ಹಾಗೂ ಇತರರು ಸಿಎಂ ಗಾದಿಗೆ ಪೈಪೋಟಿ ವಿಚಾರವಾಗಿ, ಯಾರು ಬೇಕಾದರೂ ಆಗಲಿ, ಕಾಂಗ್ರೆಸ್‌ನಲ್ಲಿ ಒಗ್ಗಟ್ಟಾಗಿದ್ದೇವೆ. ಯಾರೇ ಸಿಎಂ ಆದರೂ ಬೆಂಬಲವಿದೆ ಎಂದರು.

ಸಿದ್ದರಾಮಯ್ಯ ಬದಲಾವಣೆ ಇಲ್ಲ

ಸಿಎಂ ಸಿದ್ದರಾಮಯ್ಯ ಬದಲಾವಣೆ ಆಗುತ್ತಾರೆಯೇ ಎಂಬ ಪ್ರಶ್ನೆಗೆ ಶಿವಾನಂದ ಪಾಟೀಲ್ ಉತ್ತರಿಸಿ, ಸಿಎಂ ಸಿದ್ದರಾಮಯ್ಯ ಬದಲಾವಣೆ ಆಗಲ್ಲ ಎಂಬ ವಿಶ್ವಾಸ ಇದೆ. ಸಿದ್ದರಾಮಯ್ಯ ತಪ್ಪೇ ಮಾಡಿಲ್ಲ ಎಂದರೆ ಯಾಕೆ ಬದಲಾವಣೆ ಆಗಬೇಕು ಎಂದು ಸಚಿವ ಶಿವಾನಂದ ಪಾಟೀಲ್ ಹೇಳಿದರು.

ಮುಂದೊಂದು ದಿನ ನಾನೂ ಸಿಎಂ ಆಗುತ್ತೇನೆ: ಎಂ.ಬಿ.ಪಾಟೀಲ್

ಸಿಎಂ ಸ್ಥಾನದಲ್ಲಿ ಸಿದ್ದರಾಮಯ್ಯ ಮುಂದುವರಿಕೆ

ವಿಜಯಪುರ: ಸಿಎಂ ಸಿದ್ದರಾಮಯ್ಯ ಪ್ರಬಲರಾಗಿದ್ದು ಸಿಎಂ ಹುದ್ದೆ ಖಾಲಿ ಇಲ್ಲ. ಮುಖ್ಯಮಂತ್ರಿ ಸ್ಥಾನದಲ್ಲಿ ಅವರೇ ಮುಂದುವರಿಯುತ್ತಾರೆ. ಸಿದ್ದರಾಮಯ್ಯನವರ ಸರದಿ ಮುಗಿದ ಬಳಿಕ ಮುಂದೊಂದು ದಿನ ನಾನು ಸಿಎಂ ಆಗುತ್ತೇನೆ ಎಂದು ಸಚಿವ ಡಾ.ಎಂ.ಬಿ.ಪಾಟೀಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಸಿಎಂ ಆಗುವ ಆಸೆ ಇದೆ. ಆದರೆ ಯಾರದೋ ಸ್ಥಾನ ಕಸಿದುಕೊಂಡು ಅಧಿಕಾರಕ್ಕೇರುವ ದುರಾಸೆ ನನಗಿಲ್ಲ. ಸಿಎಂ ಆಗಲು ಕಾಂಗ್ರೆಸ್ ಪಕ್ಷ ಹಾಗೂ ಶಾಸಕರು ನಿರ್ಧರಿಸಬೇಕಿದೆ.ಆ ಸಮಯ ಬಂದಾಗ ಸಿಎಂ ಆಗುತ್ತೇನೆ ಎಂದು ಎಂ.ಬಿ.ಪಾಟೀಲ್ ನುಡಿದರು.

ದೆಹಲಿಗೆ ಹೋಗಬಾರದೇ..?: ಕಾಂಗ್ರೆಸ್ ನ ಕೆಲ ನಾಯಕರ ದೆಹಲಿ ಭೇಟಿ ವಿಚಾರವಾಗಿ ಪ್ರತಿಕ್ರಿಯಿಸಿದ ಪಾಟೀಲ್, ದೆಹಲಿಗೆ ಹೋಗಬಾರದು ಎಂದಿದೆಯಾ? ನಾನು ಕೇಂದ್ರ ಸಚಿವರನ್ನು ಭೇಟಿಯಾಗಲು ದೆಹಲಿಗೆ ಹೋಗುತ್ತಿದ್ದೇನೆ. ಅದರಲ್ಲಿ ತಪ್ಪಿಲ್ಲ . ಹೋದಾಗ ವರಿಷ್ಠರನ್ನು ಭೇಟಿಯಾಗುತ್ತಿರುತ್ತಾರೆ ಎಂದರು.

ಜಾರಕಿಹೊಳಿಗಿಂತ ನಾನೇ ಹಿರಿಯ : ಸತೀಶ್ ಜಾರಕಿ ಹೋಳಿ ಸಿಎಂ ಆಗಬೇಕೆಂದು ಲಕ್ಷ್ಮಣ ಸವದಿ ಬೆಂಬಲ ವಿಚಾರವಾಗಿ, ಸತೀಶ್ ಜಾರಕಿಹೊಳಿ ಇರಲಿ, ಎಂ ಬಿ ಪಾಟೀಲ್ ಇರಲಿ. ಸಿಎಂ ಕುರ್ಚಿ ಖಾಲಿ ಇಲ್ಲ ಎಂದರು.

ಸಚಿವ ಶಿವಾನಂದ ಪಾಟೀಲ್ ಹೇಳಿಕೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಇದಕ್ಕೆ ಈಗಾಗಲೇ ಉತ್ತರ ನೀಡಿದ್ದೇನೆ. ನಾನು , ಡಿಕೆಶಿ ಸೀನಿಯರ್ ಇದ್ದೇವೆ. ಸತೀಶ ಜಾರಕಿಹೊಳಿಗಿಂತ ನಾನು ಹಿರಿಯ. ಪರಮೇಶ್ವರ ಅವರು ನಾವೆಲ್ಲ ಒಂದೇ ಹಂತದಲ್ಲಿದ್ದೇವೆ. ನಮಗಿಂತ ಮೇಲಿನ ಹಂತದ ಹಿರಿಯರು ಮಲ್ಲಿಕಾರ್ಜುನ ಖರ್ಗೆ ಅವರು. ಸಿದ್ದರಾಮಯ್ಯ ಆರ್. ವಿ. ದೇಶಪಾಂಡೆ ಅವರಿದ್ದಾರೆ. ಸಿಎಂ ಮಾಡುವ ವೇಳೆ ಹಿರಿತನ, ಕಿರಿತನ ಪ್ರಶ್ನೆ ಬರಲ್ಲ. ಈಗ ಸಿಎಂ ಕುರ್ಚಿ ಖಾಲಿ ಇಲ್ಲ ಎಂದರು.

ಆಸೆ ಇದೆ, ದುರಾಸೆ ಇಲ್ಲ: ನಾನು ಮುಖ್ಯಮಂತ್ರಿ ಆದರೆ ಜನರಿಗೆ ಒಳ್ಳೆಯದನ್ನೇ ಮಾಡುವೆ. ನೀರಾವರಿ ಮಂತ್ರಿಯಾಗಿ ಉತ್ತಮ ಕೆಲಸ ಮಾಡಿದ್ದೇನೆ. ಈಗ ಸಿಎಂ ಸಿದ್ದರಾಮಯ್ಯ ಅವರ ಅಥವಾ ಬೇರೆಯವರ ಸ್ಥಾನದ ಮೇಲೆ ಕಣ್ಣುಹಾಕಲ್ಲ. ಸ್ವಯಂಘೋಷಿತವಾಗಿ ಸಿಎಂ ಆಗಲು ಬರಲ್ಲ. ಸಿಎಂ ಮಾಡುವ ತೀರ್ಮಾನ ಪಕ್ಷದ ಹೈಕಮಾಂಡ್ ಹಾಗೂ ಶಾಸಕರು ತೀರ್ಮಾನ ಮಾಡುತ್ತಾರೆ. ಯಾರನ್ನೂ ತೆಗೆದು ಹಾಕುವ ಕೆಲಸಕ್ಕೆ ನಾನು ಕೈ ಹಾಕಲ್ಲ ಎಂದು ಸಚಿವ ಎಂ.ಬಿ. ಪಾಟೀಲ್ ಸ್ಪಷ್ಟಪಡಿಸಿದರು.

ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ವಿರುದ್ಧದ ಆರೋಪದಲ್ಲಿ ಹುರುಳಿಲ್ಲ, ಅವರ ಪಾತ್ರವೂ ಇಲ್ಲ. ನ್ಯಾಯಾಲಯ ದಲ್ಲಿಯೂ ಸಿದ್ದರಾಮಯ್ಯ ಪರವಾಗಿ ತೀರ್ಪು ಬಂದು ನ್ಯಾಯ ಸಿಗುತ್ತದೆ. ಬಿಜೆಪಿಯವರು ಪಶ್ಚಾತ್ತಾಪ ಪಡುತ್ತಾರೆ.
-ಎಂ.ಬಿ.ಪಾಟೀಲ್ ಸಚಿವ

ಮುಡಾದಲ್ಲಿ ಸಿಎಂ ಪಾತ್ರವಿಲ್ಲ

ಮುಡಾ ಹಗರಣದಲ್ಲಿ ಸಿದ್ದರಾಮಯ್ಯನವರ ಕುರಿತು ಯಾವುದೇ ಹುರಳಿಲ್ಲ, ಪಾತ್ರವಿಲ್ಲ. ನ್ಯಾಯಾಲಯದಲ್ಲಿಯೂ ಸಿದ್ದರಾಮಯ್ಯ ಅವರ ಪರವಾಗಿ ತೀರ್ಪು ಬರುತ್ತದೆ, ನ್ಯಾಯ ಸಿಗುತ್ತದೆ. ಬಿಜೆಪಿಯವರು ಪಶ್ಚಾತಾಪ ಪಡುತ್ತಾರೆ. ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿ ಮುಂದುವರೆಯುತ್ತಾರೆ. ನಾವೆಲ್ಲ ಸಿದ್ದರಾಮಯ್ಯರ ಜತೆಗಿದ್ದೇವೆ. ಈ ಕುರಿತು ಕ್ಯಾಬಿನೆಟ್ ನಲ್ಲಿ ತೀರ್ಮಾನ ಮಾಡಿದ್ದೇವೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿಯವರು, ಸಚಿವರು, ಶಾಸಕರು, ಕಾರ್ಯಕರ್ತರು, ಪದಾಧಿಕಾರಿಗಳು ಸಿದ್ದರಾಮಯ್ಯ ಪರವಾಗಿ ದ್ದೇವೆ. ಸಿದ್ದರಾಮಯ್ಯ ಸಿಎಂ ಆಗಿದ್ದು, ಸಿಎಂ ಆಗಿ ಮುಂದುವರೆಯುತ್ತಾರೆ ಎಂದ ಸಚಿವ ಎಂ. ಬಿ.ಪಾಟೀಲ್ ಸ್ಪಷ್ಟಪಡಿಸಿದರು.

- ಸಿಎಂ ಆಗುವ ಆಸೆಯಿದೆ, ಸಮಯ ಬಂದಾಗ ಆಗುತ್ತೇನೆ
- ನಾನು ಸಿಎಂ ಆದರೆ ರಾಜ್ಯದ ಜನರಿಗೆ ಖುಷಿ, ಸ್ವಯಂಘೋಷಣೆ ಇಲ್ಲ
- ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಪಾತ್ರವಿಲ್ಲ
- ಕಾಂಗ್ರೆಸ್ ಹೈಕಮಾಂಡ್, ರಾಜ್ಯ ಘಟಕ ಸಿಎಂ ಪರ

ಸಿಎಂ ರೇಸ್‌ನಲ್ಲಿ ನಾನಿಲ್ಲ, 2028ಕ್ಕೆ ಸಿದ್ಧತೆ

ಬೆಳಗಾವಿ : ಸದ್ಯಕ್ಕೆ ಸಿಎಂ ಆಗುವ ಕುರಿತು ಸೂಕ್ತ ಸಿದ್ಧತೆ ಮಾಡುತ್ತಿರುವುದು ಈ ಬಾರಿ ಸಿಎಂ ಆಗುವ ಉದ್ದೇಶದಿಂದಲ್ಲ, ಬರುವ 2028 ಕ್ಕೆ ತಯಾರಿ ನಡೆಸುತ್ತಿದ್ದು ಅಲ್ಲಿಯವರೆಗೆ ಅಭಿಮಾನಿಗಳು ಸಮಾಧಾನದಿಂದ ಕಾಯಬೇಕು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅಭಿಪ್ರಾಯಪಟ್ಟರು.

ಭಾನುವಾರ ನಗರದಲ್ಲಿ ಸಿಎಂ ಸ್ಥಾನದ ಬದಲಾವಣೆ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಮುಂದುವರಿಯುತ್ತಾರೆ. ಸದ್ಯ ನಾನು ಸಿಎಂ ಸ್ಥಾನದ ಸ್ಪರ್ಧೆಯಲ್ಲಿಲ್ಲ. ನಾನು ಆಕಾಂಕ್ಷಿಯೂ ಅಲ್ಲ ಎಂದು ಸ್ಪಷ್ಟಪಡಿಸಿದರು.

ಈಗಲೇ ಅನೇಕರು ಸಿಎಂ ಆಗುವ ಆಸೆ ವ್ಯಕ್ತಪಡಿಸಿದ್ದಾರೆ. ಇದರಲ್ಲಿ ಗುದ್ದಾಟ, ಕುಸ್ತಿ ಮಾಡುವ ಅವಶ್ಯಕತೆ ಇಲ್ಲ. ನಾನಂತೂ ಈಗಾಗಲೇ ಸಿದ್ದರಾಮಯ್ಯನವರಿಗೆ ಬೆಂಬಲ ನೀಡಿದ್ದೇನೆ ಎಂದು ಸತೀಶ್ ನುಡಿದರು.

ಸಿದ್ದರಾಮಯ್ಯ ಮುಂದುವರಿಕೆ : ಮುಂದಿನ ಸಿಎಂ ಸತೀಶ್ ಜಾರಕಿಹೊಳಿ ಅಂಬ ಅಭಿಯಾನ ವಿಚಾರಕ್ಕೆ ಉತ್ತರಿಸಿದ ಅವರು, ಯಾರೋ ಒಬ್ಬರ ಅಭಿಪ್ರಾಯ ಇಡೀ ರಾಜ್ಯದ ಅಭಿಪ್ರಾಯ ಆಗಲ್ಲ. ರಾಜ್ಯದಲ್ಲಿ ಅಂತಹ ಸನ್ನಿವೇಶ ಇಲ್ಲ. ಸಿಎಂ ಸಿದ್ದರಾಮಯ್ಯ ಮುಂದುವರಿಯುತ್ತಾರೆ ಎನ್ನುವ ನಂಬಿಕೆ ಇದೆ ಎಂದರು.

ದೆಹಲಿಗೆ ಬೇರೆ ಕೆಲಸ ಇರುತ್ತದೆ, ಹೋಗಿರುತ್ತೇವೆ. ಎಂ ಬಿ ಪಾಟೀಲ್, ಶಿವಾನಂದ, ದೇಶಪಾಂಡೆ ಅನೇಕರು ತಮ್ಮ ಅಭಿಪ್ರಾಯ ಹೇಳಿದ್ದಾರೆ. ಸಿದ್ದರಾಮಯ್ಯ ಪರ ನ್ಯಾಯ ಸಿಗುತ್ತದೆ ಎನ್ನುವ ನಂಬಿಕೆ ಇದೆ. ಸಿಎಂ ಬದಲಾವಣೆ ಪ್ರಶ್ನೆ ಬರಲ್ಲ ಎನ್ನುವ ವಿಶ್ವಾಸ ಇದೆ. ಈಗ ನಾನು ಸಿಎಂ ಕನಸು ಕಂಡಿಲ್ಲ. 2028 ಕ್ಕೆ ಸಿಎಂ ಆಗುವ ಸಿದ್ಧತೆ ಇದೆ, ಅಲ್ಲಿಯವರೆಗೆ ಅಭಿಮಾನಿಗಳು ಕಾಯಬೇಕು.
ಸತೀಶ್ ಜಾರಕಿಹೊಳಿ ಸಚಿವ

ಸಿಎಂ ಬದಲಾವಣೆ ಪ್ರಶ್ನೆಯೇ ಇಲ್ಲ: ಬೈರತಿ ಸುರೇಶ್

ಮೈಸೂರು: ಮುಖ್ಯಮಂತ್ರಿ ಸ್ಥಾನ ಯಾವ ಕಾರಣಕ್ಕೂ ಖಾಲಿಯಾಗುವುದಿಲ್ಲ, ಸಿಎಂ ಬದಲಾವಣೆ ಪ್ರಶ್ನೆಯೇ ಇಲ್ಲ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಸ್ಪಷ್ಟವಾಗಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಮುಡಾ ಪ್ರಕರಣದಲ್ಲಿ ಯಾರನ್ನು ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುತ್ತೇವೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ಹಗರಣದ ಕುರಿತು ನ್ಯಾ. ದೇಸಾಯಿ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ. ಸೋಮವಾರ ಹಾಗೂ ಸೆ.12ರಂದು ನ್ಯಾಯಾಲಯದಲ್ಲಿ ವಿಚಾರಣೆಯಿದೆ. ಈಗಾಗಲೇ ಪ್ರಾಧಿಕಾರದ ಹಿಂದಿನ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರನ್ನು ಅಮಾನತು ಮಾಡಿದ್ದೇವೆ. ನಾವು ಯಾರನ್ನೂ ರಕ್ಷಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮುಡಾದಿಂದ ಒಂದೇ ದಿನ 848 ನಿವೇಶನಗಳು ಹಂಚಿಕೆಯಾಗಿರುವ ಮಾಹಿತಿ ತಮಗೆ ಗೊತ್ತಿಲ್ಲ. ಈ ಬಗ್ಗೆ ಪರಿಶೀಲನೆ ನಡೆಸುತ್ತೇವೆ. ಒಂದೇ ದಿನ ಇಷ್ಟೊಂದು ನಿವೇಶನಗಳು ಹಂಚಿಕೆಯಾಗಿರುವುದು ನನಗೆ ಹೊಸ ವಿಚಾರ. ಮುಡಾ ಪ್ರಕರಣದಲ್ಲಿ ತನಿಖೆಗೆ ನ್ಯಾಯಾಂಗ ಆಯೋಗ ರಚನೆಯಾದ ಮೇಲೆ ನಾನು ಆ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ಏನೇಯಿದ್ದರೂ ಆಯೋಗವೇ ವಿಚಾರಣೆ ನಡೆಸಬೇಕು. ವರದಿ ಬಂದ ಬಳಿಕ ತಪ್ಪಿತಸ್ಥರ ವಿರುದ್ಧ ನಮ ಸರಕಾರ ಕಠಿಣ ಕ್ರಮ ಕೈಗೊಳ್ಳುತ್ತದೆ ಎಂದು ಸ್ಪಷ್ಟಪಡಿಸಿದರು.

2022ರಲ್ಲಿ ಮುಡಾ ಅಧ್ಯಕ್ಷರಾಗಿದ್ದ ರಾಜೀವ್ ಅವರು ಒಂದೇ ದಿನ 848 ನಿವೇಶನಗಳನ್ನು ಹಂಚಿಕೆ ಮಾಡಿರುವುದು ನನಗೆ ತಿಳಿದಿಲ್ಲ. ಈ ಬಗ್ಗೆ ಕಾರ್ಯದರ್ಶಿಗಳಿಗೆ ಪತ್ರ ರವಾನೆಯಾಗಿದ್ದರೆ ಅದನ್ನು ಪರಿಶೀಲಿಸಲಾಗುವುದು. ಮೂಲಗಳ ಪ್ರಕಾರ, ಲಕ್ಷಾಂತರ ಪುಟಗಳಿದ್ದು, ಆ ಎಲ್ಲಾ ಪುರಾವೆಗಳನ್ನೂ ಪರಿಶೀಲಿಸಲಾಗುತ್ತಿದೆ. ಮುಡಾ ಹಗರಣವನ್ನು ಇಂಚಿಂಚಾಗಿ ಪರಿಶೀಲಿಸಲಾಗುತ್ತಿದೆ. ವರದಿ ಬಂದ ಬಳಿಕ ಹಿಂದಿನ ಆಯುಕ್ತರಾಗಿದ್ದವರೂ ಸೇರಿದಂತೆ ಹಲವರ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಇದರಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದು ಹೇಳಿದರು.

ಪ್ರತಿಪಕ್ಷದ ವರದು ಟೀಕಿಸುವುದೇ ಕೆಲಸ. ಆ ಬಗ್ಗೆ ನಾನು ಈಗ ಏನನ್ನೂ ಹೇಳುವುದಿಲ್ಲ. ತನಿಖೆ ಮುಗಿದು ವರದಿ ಬರಲಿ. ಯಾರೇ ತಪ್ಪು ಮಾಡಿದರೂ ಕ್ರಮ ತೆಗೆದುಕೊಳ್ಳುತ್ತೇವೆ. ಸದ್ಯಕ್ಕೆ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ. ಸಿದ್ದರಾಮಯ್ಯ ಅವರನ್ನು ಆ ಸ್ಥಾನದಿಂದ ಬದಲಾವಣೆ ಮಾಡುವುದಿಲ್ಲ.
-ಬೈರತಿ ಸುರೇಶ್ ಸಚಿವ

ಕಾಂಗ್ರೆಸ್ ವಿದ್ಯಮಾನದ ಬಗ್ಗೆ ಪ್ರಲ್ಹಾದ ಜೋಶಿ ವ್ಯಂಗ್ಯ

ಸಿಎಂ ಸ್ಥಾನಕ್ಕೆ ನಾಯಕರ ಸಾಲು

ಹುಬ್ಬಳ್ಳಿ: ಹೊರಗೆ ಸಿದ್ದರಾಮಯ್ಯನವರ ಪರವಾಗಿ ಬಂಡೆ ತರ ನಿಂತಿದ್ದೇವೆ ಅಂತಾರೆ. ಆದರೆ ಕಾಂಗ್ರೆಸ್ ಪಕ್ಷದಲ್ಲಿ ಒಳಗೊಳಗೆ ಸಿಎಂ ಕುರ್ಚಿಗಾಗಿ ನಾಯಕರು ಸಾಲುಗಟ್ಟಿ ನಿಂತಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವ್ಯಂಗ್ಯವಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಬದಲಾವಣೆ ವಿಚಾರವಾಗಿ ಮೊದಲು ದೇಶಪಾಂಡೆ ನಾನು ಸಿದ್ಧ ಎಂದರು, ಆಮೇಲೆ ಪರಮೇಶ್ವರ, ಡಿ.ಕೆ ಶಿವಕುಮಾರ್ ಅಂತೂ ಮೊದಲೇ ಕಾಯುತ್ತಿದ್ದಾರೆ. ಎಂ.ಬಿ. ಪಾಟೀಲ್ ಇದ್ದಾರೆ. ಸತೀಶ ಜಾರಕಿಹೊಳಿ ಪರ ಅಭಿಯಾನ ಆರಂಭವಾಗಿದೆ. ಈಗಾಗಲೇ ಪೋಸ್ಟರ್ ಹಾಕಿದ್ದಾರೆ ಅನ್ನುವ ಮಾಹಿತಿ ಇದೆ. ಕಾಂಗ್ರೆಸ್ ನವರು ಮೊದಲು ತಮ್ಮ ಮನೆ ಸರಿಮಾಡಿಕೊಳ್ಳಲಿ. ಅದನ್ನು ಬಿಟ್ಟು ನಾನು ನೀಡಿದ ಹೇಳಿಕೆಗೆ ಟೀಕೆ ಮಾಡುವುದಲ್ಲ. ಎಲ್ಲಾ ಸಚಿವರು ದರ್ಶನ್ ವಿಚಾರದಲ್ಲಿ ಪ್ರತಿಕ್ರಿಯೆ ನಿಡಿದ್ದಾರೆ. ಅಷ್ಟರಮಟ್ಟಿಗೆ ಕಾಂಗ್ರೆಸ್ ನಾಯಕರಿಗೆ ಬಿಸಿ ಮುಟ್ಟಿದೆ ಎಂದು ಹರಿಹಾಯ್ದರು.

ಬರ ಪರಿಹಾರದ ಹಣ ನೀಡಿಲ್ಲ : ನಾನು ಇವಾಗ ದುಡ್ಡು ಕೊಡ್ರಪ್ಪಾ ಅಂತಾ ಕೇಳಬೇಕು. ಬರ ಪರಿಹಾರದ ದುಡ್ಡು ಕೊಟ್ಟಿಲ್ಲ. ಅನೇಕ ಕಾಂಗ್ರೆಸ್ ಶಾಸಕರು, ಅಧಿಕಾರಿಗಳು ನಮಗೆ ದುಡ್ಡು ಕೊಡಿಸಿ ಅಂತಾ ಕೇಳುತ್ತಿದ್ದಾರೆ. ರಸ್ತೆ ಎಲ್ಲ ಹಾಳಾಗಿವೆ, ದುಡ್ಡು ಕೊಡ್ರಪ್ಪಾ ಎಂದು ವಾಗ್ದಾಳಿ ನಡೆಸಿದರು.

ಮಹದಾಯಿಗೆ ಸಂಬಂಧಿಸಿ ಒಳ್ಳೆಯದಾಗಿರುವುದು ಬಿಜೆಪಿ ಕಾಲದಲ್ಲಿ. ಗೆಜೆಟ್ ನೋಟಿಫಿಕೇಶನ್ ವರೆಗೂ ಅನುಮೋದನೆ ಕೊಡಿಸಿದ್ದೇವೆ. ಒಂದು ಗಿಡ ಕಡಿಯಬೇಕೆಂದರೆ ಆರು ತಿಂಗಳು ಬೇಕಾಗುತ್ತದೆ. ಮಹದಾಯಿ ಯೋಜನೆಯಲ್ಲಿ ಸುಮಾರು 2 ಲಕ್ಷ ಗಿಡ ಕತ್ತರಿಸಬೇಕಾಗುತ್ತದೆ. ಹೀಗಾಗಿ ಅನುಮತಿ ಸಿಗುವುದು ವಿಳಂಬವಾಗುತ್ತಿದೆ. ರಾಜ್ಯದ ಹಿತದೃಷ್ಟಿಯಿಂದ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ.
-ಪ್ರಲ್ಹಾದ್ ಜೋಶಿ ಸಂಸದ

ರಾಜ್ಯ ಕಾಂಗ್ರೆಸ್‌ನಲ್ಲಿ ಎಲ್ಲರಿಗೂ ಕುರ್ಚಿ ಆಸೆ

ವಿಜಯಪುರ : ಸಚಿವ ಎಂ. ಬಿ. ಪಾಟೀಲ್ ಅಷ್ಟೇ ಏಕೆ, ಎಲ್ಲರೂ ಸಿಎಂ ಆಗಬೇಕೆನ್ನುತ್ತಾರೆ. ಇರುವುದು ಒಂದು ಸ್ಥಾನ. ಅವರ ಒಗ್ಗಟ್ಟು ಹೇಗಿದೆ ಎಂದು ಈ ವಿಷಯದ ಮೇಲೆ ಅರ್ಥ

ಮಾಡಿಕೊಳ್ಳಬೇಕಿದೆ ಎಂದು ಸಂಸದ ರಮೇಶ ಜಿಗಜಿಣಗಿ ಕಾಂಗ್ರೆಸ್ ನಾಯಕರ ಹೇಳಿಕೆಗೆ ಲೇವಡಿ ಮಾಡಿದ್ದಾರೆ.

ಸಿಎಂ ಸ್ಥಾನದ ವಿಚಾರದಲ್ಲಿ ಸಚಿವರಾದ ಶಿವಾನಂದ ಪಾಟೀಲ್, ಎಂ.ಬಿ. ಪಾಟೀಲ್ ಮಧ್ಯೆ ಹಗ್ಗಜಗ್ಗಾಟ ನಡೆದ ವಿಚಾರವಾಗಿ ಮಾತನಾಡಿದ ಜಿಗಜಿಣಗಿ, ಅದೆಲ್ಲಾ ನಡೆಯೋದೇ. ಎಲ್ಲರೂ ಸಿಎಂ ಆಗಲು ಪೈಪೋಟಿಯಲ್ಲಿದ್ದಾರೆ. ಮಲ್ಲಿಕಾರ್ಜುನ ಖರ್ಗೆ, ಗೃಹ ಸಚಿವ ಪರಮೇಶ್ವರ ಪರ ತಂಡಗಳಿವೆ. ಡಿಕೆಶಿ ಅವರ ಹೆಸರಿದೆ, ಆದರೆ ಅವರನ್ನು ಮೂಲೆಗೆ ಕೂಡಿಸಿದ್ದಾರೆ. ಅವರ ಹೆಸರನ್ನೇ ಯಾರೂ ತೆಗೆಯುತ್ತಿಲ್ಲ. ಹಿಂದುಳಿದ ವರ್ಗದ ನಾಯಕ ಸತೀಶ ಜಾರಕಿಹೊಳಿ ಆಗಬೇಕೆನ್ನುತ್ತಾರೆ ಎಂದರು.

ರಾಜ್ಯದಲ್ಲಿ ಅಧಿಕಾರದ ಹಂಬಲ ರಾಜಕಾರಣ: ಮಾಜಿ ಸಿಎಂ ಈಶ್ವರಪ್ಪ

ಕುರ್ಚಿ ಮೇಲೆ ಬಹಳಷ್ಟು ಕಾಂಗ್ರೆಸ್ಸಿಗರ ಕಣ್ಣು

ಬಾಗಲಕೋಟೆ: ಸಿಎಂ ಕುರ್ಚಿ ಮೇಲೆ ಬಹಳಷ್ಟು ಕಾಂಗ್ರೆಸ್ ನವರ ಕಣ್ಣಿದೆ. ಆ ಕುರ್ಚಿ ಮೇಲೆ ಸಿಎಂಗೆ ಬೆಂಬಲ ನೀಡುವವರದ್ದೇ ಹಂಬಲವಿದೆ. ಹಂಬಲದಿಂದಲೇ ರಾಜಕಾರಣ

ನಡೆಯುತ್ತಿದೆ ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಸಿಎಂ ಸ್ಥಾನದಲ್ಲಿ ಉಳಿಲಿಕ್ಕಿಲ್ಲ ಅಂತಾ ಕಾಂಗ್ರೆಸ್‌ನ ನಾಯಕರು ಅಂದುಕೊಂಡಿದ್ದಾರೆ. ಸಿದ್ದರಾಮಯ್ಯ ವಿರುದ್ಧ ತೀರ್ಪು ಬಂದರೆ ಅವರು ಅಧಿಕಾರಿದಲ್ಲಿ ಉಳಿಯುತ್ತಾರೋ ಗೊತ್ತಿಲ್ಲ ಎಂದರು.

ಬೇರೆ ಪಕ್ಷದ ಜತೆ ಬಿಜೆಪಿ ವಿಲೀನ ಆಗಲ್ಲ: ಹಿಂದು ಸಂಸ್ಕೃತಿಯನ್ನು ಉಳಿಸುವ ಪಕ್ಷ ಬಿಜೆಪಿ ಒಂದೇ. ಹಾಗಾಗಿ ಯಾವುದೇ ಪಕ್ಷದ ಜತೆಗೆ ಬಿಜೆಪಿ ಮರ್ಜ್ ಮಾಡೋಕೆ ಸಾಧ್ಯ ಇಲ್ಲ. ಮೋದಿ ಇಂದು ನಿನ್ನೆ ಯಾರೋ ಮಾಡುತ್ತಿರುವ ಪ್ರಯತ್ನದಿಂದ ಅಧಿಕಾರಕ್ಕೆ ಬಂದಿಲ್ಲ. ಅನೇಕ ವರ್ಷಗಳಿಂದ ರಕ್ತ ಬೆವರು ರೂಪದಲ್ಲಿ ಸುರಿಸಿದ ರಾಷ್ಟ್ರ ಭಕ್ತರು, ಧರ್ಮನಿಷ್ಠರು ಈ ಪಕ್ಷವನ್ನು ಕಟ್ಟಿರೋದು. ಪಕ್ಷ ತಾತ್ಕಾಲಿಕವಾಗಿ ಕೆಲವರ ಕೈಗೆ ಸಿಕ್ಕಿದೆ. ಇದನ್ನು ಸರಿ ಮಾಡುವುದಕ್ಕ ಖಂಡಿತಾ ಆಗುತ್ತದೆ. ಸರಿಯಾಗುವುದರಲ್ಲಿ ಅನುಮಾನವಿಲ್ಲ. ಬಿಜೆಪಿಯೊಂದೇ ಈ ದೇಶಕ್ಕೆ ಆಶಾಕಿರಣ , ಯಾವುದೇ ಪಕ್ಷದ ಜತೆಗೆ ವಿಲೀನವಾಗಲ್ಲ ಎಂದರು.

ರಾಜ್ಯದಲ್ಲಿ ಕೀಳುಮಟ್ಟದ ರಾಜಕಾರಣ

ದೇಶದ ಇತಿಹಾಸದಲ್ಲಿ ಕರ್ನಾಟಕದ ಈಗಿನ ರಾಜಕಾರಣ ಕೀಳುಮಟ್ಟಕ್ಕೆ ಇಳಿದಿದೆ. ಆಡಳಿತ ಪಕ್ಷದ ಭ್ರಷ್ಟಾಚಾರ ಬಗ್ಗೆ ವಿರೋಧ ಪಕ್ಷ ಆರೋಪ ಮಾಡೋದು ತಪ್ಪಲ್ಲ. ಆದರೆ, ವಿರೋಧ ಪಕ್ಷದ ಆರೋಪವನ್ನು ಆಡಳಿತ ಪಕ್ಷದವರು ತನಿಖೆ ಮಾಡಿಸುವ ಪದ್ಧತಿ ಇದೆ. ತಪ್ಪಿತಸ್ಥರಾಗಿದ್ರೆ ಶಿಕ್ಷೆ ಆಗಬೇಕೋ ಆಗುತ್ತೆ. ಆದರೆ, ಈಗ ಆಡಳಿತ ಪಕ್ಷ ಬಂದು ಒಂದೂವರೆ ವರ್ಷ ಆದ ಬಳಿಕ ವಿರೋಧ ಪಕ್ಷಗಳು ವಿಶೇಷವಾಗಿ ಸಿದ್ದರಾಮಯ್ಯ ಸರಕಾರದ ಮಂತ್ರಿಗಳು, ಸಿದ್ದರಾಮಯ್ಯ ಬಗ್ಗೆ ಆಪಾದನೆ ಮಾಡುತ್ತಿವೆ. ಈ ವೇಳೆ ಪಾದಯಾತ್ರೆ, ಧರಣಿಯಂತಹ ಹೋರಾಟಗಳು ನಡೆಯುತ್ತವೆ. ತನಿಖೆ ಸಂದರ್ಭದಲ್ಲಿ ವೈಯಕ್ತಿಕ ಟೀಕೆ ಎಷ್ಟು ಕೀಳುಮಟ್ಟಕ್ಕೆ ಇಳಿದಿದೆ ಅಂದರೆ ಟಿವಿ ನೋಡುವುದೇ ಬೇಸರ ಆಗುತ್ತಿದೆ ಎಂದರು.

ವಿಶ್ವವಾಣಿ

ಸಂಪಾದಕೀಯ

ಸಾಮಾಜಿಕ ಪಿಡುಗಾದ ಆತ್ಮಹತ್ಯೆ

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ಇತ್ತೀಚೆಗೆ ಬಿಡುಗಡೆ ಮಾಡಿದ ವರದಿ ಪ್ರಕಾರ, ದೇಶದಲ್ಲಿ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆಯಲ್ಲಿನ ವಾರ್ಷಿಕ ಏರಿಕೆ ಪ್ರಮಾಣ ಶೇ.2ರಷ್ಟಿದ್ದರೆ, ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳಲ್ಲಿನ ಏರಿಕೆ ಪ್ರಮಾಣ ಶೇ.4ಕ್ಕೆ ತಲುಪಿದೆ. ವಿದ್ಯಾರ್ಥಿಗಳ ಆತ್ಮಹತ್ಯೆಯು ದೊಡ್ಡ ಸಾಮಾಜಿಕ ಸಮಸ್ಯೆಯಾಗಿ ಬೆಳೆಯುತ್ತಿದೆ ಎಂಬುದನ್ನು ಈ ಅಂಕಿಅಂಶಗಳು ಹೇಳುತ್ತವೆ. ವಿದ್ಯಾರ್ಥಿಗಳ ಆತ್ಮಹತ್ಯೆಗೆ ನಾನಾ ರೀತಿಯ ಕಾರಣಗಳಿವೆ. ವಿದ್ಯಾರ್ಥಿಗಳ ಮೇಲೆ ಶೈಕ್ಷಣಿಕ ಮತ್ತು ಕೌಟುಂಬಿಕ ಒತ್ತಡಗಳು ಹೆಚ್ಚುತ್ತಿವೆ. ಹಲವರು ಬಲವಂತದ ಕಾರಣಕ್ಕಾಗಿ ತಮಗೆ ಇಷ್ಟವಿಲ್ಲದ ಶೈಕ್ಷಣಿಕ ಕೋರ್ಸ್ ಅಥವಾ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳಿಗೆ ಆರ್ಥಿಕ ಕಾರಣಗಳೂ ಇವೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆಯ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಶಾಲೆಗಳಲ್ಲಿ ಮಾನಸಿಕ ಆರೋಗ್ಯದ ವಿಷಯವನ್ನು ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳಬೇಕಾದ ಅಗತ್ಯವಿದೆ. ಕ್ರೀಡೆ ಮತ್ತು ಇತರ ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢವಾಗಿ ಬೆಳೆಯಲು ಸಹಕಾರಿಯಾಗುತ್ತವೆ. ಆದರೆ, ಹೆಚ್ಚಿನ ಶಾಲೆಗಳು ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ಒತ್ತು ನೀಡಿ, ಪಠ್ಯೇತರ ಚಟುವಟಿಕೆಗಳನ್ನು ಕಡೆಗಣಿಸುತ್ತಿವೆ. ವಿದ್ಯಾರ್ಥಿಗಳಿಗೆ ಆಪ್ತ ಸಮಾಲೋಚನೆಯ ಸೌಲಭ್ಯ ಒದಗಿಸಬಹುದಾದ ಸಾಧ್ಯತೆಯನ್ನು ಶಾಲೆಗಳು ಮತ್ತು ಶಿಕ್ಷಣ ಸಂಸ್ಥೆಗಳು ಹೊಂದಿದ್ದರೂ ಅವು ಆ ಕೆಲಸವನ್ನು ಮಾಡುತ್ತಿಲ್ಲ. ಈ ವಿಚಾರದಲ್ಲಿ ಪೋಷಕರ ಮೇಲೆ ಮಹತ್ತರವಾದ ಜವಾಬ್ದಾರಿ ಇದೆ. ಮಕ್ಕಳು ತಮ್ಮದೇ ಆದ ವೈಯಕ್ತಿಕ ಜೀವನವನ್ನು ಹೊಂದಿದ್ದಾರೆ ಎಂಬುದನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕು. ಪೋಷಕರ ಇಚ್ಛೆಗೆ ತಕ್ಕಂತೆ ಮಕ್ಕಳು ಜೀವನ ನಡೆಸಬೇಕು ಎಂದು ಅವರ ಮೇಲೆ ಒತ್ತಡ ಹೇರುವುದು ಸರಿಯಲ್ಲ. ಜಗತ್ತು ದಿನದಿಂದ ದಿನಕ್ಕೆ ಹೆಚ್ಚು ಸ್ಪರ್ಧಾತ್ಮಕವೂ ಮತ್ತು ವ್ಯಕ್ತಿಗತವೂ ಆಗುತ್ತಿದೆ. ಯಶಸ್ಸಿಗೆ ಒಂದೇ ಮಾದರಿ ಇರುವುದಿಲ್ಲ, ಜೀವನವನ್ನು ಹಲವು ಬಗೆಯಲ್ಲಿ ಯಶಸ್ವಿಯಾಗಿ ಮುನ್ನಡೆಸಬಹುದು ಎಂಬುದನ್ನು ಮಕ್ಕಳಿಗೆ ಮನದಟ್ಟು ಮಾಡುವ ಜವಾಬ್ದಾರಿ ಸಮಾಜದ ಮೇಲಿದೆ. ವಿದ್ಯಾರ್ಥಿಗಳ ಆತ್ಮಹತ್ಯೆ ಸಮಸ್ಯೆಯ ಪರಿಹಾರಕ್ಕೆ ವಿವಿಧ ಹಂತಗಳಲ್ಲಿ ಕೆಲಸ ಮಾಡಬೇಕಿದೆ.

ಸೊಂಪಾದಕೀಯ

ಕೋಟಿ ಕೊಟ್ಟರೂ ಹೋಗಲ್ಲ

ಟಿವಿ ರಿಯಾಲಿಟಿ ಶೋಗಳಲ್ಲಿ ಅನೇಕ ವಿಧ. ಅವುಗಳಲ್ಲಿ ಕೆಲವು ಟ್ಯಾಲೆಂಟ್ ಹಂಟ್ ಮಾಡಿದರೆ ಮತ್ತು ಅಲ್ಲಿನ ಸ್ಪರ್ಧಿಗಳು ಜನರ ಮನಸ್ಸನ್ನು ಹಂಟ್ ಮಾಡಿದರೆ, ಇನ್ನು ಕೆಲವು ವಿವಾದಗಳ ಕಾರಣಗಳಿಗಾಗಿ ಸದ್ದು ಮಾಡುತ್ತವೆ. ಈ ಎರಡನೇ ಕೆಟಗರಿಗೆ ಬರುವಂಥ ರಿಯಾಲಿಟಿ ಶೋ ಅಂದರೆ ಬಿಗ್ ಬಾಸ್. ಮೊದಲೆಲ್ಲ ಈ ಶೋಗೆ ಸೆಲೆಬ್ರಿಟಿಗಳನ್ನು ಮಾತ್ರ ಕರೆಸಲಾಗುತ್ತಿತ್ತು. ಆದರೆ, ನಂತರ ಈ ಶೋಗೆ ಬಂದ ಮೇಲೆ ಸೆಲೆಬ್ರಿಟಿಗಳಾದವರ ಸಂಖ್ಯೆಯೇ ಹೆಚ್ಚು. ಬಿಗ್ ಬಾಸ್ ಸ್ಪರ್ಧಿಗಳ ಪಟ್ಟಿ ಅನೌನ್ಸ್ ಆದಾಗ ಅಲ್ಲಿರುವ ಹೆಸರು ಮತ್ತು ಮುಖಗಳನ್ನು ನೋಡಿ, 'ಇದ್ಯಾರು ಗುರೂ?' ಎಂದು ಹುಬ್ಬೇರಿಸುವವರೇ ಹೆಚ್ಚು. ಹಾಗಿರುತ್ತದೆ ಈ ಸೆಲೆಕ್ಷನ್. ಸಣ್ಣ ಪುಟ್ಟ ಹಿನ್ನೆಲೆ ಯಿಂದ ಬಿಗ್ ಬಾಸ್‌ಗೆ ಬಂದು ಸಿನಿಮಾ ಹೀರೋ ಆಗುವ ವರೆಗೆ ಬೆಳೆದವರ ಪಟ್ಟಿ ಕೂಡ ಉದ್ದ ಇದೆ. ಹಾಗಾಗಿ ಈ ಶೋಗೆ ಬರಲು ಹಾತೊರೆಯುವವರ ಸಂಖ್ಯೆಯೂ ಹೆಚ್ಚು.

ಆದರೆ ಈಗ ಈ ಶೋಗೆ ಬರಲು ಒಂದು ಶಾರ್ಟ್‌ಕಟ್ ಸಿಕ್ಕಿದೆ. ಅದೇನೆಂದರೆ ಎಲ್ಲೆಂದರಲ್ಲಿ ಸಿಗುವ ಮೈಕುಗಳ ಮುಂದೆ 'ಅಯ್ಯೋ ಬಿಗ್ ಬಾಸಾ, ಕೋಟಿ ಕೊಟ್ಟರೂ ಆ ಕಾರ್ಯಕ್ರಮಕ್ಕೆ ನಾನು ಹೋಗುವುದಿಲ್ಲ' ಅಂತ ಸ್ಟೇಟ್‌ಮೆಂಟ್ ಕೊಡೋದು; ನಂತರ ಬಿಗ್ ಬಾಸ್‌ನಿಂದ ಆಫರ್ ಬಂದಾಗ ಅದನ್ನು ಎರಡೂ ಕೈಯಲ್ಲಿ ಅಪ್ಪಿಕೊಳ್ಳೋದು! ಈ ಬಾರಿಯ ಬಿಗ್ ಬಾಸ್ ಆರಂಭಕ್ಕೆ ಸೂಚನೆ ಸಿಕ್ಕ ಬೆನ್ನಲ್ಲೇ ಒಂದಷ್ಟು ಜನ ಅದೇ ಕೆಲಸ ಮಾಡುತ್ತಾ, 'ಕೋಟಿ ಕೊಟ್ಟರೂ ಬಿಗ್ ಬಾಸ್‌ಗೆ ಹೋಗಲ್ಲ' ಅಂತಿದ್ದಾರೆ. ತಾವು ಆ ಕಾರ್ಯಕ್ರಮಕ್ಕೆ ಹೋಗಲ್ಲ ಅಂತ ಹೇಳಿದರೆ ತಮಗೆ ಡಿಮಾಂಡ್ ಜಾಸ್ತಿಯಾಗುತ್ತದೆ ಅನ್ನೋದೇ ಈ ಸ್ಟೇಟ್‌ಮೆಂಟ್ ಪ್ರಿಯರ ಅನಿಸಿಕೆ. ಅದು ಬಹಳಷ್ಟು ಬಾರಿ ನಿಜ ಕೂಡ ಆಗಿದೆ. ಹಾಗಾಗಿ ಈ ಬಾರಿ ಕೂಡ ಹಲವರು ಅದೇ ರಾಗ ಹಾಡುತ್ತಿದ್ದಾರೆ- ಬಿಗ್ ಬಾಸ್ ಆಯ್ಕೆ ಪ್ರಕ್ರಿಯೆ ಶುರುವಾದ ನಂತರ ತಾವೇ ಮೊದಲ ಅಭ್ಯರ್ಥಿ ಯಾಗೋದು ಎಂಬ ನಂಬಿಕೆಯಲ್ಲಿ. ಅದನ್ನು ಕೇಳಿದ ಜನ ಮಾತ್ರ, 'ಹಾಗಾದರೆ ನಿಮಗೆ ಬಿಗ್ ಬಾಸ್‌ಗೆ ಹೋಗಲು ತುಂಬಾ ಆಸಕ್ತಿ ಇದೆ ಎಂದಾಯಿತು ಬಿಡಿ' ಎಂದು ತಮ್ಮೊಳಗೆ ತಾವೇ ನಗುತ್ತಿದ್ದಾರೆ.

ಸಂಪಾದಕರ ಸದ್ಯಶೋಧನೆ

ಚಕಾರ ಮತ್ತು ಟೆಮರಿಂಡ್

ಕನ್ನಡದಲ್ಲಿ ಚಕಾರ ಎಂಬ ಪದವಿದೆ. ನಾವು ಅದನ್ನು ನಿತ್ಯಜೀವನದಲ್ಲಿ ಧಾರಾಳವಾಗಿ ಬಳಸುತ್ತೇವೆ. 'ಆತನಿಗೆ ಬಾಯಿಗೆ ಬಂದಂತೆ ಬೈದೆ. ಸುಮ್ಮನೆ ಇದ್ದ. ಚಕಾರ ಎತ್ತಲಿಲ್ಲ' ಎಂದು ಹೇಳುತ್ತೇವೆ. ಅಂದರೆ ಅಷ್ಟು ಬೈದರೂ ತಿರುಗಿ ಮಾತಾಡಲಿಲ್ಲ ಅಥವಾ ಒಂದು ಪದವನ್ನೂ ಹೇಳಲಿಲ್ಲ ಎಂಬುದು ತಾತ್ಪರ್ಯ. ಈ ಚಕಾರ ಎಂಬ ಪದ ಹೇಗೆ ಬಂತು ಎಂದು ಪಾ.ವೆಂ.ಆಚಾರ್ಯರ 'ಪದಾರ್ಥ ಚಿಂತಾಮಣಿ' ಗ್ರಂಥದ ಪುಟಗಳನ್ನು ತಿರುವಿದೆ. ಆಚಾರ್ಯರು ಹೀಗೆ ಬರೆದಿದ್ದರು- ನಾವು ಸಾಮಾನ್ಯವಾಗಿ ಚಕಾರ ಶಬ್ದ ಎತ್ತಲಿಲ್ಲ ಅಥವಾ ಚಕಾರವೆತ್ತಲಿಲ್ಲ ಎನ್ನುತ್ತೇವೆ. ತನ್ನ ಮುಂದೆಯೇ ಚರ್ಚೆ ಎಷ್ಟು ನಡೆದರೂ ಅದು ತನ್ನನ್ನೇ ಕುರಿತಿದ್ದರೂ ಏನೊಂದೂ ಮಾತಾಡಲಿಲ್ಲ, ಉತ್ತರ ಕೊಡಲಿಲ್ಲ ಎನ್ನುವುದು ತಾತ್ಪರ್ಯ. ಈ ಮಾತಿನ ಮೂಲ ಕುತೂಹಲಕರವಾಗಿದೆ. ಸಂಸ್ಕೃತದಲ್ಲಿ 'ಚ' ಎಂಬೊಂದು ಅವ್ಯಯವಿದೆ. ಅದರ ಸಾಮಾನ್ಯ ಅರ್ಥ 'ಮತ್ತು' ಎಂದು. 'ಅಹಂ ಚ ತ್ವಂ ಚ' ಎಂದರೆ 'ನಾನು ಮತ್ತು ನೀನು'. ಆದರೆ ಅದನ್ನು ಸಂಸ್ಕೃತ ಸಾಹಿತ್ಯದಲ್ಲಿ ವಿಪುಲವಾದ ಅರ್ಥಗಳಲ್ಲಿ, ಕೆಲವೊಮ್ಮೆ ಏನೂ ಅರ್ಥವಿಲ್ಲದೆ ಶ್ಲೋಕಗಳಲ್ಲಿ ಕಡಿಮೆ ಬಿದ್ದ ಮಾತ್ರೆಗಳನ್ನು ಭರ್ತಿ ಮಾಡುವುದಕ್ಕೂ ಧಾರಾಳವಾಗಿ ಪ್ರಯೋಗಿಸಿರುವುದು ಕಾಣಿಸುತ್ತದೆ. ಅದು ಪಡೆದ ಅನೇಕಾರ್ಥಗಳಲ್ಲಿ ಯಾರಾದರೊಬ್ಬರ ಹೇಳಿಕೆಯನ್ನು ಆಕ್ಷೇಪಿಸುವುದು ಅಥವಾ ತಿದ್ದುಪಡಿ ಮಾಡುವುದು ಕೂಡ ಸೇರಿದೆ. 'ಅಪಿ ಚ', 'ಕಿಂ ಚ' (ಆದರೆ, ಆದರೂ) ಇತ್ಯಾದಿಗಳನ್ನು ಉದಾಹರಿಸಬಹುದು. ಹೀಗೆ 'ಚಕಾರ' ಎಂದರೆ 'ಚ' ಎಂಬ ಅಕ್ಷರ ಎಂದೂ ಸೌಮ್ಯ ವಿರೋಧ ಎಂದೂ ಅರ್ಥವಾಗುತ್ತದೆ. ಚಕಾರವೆತ್ತಲಿಲ್ಲ ಎಂದರೆ ಒಂದೇ ಅಕ್ಷರದಲ್ಲಿ ಕೂಡ ಅಲ್ಲಗಳೆಯಲಿಲ್ಲ. 'ಚಾಚೂ ತಪ್ಪದೇ ಎಲ್ಲವನ್ನೂ ಹೇಳಿಬಿಟ್ಟ' ಎನ್ನುವುದೂ ಸಂಸ್ಕೃತದ ಅಪಭ್ರಂಶವೆಂದೇ ತೋರುತ್ತದೆ. ಸಂಸ್ಕೃತದಲ್ಲಿ 'ಚ'ದ ಹಾಗೆ 'ತು' ಎಂಬ ಅವ್ಯಯವೂ ಇದೆ. ಅದಕ್ಕೆ ಸಾಮಾನ್ಯ ಅರ್ಥ 'ಅಂತೂ' (ಅಹಂತು = ನಾನಂತೂ) ಆದರೆ ವಿಶೇಷವಾಗಿ ಯಾವ ನಿಶ್ಚಿತಾರ್ಥವನ್ನೂ ದ್ಯೋತಿಸದೆ ಅಕ್ಷರ ಭರ್ತಿಗೂ ಅದನ್ನು ಬಳಸಿದ್ದು ಹೆಚ್ಚಾಗಿ ಪುರಾಣ ಸಾಹಿತ್ಯದಲ್ಲಿ ಕಾಣಿಸುತ್ತದೆ (ಹೀಗೆ ಬಳಸುವ ಇತರ ಅವ್ಯಯಗಳಲ್ಲಿ 'ವೈ' = ನಿಜಕ್ಕೂ, 'ಓ', 'ಹ' = ಅಂತೆ ಇವನ್ನೂ ಉಲ್ಲೇಖಿಸಬೇಕು). ಒಟ್ಟಿನಲ್ಲಿ ಚ ವೈ ತು ಹಿ ಹ ಇತ್ಯಾದಿ ಅವ್ಯಯಗಳು ಅರ್ಥವನ್ನು ವ್ಯತ್ಯಾಸಪಡಿಸುವುದಿಲ್ಲ, ಅವುಗಳಿಗೆ ಮಹತ್ವವಿಲ್ಲ. ಆದ್ದರಿಂದ 'ಚ-ತು ತಪ್ಪದೆ ಎಲ್ಲವನ್ನು ಹೇಳಿದ' ಎಂದರೆ ಮುಖ್ಯ ಅಮುಖ್ಯ ಎಣಿಸದೆ ಇದ್ದಕ್ಕಿದ್ದಂತೆ ಹೇಳಿದನೆಂದು ಅರ್ಥ. ಸಂಸ್ಕೃತ ಚ-ತು ಎಂಬವು ಸಾಮಾನ್ಯರ ಬಾಯಲ್ಲಿ ಚ-ಚು ಮತ್ತು ಅನಂತರ ಚಾ-ಚೂ ಆಗಿರಬೇಕು ಮತ್ತು ಮೂಲ ಮರೆತುಹೋಗಿರಬೇಕು. 'ಚರಖಾ ಚಲಾಚಲಾ ಕೇ ಲೇಂಗೇ ಸ್ವರಾಜ್ಯ ಲೇಂಗೇ' ಎಂದೋ ಚರಖಾದ ಸ್ಥಾನದಲ್ಲಿ ತಕಲಿ ಪದವನಿ ಹಾಡುತ್ತ ನಮ್ಮ ಸ್ವರಾಜ್ಯ ಚಳವಳಿಯಲ್ಲಿ ಪ್ರಭಾತ ಫೇರಿ ತೆಗೆಯುತ್ತಿದ್ದುದುಂಟು. ಈ ಚರಕಾ, ಚರಖಾ ಪದಗಳು ಮಾತ್ರ ಪಾರಸಿ ಭಾಷೆಯಿಂದ ತಂದವು. ಅವು ಸಂಸ್ಕೃತದ ಚಕ್ರ, ಗ್ರೀಕಿನ kuklos ಇತ್ಯಾದಿ ಆರ್ಯ ಭಾಷಾ ಶಬ್ದಗಳ ಸಂಬಂಧಿಯಾಗಿವೆಯೆಂಬುದು ನಿಜವಾದರೂ ನೂಲು ತೆಗೆಯುವ ರಾಟೆಯೆಂಬರ್ಥದಲ್ಲಿ ವಿದೇಶೀಯವೇ. 'ತಕಲಿ' (ನೂಲು ತೆಗೆಯುವ ಇನ್ನೊಂದು ಸಾಧನ) ಇದಾದರೆ ಶುದ್ಧ ಭಾರತೀಯ ಪದ. ತರ್ಕು ಎಂಬ ಸಂಸ್ಕೃತ ಪದಕ್ಕೆ ನೂಲು ತೆಗೆಯುವ ಸಾಧನ- ಕನ್ನಡದಲ್ಲಿ ಕದಿರು ಎಂದರ್ಥ. ಒಮ್ಮೆ ಆಚಾರ್ಯರಿಗೆ, 'ನಮ್ಮ ಹುಣಸೆಹಣ್ಣು ಇಂಗ್ಲಿಷಿನಲ್ಲಿ Tamarind ಹೇಗಾಯಿತು?' ಎಂದು ಕೇಳಿದರಂತೆ. ಅದಕ್ಕೆ ಅವರು ಕೊಟ್ಟ ಉತ್ತರ- 'ಹುಣಸೇಹಣ್ಣು ಈ ದೇಶದಿಂದಲೇ ಪಶ್ಚಿಮಕ್ಕೆ ಹೋದದ್ದು. ಒಯ್ದವರೂ ಅರಬರೇ. ಆದರೆ ಹುಣಸೇಹಣ್ಣು ನೋಡುವುದಕ್ಕೆ ಅವರ ದೇಶದ ಖರ್ಜೂರದ ಹಣ್ಣಿನ ಹಾಗೇ ಇದೆ. ಖರ್ಜೂರಕ್ಕೆ ಅರಬ್ಬಿ ಭಾಷೆಯಲ್ಲಿ 'ತರ್ಮ' ಎಂದು ಹೆಸರು. ಅವರು ಹುಣಸೇ ಹಣ್ಣನ್ನು ತರ್ಮಹಿಂದ್- ಹಿಂದುಸ್ತಾನದ ಖರ್ಜೂರ ಎಂದು ಕರೆದರು. ಅದು ಇಂಗ್ಲಿಷರ ಭಾಷೆಯಲ್ಲಿ ಟೆಮರಿಂಡ್ (tamarind) ಆಯಿತು'.

ಮೌನವಾಗಿರಲು ನಿರ್ಧರಿಸಿದ ಯತ್ನಾಳ್



ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ರಾಜ್ಯ ಬಿಜೆಪಿಯಲ್ಲಿ ತಳಮಳ ಸೃಷ್ಟಿಸಿದ್ದ ಬಸನಗೌಡ ಪಾಟೀಲ್ ಯತ್ನಾಳ್ ಆರು ತಿಂಗಳು ಮೌನವಾಗಿರಲು ನಿರ್ಧರಿಸಿದ್ದಾರೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಅವರು ನೀಡಿದ ಸೂಚನೆಯೇ ಇದಕ್ಕೆ ಕಾರಣ. ಇತ್ತೀಚೆಗೆ ದಿಲ್ಲಿ ದಂಡಯಾತ್ರೆ ಕೈಗೊಂಡಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಯತ್ನಾಳ್ ಆ್ಯಂಡ್ ಗ್ಯಾಂಗಿನ ವಿರುದ್ಧ ದೂರು ನೀಡಿದ್ದರಲ್ಲ, ಈ ಸಂದರ್ಭದಲ್ಲಿ ಯತ್ನಾಳ್ ಅವರನ್ನು ಪಕ್ಷದಿಂದ ಉಚ್ಚಾಟಿಸುವಂತೆ ಅವರು ಅಮಿತ್ ಶಾ ಮತ್ತು ನಡ್ಡಾ ಅವರನ್ನು ಒತ್ತಾಯಿಸಿದ್ದರು. 'ಪದೇಪದೆ ನಮ್ಮ ವಿರುದ್ಧ ಆರೋಪ ಮಾಡುತ್ತಿರುವ ಯತ್ನಾಳ್ ನಮಗಷ್ಟೇ ಅಲ್ಲ, ಆ ಮೂಲಕ ಇಡೀ ಪಕ್ಷವನ್ನೇ ಮುಜುಗರಕ್ಕೆ ಸಿಲುಕಿಸಿದ್ದಾರೆ. ಇದೇ ಸ್ಥಿತಿ ಮುಂದುವರಿದರೆ ಪಕ್ಷ ಕಟ್ಟುವ ಕೆಲಸಕ್ಕೆ ಅಡ್ಡಿಯಾಗುತ್ತದೆ. ಹೀಗಾಗಿ ತಕ್ಷಣ ಅವರಿಗೆ ಗೇಟ್‌ಪಾಸ್ ಕೊಡಿ' ಅಂತ ವಿಜಯೇಂದ್ರ ಒತ್ತಾಯಿಸಿದ್ದರು. ಆದರೆ ಆ ಹೊತ್ತಿಗಾಗಲೇ ರಾಜ್ಯ ಬಿಜೆಪಿಯಲ್ಲಿ ತಲೆ ಎತ್ತಿದ್ದ ಭಿನ್ನಮತೀಯರ ಬಲ ಕಣ್ಣಿಗೆ ಕಾಣಿಸುವಷ್ಟು ಸ್ಪಷ್ಟವಾಗಿದ್ದರಿಂದ ಅಮಿತ್ ಶಾ-ನಡ್ಡಾ ಜೋಡಿ, 'ಉಚ್ಚಾಟನೆ ಎಲ್ಲ ಬೇಕಿಲ್ಲ, ಇನ್ನು ಆರೋಪ ಮಾಡುತ್ತಾ ತಿರುಗಬೇಡಿ ಅಂತ ಯತ್ನಾಳ್ ಅವರಿಗೆ ಸೂಚನೆ ಕೊಡುತ್ತೇವೆ' ಅಂತ ಹೇಳಿ ಕಳಿಸಿದ್ದರು.

ಇದರ ಬೆನ್ನಲ್ಲೇ ಮೊನ್ನೆ ಯತ್ನಾಳ್ ಅವರನ್ನು ದಿಲ್ಲಿಗೆ ಕರೆಸಿಕೊಂಡ ನಡ್ಡಾ, 'ಪಕ್ಷದಲ್ಲಿ ಸಂಘರ್ಷ ಬೇಡ. ಹೀಗಾಗಿ ಸುಮ್ಮನಿರಿ' ಎಂದರಂತೆ. ಆದರೆ ಇದಕ್ಕೆ ಪ್ರತಿಕ್ರಿಯಿಸಿದ ಯತ್ನಾಳ್ ಅವರು, 'ಸರ್, ನಾವು ರಾಜ್ಯ ಸರಕಾರದ ಭ್ರಷ್ಟಾಚಾರದ ವಿರುದ್ಧ ಹೋರಾಡಬೇಕೆಂದರೆ ಮೊದಲು ನಮ್ಮ ನಾಯಕರು ಸ್ವಚ್ಛವಾಗಿರಬೇಕು. ಇಲ್ಲದಿದ್ದರೆ ಯಾವ ಮುಖ ಇಟ್ಟುಕೊಂಡು ಹೋರಾಡಲು ಸಾಧ್ಯ? ಇವರ ಮೇಲೇ ಭ್ರಷ್ಟಾಚಾರದ ಆರೋಪ ಇದ್ದರೆ ಕಾಂಗ್ರೆಸ್ ನಾಯಕರು ತಿರುಗೇಟು ಕೊಡುತ್ತಾರೆ. ಈಗ ಆಗುತ್ತಿರುವುದನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಹೀಗಾಗಿ ನಾವೇನು ಹೇಳುತ್ತಿದ್ದೇವೆ ಅಂದರೆ, ಪಕ್ಷದ ರಾಜ್ಯಾಧ್ಯಕ್ಷ ಹುದ್ದೆಯಿಂದ ವಿಜಯೇಂದ್ರ ಅವರನ್ನು ಕೆಳಗಿಳಿಸಿ. ಅವರ ಜಾಗಕ್ಕೆ ಸಿ.ಟಿ. ರವಿಯವರು ಬರಲಿ. ಇದೇ ರೀತಿ ವಿಧಾನಸಭೆಯ ಪ್ರತಿಪಕ್ಷ ನಾಯಕನ ಸ್ಥಾನದಲ್ಲಿ ಕೆಲಸ ಮಾಡಲು ನನಗೆ ಅವಕಾಶ ಕೊಡಿ. ಇದಾದ ಮೇಲೆ ಕರ್ನಾಟಕದಲ್ಲಿ ಪಕ್ಷ ಸಂಘಟನೆಯ ಕೆಲಸ ಹೇಗಾಗುತ್ತದೆ ಅಂತ ನೀವೇ ನೋಡಿ' ಅಂತ ವಿವರಿಸಿದ್ದಾರೆ.

ಯಾವಾಗ ಯತ್ನಾಳ್ ಫೈರ್‌ಬ್ರ್ಯಾಂಡಿನ ತರಹ ಮಾತನಾಡಿದರೋ, ಅವರನ್ನು ಸಮಾಧಾನಿಸಿದ ನಡ್ಡಾ ಅವರು, 'ನೋ, ನೋ, ವಿಜಯೇಂದ್ರ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ನೇಮಿಸಿ ಇನ್ನೂ ಆರು ತಿಂಗಳಾಗಿದೆ ಅಷ್ಟೇ. ಹೀಗಾಗಿ ಆರು ತಿಂಗಳು ಮೌನವಾಗಿರಿ. ಪರಿಸ್ಥಿತಿ ಏನಾಗುತ್ತದೋ ನೋಡೋಣ. ಆಮೇಲೆ ಮುಂದಿನ ಮಾತು' ಎಂದಿದ್ದಾರೆ.

ನಡ್ಡಾ ಈ ಮಾತು ಹೇಳುತ್ತಿದ್ದಂತೆ ಖುಷಿಯಾದ ಯತ್ನಾಳ್ ದಿಲ್ಲಿಯಿಂದ ವಾಪಸ್ ಬಂದಿದ್ದಾರೆ. ಈಗ ಅವರ ಕ್ಯಾಂಪಿನಲ್ಲಿ ಹರಡಿರುವ ಸುದ್ದಿಯ ಪ್ರಕಾರ, ಆರು ತಿಂಗಳ ನಂತರ ವಿಜಯೇಂದ್ರ ಅಧ್ಯಕ್ಷ ಸ್ಥಾನದಿಂದ ಮತ್ತು ಅಶೋಕ್ ವಿಧಾನಸಭೆಯ ಪ್ರತಿಪಕ್ಷ ನಾಯಕನ ಸ್ಥಾನದಿಂದ ಕೆಳಗಿಳಿಯಲಿದ್ದಾರೆ. ಅರ್ಥಾತ್, ಆರು ತಿಂಗಳಾಗುತ್ತಿದ್ದಂತೆ ಸಿ.ಟಿ.ರವಿ ಪಕ್ಷದ ಅಧ್ಯಕ್ಷ ಪಟ್ಟವನ್ನು ಅಲಂಕರಿಸಲಿದ್ದರೆ, ಯತ್ನಾಳ್ ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗುವುದು ಗ್ಯಾರಂಟಿ ಎಂಬುದು ಈ ಕ್ಯಾಂಪಿನ ಸಂಭ್ರಮ. ಮುಂದೇನು ಕತೆಯೋ?

ಯಡಿಯೂರಪ್ಪ-1 ಯುಗದ ಕನಸು

ಅಂದ ಹಾಗೆ, ಕಾಂಗ್ರೆಸ್ ಪಕ್ಷದ ಬೆಳವಣಿಗೆಗಳನ್ನು ಗಮನಿಸಿದ ಕೆಲವರಿಗೆ ಕರ್ನಾಟಕದಲ್ಲಿ ಯಡಿಯೂರಪ್ಪ-1 ಯುಗ ಮರುಕಳಿಸುವ ಅನುಮಾನ ಕಾಡುತ್ತಿದೆ. 2008ರಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಯಡಿಯೂರಪ್ಪ ಅವರು 2011ರಲ್ಲಿ ರಾಜೀನಾಮೆ ನೀಡುವ ಅನಿವಾರ್ಯತೆ ಎದುರಾಯಿತು. ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ನೀಡಿದ ವರದಿ ಯಡಿಯೂರಪ್ಪ ಅವರ ಕುರ್ಚಿಗೆ ಮುಳುವಾಗಿದ್ದು ರಹಸ್ಯವೇನಲ್ಲ. ಹೀಗೆ ಅವತ್ತು ಯಡಿಯೂರಪ್ಪ ರಾಜೀನಾಮೆ ಕೊಟ್ಟ ನಂತರ ಈ ಜಾಗಕ್ಕೆ ಜಗದೀಶ್ ಶೆಟ್ಟರ್ ಅವರನ್ನು ತರುವುದು ವರಿಷ್ಠರ ಬಯಕೆಯಾಗಿತ್ತು.

ಆದರೆ ಅಷ್ಟೊತ್ತಿಗಾಗಲೇ ಜಗದೀಶ್ ಶೆಟ್ಟರ್ ಅವರನ್ನು ಪಾರಂಪರಿಕ ವೈರಿ ಎಂದು ಪರಿಗಣಿಸಿದ್ದ ಯಡಿಯೂರಪ್ಪ ಇದನ್ನೊಪ್ಪದೆ ಡಿ.ವಿ.ಸದಾನಂದ ಗೌಡರನ್ನು ತಂದು ಕೂರಿಸಿದರು. ಹೀಗವರು ಸದಾನಂದ ಗೌಡರನ್ನು ತಂದು ಕೂರಿಸುವುದರ ಹಿಂದೆ ಶೋಭಾ ಕರಂದ್ಲಾಜೆ, ಡಿ.ಎನ್.ಜೀವರಾಜ್ ಮತ್ತು ರೇಣುಕಾಚಾರ್ಯ ಅವರಂಥವರ ಒತ್ತಾಸೆ ಇತ್ತು. ಮುಖ್ಯಮಂತ್ರಿಯಾಗುವವರು ಯಡಿಯೂರಪ್ಪರ ನಿಷ್ಠರಾಗಿರಬೇಕು ಎಂಬ ಧೋರಣೆಯೇ ಇದಕ್ಕೆ ಕಾರಣ. ಅರ್ಥಾತ್, ಅವತ್ತು ಹೈಕಮಾಂಡ್ ವರಿಷ್ಠರು ಬಯಸಿದರೂ ತಮ್ಮ ಕ್ಯಾಂಡಿಡೇಟ್ ಅನ್ನು ಮುಖ್ಯಮಂತ್ರಿ ಹುದ್ದೆಗೆ ತಂದು ಕೂರಿಸಲಾಗಲಿಲ್ಲ. ಇದಕ್ಕೆ ಯಡಿಯೂರಪ್ಪ ಅವರಿಗಿದ್ದ ಪವರ್ ಕಾರಣವಾಗಿತ್ತು.

ತದನಂತರದ ದಿನಗಳಲ್ಲಿ, 'ಸದಾನಂದ ಗೌಡರು ನಿಮಗೆ ನಿಷ್ಠರಾಗಿಲ್ಲ' ಅಂತ ಬೆಂಬಲಿಗರು ದೂರು ಹೊತ್ತು ತರತೊಡಗಿದಾಗ ಪುನಃ ಯಡಿಯೂರಪ್ಪ ಕೆರಳಿದರು. ಹೀಗಾಗಿ ಹಿಂದೆ ತಾವೇ ವಿರೋಧಿಸುತ್ತಿದ್ದ ಜಗದೀಶ್ ಶೆಟ್ಟರ್ ಅವರ ಕೈ ಹಿಡಿದು ಸಿಎಂ ಹುದ್ದೆಯ ಮೇಲೆ ತಂದು ಕೂರಿಸಿದರು. ಹೀಗೆ ಅವತ್ತು ಬಿಜೆಪಿಯಲ್ಲಿ ಯಡಿಯೂರಪ್ಪ ಅವರಿಗೆ ಯಾವ ಪವರ್ ಇತ್ತೋ? ಅದೇ ಪವರ್ ಇವತ್ತು ಕಾಂಗ್ರೆಸ್ ಪಕ್ಷದಲ್ಲಿ ಸಿದ್ದರಾಮಯ್ಯ ಅವರಿಗಿದೆ. ನಾಳೆ ಮುಡಾ ಪ್ರಕರಣ ತಮ್ಮ ಕುರ್ಚಿಗೆ ಆಪತ್ತು ತಂದರೆ ಸಿದ್ದರಾಮಯ್ಯ ಅವರು ಡಿಕೆಶಿ ಬದಲು ತಮಗೆ ಬೇಕಾದವರು ಸಿಎಂ ಹುದ್ದೆಯ ಮೇಲೆ ಕೂರಲಿ ಅಂತ ಬಯಸಬಹುದು ಎಂಬುದು ಕೆಲವರ ಅನುಮಾನ.

ಅಂದ ಹಾಗೆ, ಸಿದ್ದರಾಮಯ್ಯ ಅವರು ಕೆಳಗಿಳಿಯುವುದು ಸುಲಭದ ಮಾತಲ್ಲವಾದರೂ ರಾಜ್ಯ ಕಾಂಗ್ರೆಸ್‌ನಲ್ಲಿ ಮಾತ್ರ ಸಿಎಂ ಹುದ್ದೆಯ ಆಕಾಂಕ್ಷಿಗಳು ಹೆಚ್ಚುತ್ತಲೇ ಇದ್ದಾರೆ. ಸಹಜ ನ್ಯಾಯದಡಿ ತಮಗೆ ಸಿಎಂ ಪಟ್ಟ ದಕ್ಕುತ್ತದೆ ಎಂಬುದು ಡಿಸಿಎಂ ಡಿಕೆಶಿ ಲೆಕ್ಕಾಚಾರವಾಗಿದ್ದರೂ, ಶಾಸಕಾಂಗ ಪಕ್ಷದ ಬಲ ತಮ್ಮ ಜತೆಗಿರಲಿದೆ ಎಂಬ ನಂಬಿಕೆಯಿಂದ ಗೃಹ ಸಚಿವ ಜಿ.ಪರಮೇಶ್ವರ್, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಭಾರಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ರೇಸಿನಲ್ಲಿ ಕಾಣಿಸಿಕೊಂಡಿದ್ದಾರೆ. ಮೂಲಗಳ ಪ್ರಕಾರ, ಸಿದ್ದರಾಮಯ್ಯ ಕೆಳಗಿಳಿಯುವುದೇ ಆದರೆ ತಮಗಿರುವ ಬಲವನ್ನು ನಮಗೆ ವರ್ಗಾಯಿಸುತ್ತಾರೆ ಎಂಬುದು ಈ ನಾಯಕರ ಲೆಕ್ಕಾಚಾರ. ಕುತೂಹಲದ ಸಂಗತಿ ಎಂದರೆ ಇದನ್ನು ಬಲ್ಲ ಹಿರಿಯ ನಾಯಕ ಆರ್.ವಿ.ದೇಶಪಾಂಡೆ, 'ಸಿದ್ದರಾಮಯ್ಯ ಅವರು ಬಯಸಿದರೆ ನಾನು ಸಿಎಂ ಆಗಲು ಸಿದ್ಧ' ಎಂದಿದ್ದಾರೆ. ಆದರೆ ಪ್ರಾಕ್ಟಿಕಲಿ ಇದು ಸಾಧ್ಯವೇ ಅಂತ ನೋಡಿದರೆ ಬಹುತೇಕ ಅಸಾಧ್ಯ ಎನ್ನಿಸುತ್ತದೆ. ಕಾರಣ? ಮೊದಲನೆಯದಾಗಿ ಸಿದ್ದರಾಮಯ್ಯ ಅವರ ಪದಚ್ಯುತಿಯನ್ನು ಊಹಿಸಿಕೊಳ್ಳಲು ಕಾಂಗ್ರೆಸ್ ವರಿಷ್ಠರು ತಯಾರಿಲ್ಲ. ಎರಡನೆಯದಾಗಿ, ಮುಡಾ ಪ್ರಕರಣದ ಹಿನ್ನೆಲೆಯಲ್ಲಿ ನ್ಯಾಯಾಲಯದ ತೀರ್ಪು ಸಿದ್ದರಾಮಯ್ಯ ಅವರಿಗೆ ವಿರುದ್ಧವಾದರೂ ಕಾನೂನು ಹೋರಾಟದ ಮಾರ್ಗ ಇದ್ದೇ ಇದೆ.

ಅದೇ ರೀತಿ, ಕಾನೂನು ಹೋರಾಟ ಸಂಪೂರ್ಣ ವಿಫಲವಾಗಿ ಸಿದ್ದರಾಮಯ್ಯ ಅವರ ವಿರುದ್ಧ ಮೊಕದ್ದಮೆ ದಾಖಲಾಗಿ ತನಿಖೆ ಆರಂಭವಾದರೂ ಅದು ಮುಗಿಯಲು ಇನ್ನಷ್ಟು ಸಮಯ ಬೇಕು. ಮುಂದೆ ತನಿಖೆ ಮುಗಿದ ಮೇಲೆ ಸಿದ್ದರಾಮಯ್ಯ ದೋಷಿ ಅಂತ ಅದು ಹೇಳಬೇಕೆಂದಿಲ್ಲ. ಬದಲಿಗೆ ಈ ವಿಷಯದಲ್ಲಿ ಸಿದ್ದರಾಮಯ್ಯ ತಪ್ಪಿತಸ್ಥರಲ್ಲ ಅಂತ ಹೇಳಬಹುದು. ಹೀಗಾಗಿ ಈ ಬಗ್ಗೆ ಎಷ್ಟೇ ಲೆಕ್ಕಾಚಾರ ಹಾಕಿದರೂ ಸಿದ್ದರಾಮಯ್ಯ ಅವರ ಕುರ್ಚಿಗೆ ತಕ್ಷಣ ಅಪಾಯ ಎದುರಾಗುತ್ತದೆ ಅಂತ ಊಹಿಸುವುದು ಪ್ರಾಕ್ಟಿಕಲ್ ಅಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಮುಂದೆ ಪರಿಸ್ಥಿತಿ ವ್ಯತಿರಿಕ್ತವಾದರೂ ತಮ್ಮ ಜತೆ ಸಾಲಿಡ್ಡಾಗಿ ನಿಂತ ಕಾಂಗ್ರೆಸ್ ಹೈಕಮಾಂಡ್ ಅನ್ನು ಧಿಕ್ಕರಿಸಿ ತಮಗೆ ಬೇಕಾದವರನ್ನು ಸಿಎಂ ಮಾಡಲು ಸಿದ್ದರಾಮಯ್ಯ ಅಣಿಯಾಗುತ್ತಾರೆ ಅಂತ ಊಹಿಸುವುದೂ ಅಸಾಧ್ಯ. ಹೀಗಾಗಿ ಇವತ್ತಿನ ಬೆಳವಣಿಗೆಗಳನ್ನು ಕಣ್ಣ ಮುಂದಿಟ್ಟುಕೊಂಡು ಯಡಿಯೂರಪ್ಪ-1 ಯುಗ ಮರುಕಳಿಸುತ್ತದೆ ಅನ್ನಲು ಕಾರಣಗಳೇ ಇಲ್ಲ. ಅರ್ಥಾತ್, ಕರ್ನಾಟಕದ ರಾಜಕಾರಣದಲ್ಲಿ ಸಡನ್ ಸಿಎಂಗಳು ಉದ್ಭವಿಸುವುದು ಕಷ್ಟ.

ಸಿಕ್ಕರೆ ಡಿಕೆಶಿಗಷ್ಟೇ ಚಾನ್ಸು?

ಇನ್ನು ಪಕ್ಷದ ಮೂಲಗಳ ಪ್ರಕಾರ, ಕರ್ನಾಟಕದಲ್ಲಿ ಸಿಎಂ ಹುದ್ದೆ ತೆರವಾಗುವುದಿಲ್ಲ. ಹಾಗೊಂದು ವೇಳೆ ಅಂಥ ಸಂದರ್ಭ ಬಂದರೆ ನಿಸ್ಸಂಶಯವಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲಿದ್ದಾರೆ. ಕಾರಣ? ಕಳೆದ ವರ್ಷ ಪಕ್ಷ ಅಧಿಕಾರಕ್ಕೆ ಬಂದಾಗ ಸಿದ್ದರಾಮಯ್ಯ ಸಿಎಂ ಹುದ್ದೆಗೇರುವುದು ಹೇಗೆ ಸಹಜ ನ್ಯಾಯವಾಗಿತ್ತೋ, ಹಾಗೆಯೇ ಮುಂದಿನ ಕಂತಿನಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವುದೂ ಸಹಜ ನ್ಯಾಯ. ಕಾರಣ? ಇವತ್ತು ಕರ್ನಾಟಕದಲ್ಲಿ ಪಕ್ಷ ಅಧಿಕಾರಕ್ಕೆ ಬರುವುದರ ಹಿಂದೆ ಸಿದ್ದರಾಮಯ್ಯ ಅವರ ಶ್ರಮ ಹೇಗೆ ಕಾರಣವಾಗಿದೆಯೋ, ಡಿಕೆಶಿ ಶ್ರಮವೂ ಅಷ್ಟೇ ಕಾರಣವಾಗಿದೆ.

ಅಂದ ಹಾಗೆ, ಚುನಾವಣೆಯಲ್ಲಿ ಕಾಂಗ್ರೆಸ್ ಸೈನ್ಯವನ್ನು ಮುಂದೆ ನಡೆಸಲು ಸಿದ್ದರಾಮಯ್ಯ ಮತ್ತು ಡಿಕೆಶಿ ಇನ್‌ವೆಸ್ಟ್ ಮಾಡಿದ್ದಾರೆ. ಅವರ ಪ್ರಯತ್ನದ ಫಲವಾಗಿಯೇ, ಚುನಾವಣೆಯಲ್ಲಿ ಸ್ಪರ್ಧಿಸಿದ ಪಕ್ಷದ ಅಭ್ಯರ್ಥಿಗಳಿಗೆ ಸಾಲಿಡ್ ಪವರ್ ಸಿಕ್ಕಿದೆ. ಉಳಿದಂತೆ ಕೆಲ ನಾಯಕರು ತಮ್ಮ ಕ್ಷೇತ್ರವನ್ನು ಹೊರತುಪಡಿಸಿ, ಅಕ್ಕಪಕ್ಕದ ಕ್ಷೇತ್ರಗಳಿಗೆ ಇನ್‌ವೆಸ್ಟ್ ಮಾಡಿದ್ದಾರಾದರೂ ಅದನ್ನು ಡಿಕೆಶಿ ಇನ್‌ವೆಸ್ಟ್‌ಮೆಂಟಿನ ಜತೆ ಹೋಲಿಸಲು ಸಾಧ್ಯವೇ ಇಲ್ಲ. ಇನ್ನು ಸಿದ್ದರಾಮಯ್ಯ ಅವರ ನಂತರ, ಬಲಾಬಲವನ್ನು ಆಧರಿಸಿ ಶಾಸಕಾಂಗ ನಾಯಕನನ್ನು ನಿರ್ಧರಿಸಲು ವರಿಷ್ಠರು ಬಯಸುವುದಿಲ್ಲ, ಹಾಗೆ ಮಾಡುವುದು ಎಂದರೆ ಪಕ್ಷ ಹೋಳಾಗಲು, ಆ ಮೂಲಕ ಸರಕಾರ ಉರುಳಲು ದಾರಿ ಮಾಡಿಕೊಟ್ಟಂತೆ ಎಂಬುದು ಅವರಿಗೆ ಗೊತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ ಶಾಸಕಾಂಗ ನಾಯಕರನ್ನು ಆಯ್ಕೆ ಮಾಡುವಾಗ ನಾಯಕ ಪ್ಲಸ್ ಇನ್‌ವೆಸ್ಟರ್ ಮುಖ್ಯ. 1990ರಲ್ಲಿ ವೀರೇಂದ್ರ ಪಾಟೀಲರನ್ನು ಸಿಎಂ ಹುದ್ದೆಯಿಂದ ಕೆಳಗಿಳಿಸಲಾಯಿತಲ್ಲ? ಆ ಸಂದರ್ಭದಲ್ಲಿ ಶಾಸಕಾಂಗದ ಬಲಾಬಲವನ್ನು ಪರಿಗಣಿಸಿದ್ದರೆ ಕೆ.ಎಚ್.ಪಾಟೀಲ್ ಮುಖ್ಯಮಂತ್ರಿಯಾಗುತ್ತಿದ್ದರು. ಆದರೆ ಅವರ ಬದಲು ಪಕ್ಷದ ಹೈಕಮಾಂಡ್ ಬಂಗಾರಪ್ಪ ಅವರನ್ನು ಸಿಎಂ ಹುದ್ದೆಗೆ ತಂದು ಕೂರಿಸಿತು. ಕಾರಣ? ಕೆಲವೇ ದಿನಗಳಲ್ಲಿ ಎದುರಾಗಲಿದ್ದ ಲೋಕಸಭೆ ಚುನಾವಣೆಗೆ ದೊಡ್ಡ ಮಟ್ಟದ ಫಂಡು ಬೇಕಿತ್ತು. ಅದನ್ನು ಸಂಗ್ರಹಿಸಲು ಕೆ.ಎಚ್.ಪಾಟೀಲರಿಗಿಂತ ಬಂಗಾರಪ್ಪ ಬೆಟರ್ ಎಂಬುದು ಹೈಕಮಾಂಡ್ ಲೆಕ್ಕಾಚಾರವಾಗಿತ್ತು.

ಹೀಗಾಗಿಯೇ ಅವತ್ತು ಶಾಸಕಾಂಗ ಪಕ್ಷದಲ್ಲಿ ತಮ್ಮ ಬಲ ಸಾಬೀತುಪಡಿಸಲು ಅಣಿಯಾಗಿದ್ದ ಕೆ.ಎಚ್.ಪಾಟೀಲರಿಗೆ ಎಐಸಿಸಿ ಅಧ್ಯಕ್ಷ ರಾಜೀವ್ ಗಾಂಧಿ ಫೋನು ಮಾಡಿ ತಮ್ಮ ಮನದಿಂಗಿತವನ್ನು ತೋಡಿಕೊಂಡರು. 'ಇವತ್ತು ನಾವು ಬಂಗಾರಪ್ಪ ಅವರನ್ನು ಸಿಎಂ ಹುದ್ದೆಗೆ ತರಲು ಬಯಸಿದ್ದೇವೆ. ದಯವಿಟ್ಟು ಸಹಕರಿಸಿ' ಅಂತ ಅವರು ಹೇಳಿದಾಗ, 'ಸಹಕಾರ ಕೊಡಲು ಏಕೆ ಕೇಳುತ್ತೀರಿ ಸರ್. ಆರ್ಡರ್ ಮಾಡಿ.ನಿಮ್ಮ ಆರ್ಡರಿಗೆ ನಾನು ತಲೆಬಾಗುತ್ತೇನೆ' ಎಂದರು ಕೆ.ಎಚ್.ಪಾಟೀಲ್. ಇದರರ್ಥ ಬೇರೇನೂ ಅಲ್ಲ, ನಾಯಕರಾಗುವವರು ಮುಂದಿನ ಜವಾಬ್ದಾರಿಗಳನ್ನು ಹೊರಲು ಶಕ್ತರಾಗಿರಬೇಕು ಎಂಬುದು ಯಾವುದೇ ಪಕ್ಷದ ವರಿಷ್ಠರ ಬಯಕೆ. ಈ ವಿಷಯ ಬಂದಾಗ ಇವತ್ತು ಸಿದ್ದರಾಮಯ್ಯ ನಂತರ ಚಾನ್ಸು ಪಡೆಯುವವರಿದ್ದರೆ ಅದು ಒನ್ ಆ್ಯಂಡ್ ಓನ್ಲಿ ಡಿಕೆಶಿ. 'ಇಲ್ಲ, ನಾಯಕತ್ವದ ಆಯ್ಕೆಗೆ ಶಾಸಕಾಂಗದ ಬಲಾಬಲವೇ ಅಂತಿಮ' ಎಂದು ಯಾರಾದರೂ ಪಟ್ಟು ಹಿಡಿದರೆ ಸೋನಿಯಾ ಗಾಂಧಿ ಅವರಾಗಲೀ, ರಾಹುಲ್ ಗಾಂಧಿ ಅವರಾಗಲೀ ಇದಕ್ಕೆ ಅವಕಾಶ ಕೊಡುವ ಸಾಧ್ಯತೆ ಇಲ್ಲ. ಒಂದು ವೇಳೆ ಇದನ್ನು ಧಿಕ್ಕರಿಸಿ, 'ಸರಕಾರ ಉರುಳಿದ್ರೂ ಪರವಾಗಿಲ್ಲ, ನಮ್ಮ ದಾರಿ ನಮಗೆ' ಅಂತ ಯಾರಾದರೂ ಹೊರಟರೆ ಕೆಲ ದಿನಗಳ ಕಾಲ ಒಂದಷ್ಟು ಶಾಸಕರು ಬೆಂಬಲಿಸಬಹುದು. ಆದರೆ ಸರಕಾರ ಉರುಳುವುದು ಗ್ಯಾರಂಟಿ ಅನ್ನಿಸಿದರೆ ತುಂಬ ಜನ 'ಪೀಚೇ ಮುಡ್' ಅಂತ ಕೂಗಿ ಹಿಂದೆ ತಿರುಗುತ್ತಾರೆ. ಹೈಕಮಾಂಡ್ ಜತೆ ನಿಲ್ಲುತ್ತಾರೆ.

ಅಂದ ಹಾಗೆ, ಇವೆಲ್ಲವನ್ನೂ ಮೀರಿ ಪರ್ಯಾಯ ನಾಯಕತ್ವಕ್ಕೆ ಪೈಪೋಟಿ ನಡೆಯುತ್ತದಾ? ಗೊತ್ತಿಲ್ಲ, ಆದರೆ ಸಿದ್ದರಾಮಯ್ಯ ಸಿಎಂ ಹುದ್ದೆಯಲ್ಲಿರುವ ತನಕ ಇಂಥ ಸವಾಲು ಉದ್ಭವವಾಗುವುದಿಲ್ಲ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವಸ್ತುಸ್ಥಿತಿ ತಿಳಿಯಿತು

ಜಿ. ಪ್ರತಾಪ್ ಕೋಡಂಚ ಅವರ 'ಸ್ವರ್ಗಾರೋಹಣ ವಿವಾದದ ಒಂದು ಇಣುಕುನೋಟ' ಲೇಖನವನ್ನು ಓದಿದೆ (ವಿಶ್ವವಾಣಿ ಸೆ.6). ಪುತ್ತಿಗೆ ಶ್ರೀಗಳು ಸಂಸ್ಕೃತ ಭಾಷೆಯ ಕಲಿಕೆಯನ್ನು ಪ್ರೋತ್ಸಾಹಿಸಲು, 'ಅದೊಂದು ದೇವಭಾಷೆ; ಹೀಗಾಗಿ ಅದನ್ನು ಬಲ್ಲವರು ಸ್ವರ್ಗವನ್ನು ತಲುಪಲು ಅದು ವೀಸಾ ರೀತಿಯಲ್ಲಿ ಸಹಾಯ ಮಾಡುತ್ತದೆ' ಎಂದು ಹಾಸ್ಯ ಲೇಪಿಸಿ ಹೇಳಿದ್ದು, ಆದರೆ ಕೆಲ ಮಾಧ್ಯಮಗಳಲ್ಲಿ ಅದು ತಿರುಚಲ್ಪಟ್ಟು ವಿವಾದಕ್ಕೆ ಕಾರಣವಾಯ್ತು ಎಂಬುದು ಈ ಲೇಖನದಿಂದ ಗೊತ್ತಾಯಿತು.

ಹಿರಿಯರ ಹಿತವಚನಗಳು ಈಚೀಚೆಗೆ ಪ್ರಚಾರಕ್ಕಿಂತ ಅಪಪ್ರಚಾರಕ್ಕೆ ಒಳಗಾಗುವುದೇ ಜಾಸ್ತಿ ಆಗುತ್ತಿದ್ದು, ಅವುಗಳ ಮೂಲ ಅರ್ಥ ಮತ್ತು ಆಶಯ ಗಳೇ ಜನರಿಗೆ ತಲುಪುತ್ತಿಲ್ಲ ಎನ್ನಬಹುದು. ಹೀಗಾಗಿ, ಶ್ರೀಗಳು ಸದುದ್ದೇಶದಿಂದ ಮಾಡಿದ ಉಪದೇಶವೂ ಈಗ ಕೆಲವರ ಪಾಲಿಗೆ ವಿವಾದದ ಸರಕು ಆಗಿಬಿಟ್ಟಿದೆ. ಸರಳ ಮತ್ತು ಸುಸೂತ್ರ ವಿಚಾರವೊಂದು ಕೆಲ ಮಾಧ್ಯಮಗಳ ಕೈವಾಡದಿಂದಾಗಿ ಕಗ್ಗಂಟಾಗಿ ಜನರ ನಡುವೆ ಗಿರಕಿ ಹೊಡೆಯುತ್ತಿರುವಾಗ ಪ್ರತಾಪ್ ಅವರು ಅದನ್ನು ಬಿಡಿಸಿ, ಗೊಂದಲವನ್ನು ಪರಿಹರಿಸಿ, ಮಾತಿನ ಮೂಲರೂಪ ಹಾಗೂ ಉದ್ದೇಶವನ್ನು ವಿವರವಾಗಿ ತೆರೆದಿಟ್ಟಿದ್ದು ಶ್ಲಾಘನೀಯ. ದಿನ ಬೆಳಗಾದರೆ ಸಮಾಜವನ್ನು ಒಡೆಯುವ ದ್ವೇಷದ ಮಾತುಗಳನ್ನು ಕೇಳಿ/ಓದಿ ಸಾಕಾಗಿ ಹೋಗಿತ್ತು. ಅದೇ ವೇಳೆಗೆ, ಪುತ್ತಿಗೆ ಶ್ರೀಗಳಿಂದ ಇಂಥ ಹೇಳಿಕೆ ಹೊಮ್ಮಿದೆ ಎಂದು ಗೊತ್ತಾದಾಗ ಸ್ವಲ್ಪ ಕಿರಿಕಿರಿಯಾಗಿತ್ತು. ಆದರೀಗ ವಸ್ತುಸ್ಥಿತಿ ತಿಳಿದು ಎಲ್ಲವೂ ತಿಳಿಯಾಯಿತು.

- **ಲಕ್ಷ್ಮೀಕಾಂತ ಪಾಟೀಲ**, ಮೈಸೂರು

ತಮಿಳುನಾಡೂ ಕೈ ಜೋಡಿಸಲಿ

ಮೇಕೆದಾಟು ಯೋಜನೆ ಸಾಕಾರಗೊಂಡರೆ ಕರ್ನಾಟಕಕ್ಕಿಂತ ತಮಿಳುನಾಡಿನ ಜನರಿಗೇ ಹೆಚ್ಚು ಉಪಯೋಗ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಮೇಕೆದಾಟುವಿನಿಂದ ಎರಡೂ ರಾಜ್ಯಗಳಿಗೆ ಅನುಕೂಲವಾಗುತ್ತದೆ ಎನ್ನುವುದಾದರೆ, ಈ ಯೋಜನೆಗೆ ವಿನಿಯೋಗಿಸಬೇಕಾದ ಶ್ರಮ, ಹಣ ಇತ್ಯಾದಿಯನ್ನು ಎರಡೂ ರಾಜ್ಯಗಳು ತಮಗೆ ದಕ್ಕುವ ಲಾಭದ ಅನುಸಾರ ಹಂಚಿಕೊಳ್ಳಬೇಕಲ್ಲವೇ? ಆ ನೆರೆರಾಜ್ಯವೋ, ಹಣ ಕೊಡುವುದಿರಲಿ ಕನಿಷ್ಠ ನೈತಿಕ ಬೆಂಬಲವನ್ನೂ ನೀಡುವುದಿಲ್ಲ. ಜತೆಗೆ ಯೋಜನೆಯ ಪ್ರತಿ ಹೆಜ್ಜೆಗೂ ಅಡ್ಡಗಾಲು ಹಾಕುತ್ತದೆ! 'ಯಾರದ್ದೋ ದುಡ್ಡು, ಯಲ್ಲಮ್ಮನ ಜಾತ್ರೆ' ಎಂಬ ಮಾತಿನಂತೆ, ನಮ್ಮ ಹಣದಿಂದ ನೆರೆರಾಜ್ಯದವರಿಗೆ ಹೆಚ್ಚು ಉಪಯೋಗ ಎಂದರೆ ಅದು ಅರ್ಥಹೀನ.

-**ಪತ್ತಂಗಿ ಎಸ್.ಮುರಳಿ**, ಬೆಂಗಳೂರು

ಗುಟ್ಕಾ ನಿಷೇಧಿಸಿ

ಸಾರ್ವಜನಿಕ ಸ್ಥಳಗಳಲ್ಲಿ ಗುಟ್ಕಾ, ಸಿಗರೇಟು ಸೇರಿದಂತೆ ತಂಬಾಕುಯುಕ್ತ ಇತರ ಪದಾರ್ಥಗಳ ಸೇವನೆಗೆ ನಿಷೇಧ ಹೇರಲಾಗಿದೆ. ಪೊಲೀಸ್ ಇಲಾಖೆಯ ಕಟ್ಟುನಿಟ್ಟಿನ ಕ್ರಮಗಳಿಂದಾಗಿ ಸಿಗರೇಟು ಸೇವನೆ ಹತೋಟಿಗೆ ಬಂದಿದೆ. ಆದರೆ ಗುಟ್ಕಾ ಜಗಿಯುವವರಿಂದ ಆಗುತ್ತಿರುವ ತೊಂದರೆಗಳಿನ್ನೂ ಮುಂದುವರಿದಿವೆ. ಚಿಕ್ಕ ಹುಡುಗರು, ಹದಿಹರೆಯದವರು, ವೃದ್ಧರು ಹೀಗೆ ವಯಸ್ಸಿನ ಭೇದವಿಲ್ಲದೆ ಗುಟ್ಕಾ ಜಗಿಯುವವರ ಸಂಖ್ಯೆ ಹೆಚ್ಚಾಗಿದೆ. ಬಸ್ ನಿಲ್ದಾಣ, ಆಸ್ಪತ್ರೆ, ಶಾಲೆ-ಕಾಲೇಜು ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಜನರ ಓಡಾಟವನ್ನು ಗಮನಿಸದೆಯೇ ಎಲ್ಲೆಂದರಲ್ಲಿ ಇವರು ಹೀಗೆ ತಂಬಾಕು ಜಗಿದು ಉಗಿಯುವುದು ಸರ್ವೇಸಾಮಾನ್ಯವಾಗಿದೆ. ಇದರಿಂದಾಗಿ ಸಾರ್ವಜನಿಕ ಸ್ಥಳಗಳು ಗಲೀಜಾಗುವುದಲ್ಲದೆ, ಅನೇಕ ರೋಗಗಳು ಹುಟ್ಟಿಕೊಳ್ಳುವುದಕ್ಕೂ ಅದು ಕಾರಣವಾಗುತ್ತದೆ. ಆದ್ದರಿಂದ ಸಾರ್ವಜನಿಕ ಸ್ಥಳಗಳಲ್ಲಿ ಗುಟ್ಕಾ ಸೇವನೆಯನ್ನು ನಿಷೇಧಿಸುವ ನಿಟ್ಟಿನಲ್ಲಿ ಸಂಬಂಧಪಟ್ಟವರು ಇನ್ನಷ್ಟು ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಬೇಕು.

-**ಶ್ರೀಧರ್ ಡಿ. ರಾಮಚಂದ್ರಪ್ಪ**, ತುರುವನೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ನಾವೆಲ್ಲರೂ ಅಗ್ನಿವೀರರಾಗೋ ಕಾಲ ಸನ್ನಿಹಿತವಾಗಿದೆ

ಕಳಕಳಿ

ಡಾ. ಸಿ.ಜಿ. ರಾಘವೇಂದ್ರ ವೈಲಾಯ
vveditoped@gmail.com

ಭಾರತದಲ್ಲಿ ಹಿಂದೂಗಳಾಗಿ ಹುಟ್ಟಿ ಅದೇನು ತಪ್ಪೆಸಗಿದ್ದೇವೋ ಎನಿಸುವಷ್ಟರ ಮಟ್ಟಿಗೆ ಪ್ರಸ್ತುತ ನಾವು ಹಿಂದೂಫೋಬಿಯಾದಿಂದ ಬೇಸತ್ತಿದ್ದೇವೆ. ಸನಾತನಿಗಳು ಬಹುಸಂಖ್ಯಾತರಿರಲಿ, ಅಲ್ಪಸಂಖ್ಯಾತರಿರಲಿ ಎರಡೂ ಸಂದರ್ಭಗಳಲ್ಲೂ ಅವರೇ ಅನ್ಯಾಯಕ್ಕೊಳಗಾಗುವ, ಜನಸಂಖ್ಯಾ ಕುಸಿತವನ್ನು ಕಾಣುವ ದುರಂತವನ್ನು ಜಗತ್ತು ಎಲ್ಲೂ ಕಂಡಿರದು. ಬೌದ್ಧರ ಪ್ರಭಾವದಿಂದ ಅಶೋಕನ ಕಾಲಕ್ಕೆ ಕ್ಷಾತ್ರವನ್ನು ಕಡೆಗಣಿಸಿ, ಏಕಪಕ್ಷೀಯವಾಗಿ ಅಪಾತ್ರರಲ್ಲಿ ಅಹಿಂಸಾಚರಣೆ ಮಾಡಿದುದರ ವಿಷಫಲವೇ ಇಂದಿನ ಈ ಹಿಂದೂ ಉತ್ಪೀಡನ. ಹೀಗೆ ಮೊದಲ್ಗೊಂಡ ಅಹಿಂಸಾವಾದವು ಸಹನಶೀಲತೆ, ಸೌಹಾರ್ದ, ಸಹಬಾಳ್ವೆ ಮತ್ತು ಸೆಕ್ಯುಲರಿಸಂಗಳೆಂಬ ವಿಶೇಷಣಗಳಿಂದ ಕಾಲಕಾಲಕ್ಕೆ ಈ ದೇಶದ ರಾಜಕೀಯದಲ್ಲಿ ಮುನ್ನೆಲೆಗೆ ಬಂತು. ಅದನ್ನೇ ಗಾಂಧಿಯಂಥವರು ಅಲ್ಪಸಂಖ್ಯಾತರ ತುಷ್ಟೀಕರಣದ ರಾಜಕೀಯಕ್ಕೆ ಬಳಸಿಕೊಂಡು ಹಿಂದೂಗಳನ್ನು ದಾರಿತಪ್ಪಿಸಿದರು. ಸನಾತನ ಧರ್ಮವು ಸಾರ್ವಕಾಲಿಕವಾಗಿ ಅಹಿಂಸೆಯನ್ನು ಬೋಧಿಸಲೇ ಇಲ್ಲ; ಅದು ಧರ್ಮದ ಮೂಲಭೂತ ಸಿದ್ಧಾಂತಗಳ ಭಾಗವೂ ಅಲ್ಲ. ಸನಾತನ ದರ್ಶನಗಳು ಆತ್ಮರಕ್ಷಣೆಗಾಗಿ, ದುಷ್ಟಶಿಕ್ಷೆ ಮತ್ತು ಶಿಷ್ಟರಕ್ಷೆಗಾಗಿ ಶಸ್ತ್ರಧಾರಣೆಯ ಮಹತ್ವವನ್ನು ಸಾರುತ್ತಲೇ ಬಂದಿವೆ. ಹಾಗಿಲ್ಲವಾದಲ್ಲಿ ನಮ್ಮ ದೇವದೇವಿಯರೆಲ್ಲಾ ಶಸ್ತ್ರಪಾಣಿಗಳಾಗಿಯೇ ಏಕಿರುತ್ತಿದ್ದರು? 'ಶಸ್ತ್ರೇಣ ರಕ್ಷಿತೇ ರಾಷ್ಟ್ರೇ ಶಾಸ್ತ್ರಚರ್ಚಾ ಪ್ರವರ್ತತೇ' ಎಂದು ನಮ್ಮ ಶ್ರುತಿಗಳು ಸ್ಪಷ್ಟವಾಗಿ ಹೇಳಿವೆ.

ಹಿಂದೊಮ್ಮೆ ಈ ಭೂಮಿಯಲ್ಲಿ ಹಲವು ಮಾತೃಪೂಜಕ ಮತ್ತು ಮೂರ್ತಿಪೂಜಕ ನಾಗರಿಕತೆಗಳು ವಿಜೃಂಭಿಸಿದ್ದವು. ಆದರೆ, ಮಧ್ಯಪ್ರಾಚ್ಯದಲ್ಲಿ ಹುಟ್ಟಿಕೊಂಡ ಅನಾಗರಿಕ ಸೆಮೆಟಿಕ್ ಪಂಥಗಳು ಬರುಬರುತ್ತಾ ಜಗದಗಲಕ್ಕೆ ವಕ್ಕರಿಸಿಕೊಂಡವು. ಮಾತೃಶೋಷಣೆ ಮತ್ತು ಮೂರ್ತಿಭಂಜನೆಯನ್ನೇ ತಮ್ಮ ಚಟುವಟಿಕೆಯ ಅವಿಭಾಜ್ಯ ಅಂಗವಾಗಿಸಿಕೊಂಡ ಈ ಪಂಥಗಳು ಮೂಲದಲ್ಲೇ ಅಧರ್ಮವನ್ನು ಹೊಂದಿದ್ದು, ಭಯ, ಆಮಿಷ ಮತ್ತು ಆಧುನಿಕತೆಯ ಹೆಸರಿನಲ್ಲಿ ಮಾನವತೆಯ ಬುಡಕ್ಕೇ ಕೊಡಲಿಯೇಟು ನೀಡುತ್ತಿವೆ. ಈಗ ಜಿಹಾದಿ ಮೂಲಭೂತವಾದ ಮತ್ತು ನಕ್ಸಲ್ ವಾದಗಳೂ ಸೇರಿಕೊಂಡು, ನಿರಂತರ ಆಕ್ರಮಣ, ಶೋಷಣೆ ಮತ್ತು ಗುಲಾಮಗಿರಿಯಿಂದ ಶತಮಾನ ಗಳ ಕಾಲ ನಲುಗಿದ ಹಿಂದೂಗಳನ್ನು ಮತ್ತಷ್ಟು ಹಿಂಸಿಸುತ್ತಿವೆ. ಜಗತ್ತಿನಲ್ಲಿ ಇರುವುದೊಂದೇ ಧರ್ಮ, ಅದುವೇ ಸನಾತನ ಧರ್ಮ. ಉಳಿದವೆಲ್ಲಾ ಮತ-ಪಂಥಗಳಷ್ಟೇ. ಅವು ಹೆಚ್ಚೆಂದರೆ ಪ್ರವಾದಿಯೊಬ್ಬನ ಸೀಮಿತ ದೃಷ್ಟಿಕೋನಗಳು ಮಾತ್ರವೇ. ಆದರೆ ಅಪೌರುಷೇಯ ವೇದಗಳಾದರೋ ಅಸಂಖ್ಯಾತ ಋಷಿಮುನಿಗಳ ಸತ್ಯದರ್ಶನಗಳ ಮೊತ್ತ. ಇವು ಅನಾದಿ, ಅನಂತ, ಅವಿಚ್ಛಿನ್ನ ಪರಂಪರೆಯ ದಿಗ್ದರ್ಶಕಗಳು.

ಭಾರತದಲ್ಲಿ ಅಲ್ಪಸಂಖ್ಯಾತರು, ಭ್ರಷ್ಟರು, ಅಪರಾಧಿಗಳು, ಶ್ರೀಮಂತರು, ಖ್ಯಾತನಾಮರು ಮತ್ತು ಭಯೋತ್ಪಾದಕರಿಗೆ ಮಾತ್ರವೇ ಮಾನವ ಹಕ್ಕುಗಳು ಅನ್ವಯವಾಗುತ್ತವೆ. ಮಿಕ್ಕಂತೆ ಅವುಗಳ ರಕ್ಷಣೆಗೆಂದೇ ಇರುವ ಸರಕಾರಿ ಕೃಪಾಪೋಷಿತ ಆಯೋಗಗಳು ಗಾಢನಿದ್ರೆಯಲ್ಲಿರುತ್ತವೆ. ಕಾಶ್ಮೀರದ ಅಮಾಯಕ ಹಿಂದೂಗಳ ನರಮೇಧದ ನ್ಯಾಯನಿರ್ಣಯ ಮಾಡಲು ನಮ್ಮ ನ್ಯಾಯವ್ಯವಸ್ಥೆಗೆ ಸಮಯವೇ ಸಿಗುತ್ತಿಲ್ಲ. ಒಗ್ಗಟ್ಟಿನಲ್ಲಿ ಬಲವಿದೆ ಎಂಬ ನಾಣ್ಣುಡಿ ಹಿಂದೂಗಳಿಗೆ ಅನ್ವಯವಾಗುವುದಿಲ್ಲ. ನೂರಾರು ಜಾತಿ-ಉಪಜಾತಿಗಳಾಗಿ ಹರಿದು ಹಂಚಿಹೋಗಿರುವ ಹಿಂದೂಗಳನ್ನು ನಾವೀಗ ಬಹುಸಂಖ್ಯಾತರೆಂದು ಕರೆಯಬಹುದೇ? ಆಂಗ್ಲರ ಒಡೆದಾಳುವ ನೀತಿಯನ್ನು ನಮ್ಮ ಸ್ವಘೋಷಿತ ಜಾತ್ಯತೀತರು ಚೆನ್ನಾಗಿ ಬಳಸಿಕೊಂಡಿದ್ದಾರೆ. ಒಂದೊಂದು ಜಾತಿಯೂ ಒಂದೊಂದು ಪಕ್ಷಕ್ಕೆ ಕಾಯಂ ಮತಬ್ಯಾಂಕ್. ಹೀಗಿರುವಾಗ ಹಿಂದೂಗಳ ಸಾಮಯಿಕ ಹಿತಾಸಕ್ತಿಯನ್ನು ಕೇಳುವವರಾರು? ಜಾತಿ ಸಮಾವೇಶಗಳಿಗೆ ದೊಡ್ಡ ಸಂಖ್ಯೆಯಲ್ಲಿ ಸೇರುವ ಜನರು ಹಿಂದೂ ಸಮಾವೇಶವೆಂದರೆ ಹಿಂಜರಿಯುತ್ತಾರೆ. ನಾವು ಒಟ್ಟಾಗಿ ಹಿಂದುತ್ವದೊಂದಿಗೆ ಎಂದು ಗುರುತಿಸಿಕೊಳ್ಳುವೆವೋ ಅಂದೇ ನಮಗೆ ಸ್ವಾತಂತ್ರ್ಯ; ಇಲ್ಲವಾದಲ್ಲಿ ಸ್ವತಂತ್ರ ಭಾರತದಲ್ಲಿ ನಾವು ಶಾಶ್ವತವಾಗಿ ಅತಂತ್ರರಾಗಲಿದ್ದೇವೆ.

ಕೊರೋನೋತ್ತರ ಆರ್ಥಿಕ ಬಿಕ್ಕಟ್ಟಿನಿಂದ ಚೇತರಿಸಿಕೊಳ್ಳುವ ಮೊದಲೇ ಜಗತ್ತು ಹಮಾಸ್-ಇಸ್ರೇಲ್, ಉಕ್ರೇನ್-ರಷ್ಯಾ, ಹಾಂಕಾಂಗ್-ಚೀನಾ ನಡುವಿನ ಯುದ್ಧಗಳಿಂದಾಗಿ ಭಯಗ್ರಸ್ತ ವಾತಾವರಣದಲ್ಲೇ ಕಾಲ ಕಳೆಯುವಂತಾಗಿದೆ. ಜಾಗತಿಕ ಸರಬರಾಜು ಸರಪಳಿ ಮುರಿದುಬಿದ್ದಿದೆ, ಇಸ್ಲಾಮಿಕ್ ಭಯೋತ್ಪಾದನೆಯು ವಿಶ್ವಶಾಂತಿಗೆ ಸವಾಲಾಗಿ ಬೆಳೆಯುತ್ತಿದೆ. ಭಾರತದಲ್ಲಂತೂ ಲವ್ ಜಿಹಾದ್, ಡ್ರಗ್ಸ್ ಜಿಹಾದ್‌ನಂಥ ಪಿಡುಗುಗಳು ವ್ಯಾಪಕವಾಗಿಬಿಟ್ಟಿವೆ. ಯುರೋಪಿನ ವಿವಿಧೆಡೆ ಅಕ್ರಮ ವಲಸಿಗರ ಉಪಟಳವನ್ನು ನಿಯಂತ್ರಿಸಲಾಗುತ್ತಿಲ್ಲ. ಇಂಥ ವಿಷಮ ಪರಿಸ್ಥಿತಿಯಲ್ಲಿ ವಿಶ್ವ ಆರ್ಥಿಕತೆಯ ಏಕೈಕ ಆಶಾಕಿರಣ ಭಾರತವಷ್ಟೇ. ಅಮೆರಿಕ, ಯುರೋಪ್, ಚೀನಾಗಳಿಗೆ ಇದನ್ನು ಅರಗಿಸಿಕೊಳ್ಳಲಾಗುತ್ತಿಲ್ಲ. ಮೋದಿಯುಗದಲ್ಲಿ ಭಾರತ ಕೈಗೊಂಡಿರುವ ಸ್ವತಂತ್ರ ರಾಜನೈತಿಕ ನಿರ್ಧಾರಗಳು, ರಷ್ಯಾ ಜತೆಗೆ ಮುಂದುವರಿದ ಪಾಲುದಾರಿಕೆ, ಗಟ್ಟಿಗೊಳ್ಳುತ್ತಿರುವ ಭಾರತದ ರಾಷ್ಟ್ರೀಯತೆ ಮತ್ತು ಜಾಗತಿಕ ನಾಯಕತ್ವ ಇವು 'ದೊಡ್ಡಣ್ಣ'ನ ಕಣ್ಣುಗಳನ್ನು ಕೆಂಪಾಗಿಸಿವೆ. ಭಾರತ ತನ್ನ ಸಾಮಯಿಕ ಪಾಲುದಾರನೆಂದು ಅಮೆರಿಕ ತುತ್ತೂರಿ ಊದಿದರೂ, ಭಾರತದ ಉತ್ಕರ್ಷವನ್ನು ತಡೆದು ಏಷ್ಯಾದಲ್ಲಿ ಇನ್ನೊಂದು ಬೃಹತ್ ಶಕ್ತಿ ತಲೆಯೆತ್ತದಂತೆ ಮಾಡಲು ಸಾಧ್ಯವಾದುದನ್ನೆಲ್ಲಾ ಅದು ಒಳಗೊಳಗೇ ಮಾಡುತ್ತಿದೆ. ಭಾರತ ಸ್ವಾವಲಂಬಿಯಾಗುವುದು ಅಮೆರಿಕಕ್ಕೆ ಬೇಕಿಲ್ಲ; ತನ್ನೆಲ್ಲಾ ಹುಕುಂಗಳಿಗೂ ಭಾರತ 'ಜೀಹುಜೂರ್' ಎನ್ನಬೇಕೆಂದು ಅದು ಬಯಸುತ್ತಿದೆ. ಹೀಗಾಗಿ ಅದು ಭಾರತ-ವಿರೋಧಿ ಶಕ್ತಿಗಳೊಂದಿಗೆ ಜಾಗತಿಕ ಮಟ್ಟದಲ್ಲಿ ಶಾಮೀಲಾಗಿದೆ.

ಭಾರತದ ಪ್ರಜಾಪ್ರಭುತ್ವವನ್ನು, ಪ್ರಭುತ್ವ-ವಿರೋಧಿ ಆಂದೋಲನಗಳ ಹೆಸರಿನಲ್ಲಿ ಸದ್ದಿಲ್ಲದೆ ಕೊನೆಗಾಣಿಸಲು ವಿಶ್ವಶಕ್ತಿಗಳು ಕಟಿಬದ್ಧವಾಗಿವೆ. ಈ ಹಿಂದೆ ಭಾರತದ ಮಿತ್ರರಾಷ್ಟ್ರವಾಗಿದ್ದ ಅಫ್ಘಾನಿಸ್ತಾನದಲ್ಲಿ ಅಶ್ರಫ್ ಘನಿ ನೇತೃತ್ವದ ಸರಕಾರ ಕುಸಿದು ಭಾರತ-ವಿರೋಧಿ ತಾಲಿಬಾನ್ ಮಿಲಿಟರಿ ಆಡಳಿತ ಬರಲು ಅಮೆರಿಕವೇ ನೇರ ಕಾರಣ. ಅಮೆರಿಕ ಎಂದೂ ಯಾರಿಗೂ ದೀರ್ಘಕಾಲ ಮಿತ್ರನಾಗಿರುವುದು ಅಸಾಧ್ಯ. ಅದರ ರಾಜಕೀಯ ನಿರ್ಧಾರಗಳು ಕೇವಲ ತತ್ಕಾಲದ ಸ್ವಾರ್ಥವನ್ನಷ್ಟೇ ಅವಲಂಬಿಸಿವೆ. ತನ್ನ ಹಿತಾಸಕ್ತಿಗಾಗಿ ಏನು ಬೇಕಾದರೂ ಮಾಡುವ ಅಮೆರಿಕ, ತನ್ನ ರಾಜಕೀಯ, ಆರ್ಥಿಕ ಮತ್ತು ಮಿಲಿಟರಿ ಸಾಮರ್ಥ್ಯದ ಬಲದಿಂದ ಎಲ್ಲವನ್ನೂ ಅರಗಿಸಿಕೊಳ್ಳಬಲ್ಲದು. ವಿಶ್ವಸಂಸ್ಥೆ ಏನಿದ್ದರೂ ಅಮೆರಿಕದ ಕೈಗೊಂಬೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತವಿಂದು ಇಲ್ಲದಿರಲು ನೆಹರುರವರ ಕಮ್ಯುನಿಸ್ಟ್ ಮತ್ತು ಅಲಿಪ್ತ ನೀತಿಗಳೇ ಕಾರಣ. ಅಮೆರಿಕನ್ ರೀತಿ-ರಿವಾಜುಗಳನ್ನು ಚೀನಾ ಕೂಡ ಈಗ ಅನುಕರಿಸುತ್ತಿದೆ. ಅದು ಆರ್ಥಿಕ ಶೋಷಣೆಯಾಗಿರಬಹುದು, ಮಿಲಿಟರಿ ಹಸ್ತಕ್ಷೇಪದ ರೂಪದಲ್ಲಿರಬಹುದು. ಜಗತ್ತಿನ ಅತಿದೊಡ್ಡ ಶಸ್ತ್ರಾಸ್ತ್ರ ತಯಾರಕ ಎನಿಸಿಕೊಂಡಿರುವ ಅಮೆರಿಕ, ಜಗತ್ತನ್ನು ಸದಾ ಯುದ್ಧದ ಸ್ಥಿತಿಯಲ್ಲೇ ನೋಡಬಯಸುತ್ತದೆ. ತನ್ನ ಶಸ್ತ್ರಾಸ್ತ್ರ ದಾಸ್ತಾನು ಮಾರಾಟವಾಗಬೇಕೆಂದರೆ, ಎಲ್ಲೆಂದರಲ್ಲಿ ಸದಾ ಸಂಘರ್ಷಗಳು ನಡೆಯುತ್ತಿರಬೇಕು. ಇತ್ತಂಡಗಳೂ ಒಂದಲ್ಲಾ ಒಂದು ಒಪ್ಪಂದದ ಹೆಸರಲ್ಲಿ ತನ್ನಿಂದ ಶಸ್ತ್ರಾಸ್ತ್ರಗಳನ್ನು ಖರೀದಿಸುವ ಮೂಲಕ ತನ್ನ ಆರ್ಥಿಕತೆಗೆ ಬಲ ತುಂಬುವಂತಾಗಬೇಕು. ಹೀಗೆ ಕಾದಾಡಿ ಬಡವಾದ ದೇಶಗಳಿಗೆ ಆರ್ಥಿಕ ನೆರವಿನ ನೆಪದಲ್ಲಿ ದುಬಾರಿ ಬಡ್ಡಿಯ ಸಾಲ ನೀಡಿ ತಾನು ಮತ್ತಷ್ಟು ಶ್ರೀಮಂತನಾಗಬೇಕು- ಇವು ಅಮೆರಿಕದ ಹುನ್ನಾರಗಳಲ್ಲಿ ಕೆಲವಷ್ಟೇ. ಇದಕ್ಕೆ ಪರೋಕ್ಷವಾಗಿ ಸಹಕರಿಸುವ ದೇಶಗಳು ಅದಕ್ಕೆ ಮಿತ್ರರು, ಅಡ್ಡಿಯಾದವರೆಲ್ಲ ಶತ್ರುಗಳೇ. ತನ್ನ ಮಾತಿಗೆ ತಾಳಹಾಕದ ಯಾವುದೇ ಪ್ರಭುತ್ವವನ್ನೂ ಬೀಳಿಸಿ ತನ್ನ ಪರವಾಗಿರುವ ಛಾಯಾ ಸರಕಾರಗಳನ್ನು ಅಲ್ಲಿ ನೇಮಿಸುತ್ತಿರುವ ಅಮೆರಿಕ, ತನ್ನ ಪ್ರಜಾಪ್ರಭುತ್ವ-ವಿರೋಧಿ ನಡೆ ಮತ್ತು ಇಬ್ಬಗೆ ನೀತಿಯನ್ನು ಪದೇಪದೆ ಸಾಬೀತು ಪಡಿಸುತ್ತಿದೆ. ಶ್ರೀಲಂಕಾದಲ್ಲಿ ಭಾರತ-ಸ್ನೇಹಿ ಸರಕಾರವು ಪತನವಾಗಿ, ಈಗ ಚೀನಾದ ಕೈಗೊಂಬೆ ಸರಕಾರ ಅಸ್ತಿತ್ವಕ್ಕೆ ಬಂದಿದೆ. ಪಾಕಿಸ್ತಾನದಲ್ಲಿ ಇಸ್ಲಾಮಿಸ್ಟ್ ಜಿಹಾದಿಗಳ ಅಟ್ಟಹಾಸ ಎಲ್ಲೆಮೀರಿದ್ದು, ಅಳಿದುಳಿದ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ದೌರ್ಜನ್ಯ, ಕೊಲೆ, ಅತ್ಯಾಚಾರ, ಬಲವಂತದ ಮತಾಂತರ ಮತ್ತು ದೇಗುಲ ಧ್ವಂಸ ಪ್ರಕರಣಗಳು ನಿರಂತರ ನಡೆಯುತ್ತಿವೆ. ಭಾರತ-ಸ್ನೇಹಿಯಾಗಿದ್ದ ಬಾಂಗ್ಲಾ ಸರಕಾರವನ್ನು ಮೀಸಲಾತಿ ವಿರೋಧಿ ಹೋರಾಟದ ಹೆಸರಲ್ಲಿ ಬೀಳಿಸಿದ ನಂತರ, ಪಾಕ್ ಪ್ರೇರಿತ ಇಸ್ಲಾಮಿಸ್ಟ್ ಶಕ್ತಿಗಳು ಅಲ್ಲಿನ ಅಮಾಯಕ ಹಿಂದೂಗಳ ಮೇಲೆಸಗುತ್ತಿರುವ ದೌರ್ಜನ್ಯಗಳಿಗೆ ಕಡಿವಾಣವೇ ಇಲ್ಲದಂತಾಗಿದೆ. ಇದರ ಹಿಂದೆಯೂ ವಿದೇಶಿ ಕೈವಾಡವಿರುವುದು ಗುಟ್ಟಾಗೇನೂ ಉಳಿದಿಲ್ಲ. ಜಗತ್ತಿನ ಏಕೈಕ ಹಿಂದೂದೇಶವಾಗಿದ್ದ ನೇಪಾಳವನ್ನು 'ಜಾತ್ಯತೀತ' ದೇಶವಾಗಿ ಬದಲಿಸಿ, ಭಾರತದ ಪರವಾಗಿದ್ದ ಅಲ್ಲಿನ ಚುನಾಯಿತ ಸರಕಾರವನ್ನು ಮಾವೋ ವಾದಿಗಳ ಮೂಲಕ ಬೀಳಿಸಿದ ಚೀನಾ ಅಲ್ಲೀಗ ತನ್ನ ಕೈಗೊಂಬೆ ಯನ್ನು ಅಧಿಕಾರಕ್ಕೆ ತಂದಿದೆ. ಭಾರತ-ಚೀನಾ ನಡುವಿನ 'ಬಫರ್ ಝೋನ್' ಆಗಿದ್ದ ಟಿಬೆಟ್ ಅನ್ನು ಸದ್ದಿಲ್ಲದೆ ನುಂಗಿದ ಚೀನಾ ಈಗ ಅರುಣಾಚಲ ಪ್ರದೇಶದ ಮೇಲೆ ತನ್ನ ಹಕ್ಕನ್ನು ಮಂಡಿಸುತ್ತಿದೆ. ಹೀಗೆ ಭಾರತದ ನೆರೆಹೊರೆ ದೇಶಗಳಲ್ಲಿನ ಅಶಾಂತಿ-ಅರಾಜಕತೆಗಳ ಹಿಂದೆ ಅಮೆರಿಕ ನಿರ್ದೇಶಿತ ಪಾಶ್ಚಾತ್ಯ ಶಕ್ತಿಗಳ ಮತ್ತು ಚೀನಾದ ಹಸ್ತಕ್ಷೇಪವಿರುವುದು ಸುಸ್ಪಷ್ಟ. ಭಾರತವೇ ಇವೆಲ್ಲದರ ಅಂತಿಮಗುರಿ. ನಮ್ಮ ದೇಶಕ್ಕೆ ಸದ್ಯೋಭವಿಷ್ಯದಲ್ಲಿ ಅಪಾಯವು ಕಟ್ಟಿಟ್ಟಬುತ್ತಿ. ಅಪಾಯದ ಅರಿವಿದ್ದಾಗ ಮಾತ್ರವೇ ನಾವು ಪರಿಹಾರಕ್ಕಾಗಿ ಶ್ರಮಿಸಬಲ್ಲೆವು.

ಬಾಂಗ್ಲಾದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಭಾರತದಲ್ಲೂ ಅಲ್ಪಸಂಖ್ಯಾತರ ಕುರಿತು 'ಸುಳ್ಳುಸುದ್ದಿ'ಗಳನ್ನು ನಿರಂತರವಾಗಿ ತೇಲಿಬಿಡುವ ಮುಖಾಂತರ ವ್ಯಾಪಕವಾದ ಆಡಳಿತ-ವಿರೋಧಿ ಅಲೆಯನ್ನೆಬ್ಬಿಸಿ, ಅದೇ ಮಾದರಿಯಲ್ಲಿ ಅರಾಜಕತೆಯನ್ನು ಬಿತ್ತುವ ಯತ್ನಗಳು ಹಿಂದೆಂದಿಗಿಂತಲೂ ಸುಯೋಜಿತವಾಗಿ ನಡೆಯುತ್ತಿವೆ. ಮಣಿಪುರದ ಕ್ಷೋಭೆಯು ಇದರ ಟ್ರೇಲರ್ ಅಷ್ಟೇ. ಹಿಂದೂಗಳು ಈ ದೇಶದಲ್ಲಿ ಅಲ್ಪಸಂಖ್ಯಾತರಾಗುತ್ತಿದ್ದಂತೆ ಸಂವಿಧಾನ ಮತ್ತು ಪ್ರಜಾತಂತ್ರಗಳು ಕಣ್ಮರೆಯಾಗಿ, ಭಾರತವು ಮತ್ತೊಮ್ಮೆ ವಿಭಜಿಸಲ್ಪಡುವ ಅಪಾಯವಿದೆ. ಆದರೆ ನಮ್ಮ 'ಸ್ಯೂಡೋ-ಸೆಕ್ಯುಲರ್' 'ನಿಯೋ-ಗಾಂಧಿಯನ್' ನಾಯಕರಿಗೆ ಇದರ ಅರಿವಾಗುವುದೆಂದು?

ಇಂದು ಹಿಂದೂಗಳು ಒಗ್ಗಟ್ಟಾಗಿ ಹಿಂದೂ ರಾಷ್ಟ್ರಕ್ಕೆ ಒಕ್ಕೊರಲಿನಿಂದ ಆಗ್ರಹಿಸದಿದ್ದರೆ ಮುಂದೊಂದು ದಿನ ನಾವು ಪರಿತಪಿಸಬೇಕಾದೀತು. ನಮ್ಮೆಲ್ಲಾ ಆಂತರಿಕ ಭೇದಭಾವಗಳನ್ನು ಬದಿಗೊತ್ತಿ ಸರಕಾರದ ಬೆನ್ನಿಗೆ ನಿಲ್ಲದೆಹೋದರೆ ನಾಳೆ ನಮ್ಮನ್ನು ರಕ್ಷಿಸುವವರಾರು? ಅಧಿಕಾರಿಗಳೋ, ಪೊಲೀಸರೋ, ನ್ಯಾಯಾಧೀಶರೋ, ಸೈನಿಕರೋ, ಇನ್ಯಾರೋ ನಮ್ಮನ್ನು ಕಾಪಾಡುತ್ತಾರೆ ಎಂಬ ಭ್ರಮೆಯನ್ನು ಬಿಟ್ಟುಬಿಡಬೇಕಾಗಿದೆ. ಏಕೆಂದರೆ ನಮ್ಮೀ ಪವಿತ್ರ ಮಾತೃಭೂಮಿಯ ಮತ್ತು ಧರ್ಮದ ರಕ್ಷಣೆಗಾಗಿ ನಾವೆಲ್ಲರೂ ಬೀದಿಗಿಳಿಯಬೇಕಾದ ಪರಿಸ್ಥಿತಿ ಸದ್ಯದಲ್ಲೇ ಎದುರಾಗಬಹುದು. ಅದಕ್ಕಾಗಿ ನಾವೆಲ್ಲರೂ ಸಂಘಟಿತರಾಗಿ ಕಾರ್ಯೋನ್ಮುಖರಾಗಬೇಕು. ನಮ್ಮ ಪೂರ್ವಜರಿಗೆ ಇವೆಲ್ಲದರ ಸ್ಪಷ್ಟ ಪರಿಕಲ್ಪನೆಯಿತ್ತು. ಅಂದು ಮಂಗಲ್ ಪಾಂಡೆಯ ಕೈಯಲ್ಲೇನಾದರೂ ಬಂದೂಕು ಇರದಿದ್ದಿದ್ದರೆ, ರಾಯಲ್ ನೇವಿಯ ಯೋಧರು ಸಶಸ್ತ್ರಕ್ರಾಂತಿ ಮಾಡಿರದೇ ಇದ್ದರೆ, ನಾವಿನ್ನೂ ಆಂಗ್ಲರ ಗುಲಾಮರಾಗೇ ಇರುತ್ತಿದ್ದೆವು. ನಮ್ಮ ರಕ್ಷಣೆ ಇನ್ನುಮುಂದೆ ನಮ್ಮ ಹೊಣೆ. ಆತ್ಮರಕ್ಷಣೆಯಲ್ಲಿ ನಾವು ಆತ್ಮನಿರ್ಭರರಾಗಲು ಇದುವೇ ಸಕಾಲ. ನಾವು ನೀವೆಲ್ಲರೂ ಈಗ ಅಗ್ನಿವೀರರಾಗಬೇಕಿದೆ.

(ಲೇಖಕರು ನವಜಾತ ಶಿಶು ಮತ್ತು ಮಕ್ಕಳ ತಜ್ಞರು)

ಭಟ್ಟರ್ ಸ್ಕಾಚ್

● **ಹೇಮಂತ ನಾಯಕ, ಬೆಂಗಳೂರು**
ಭಟ್ರೇ, ಸಾಣೇಹಳ್ಳಿ ಶ್ರೀಗಳ ಭಕ್ತರು ಅವರ ಮಾತುಗಳನ್ನು ಪಾಲಿಸುತ್ತಾರಾ?
– ಪಾಲಿಸಿದ್ದಿದ್ದರೆ ಅವರಾರೂ ಈ ಸಲ ಗಣೇಶನ ಹಬ್ಬವನ್ನು ಆಚರಿಸುತ್ತಿರಲಿಲ್ಲ!

● **ಸಂದೀಪ ಎಂ., ವಿಜಯನಗರ**
ಭಟ್ರೇ, ಅಜಿತ್ ಹನಮಕ್ಕನವರ್ ದರ್ಶನ್‌ನನ್ನು ಜಾಸ್ತಿ ಕೆಣಕಿದರಾ?
– ರೇಣುಕಾಸ್ವಾಮಿ ಪವಿತ್ರಾ ಗೌಡಳನ್ನು ಕೆಣಕಿದಷ್ಟಲ್ಲ!

● **ರಘು ಸಿ., ಹಾಸನ**
ಭಟ್ರೇ, ಮೊಯಿಲಿ ಮಹಾಕಾವ್ಯವನ್ನು ಪಠ್ಯವಾಗಿ ಮಾಡಿದರೆ ಹೇಗೆ?
– ವಿದ್ಯಾರ್ಥಿಗಳನ್ನು ಗೋಳು ಹುಯ್ದುಕೊಳ್ಳಲು ಒಂದು ಮಿತಿ ಇರಬೇಕಪ್ಪಾ!

● **ಭಾವನಾ ಹೆಗಡೆ, ಸಿದ್ದಾಪುರ**
ಭಟ್ರೇ, ಹೆಂಗಸರೂ ಓದಬಹುದಾದ ನೀವು ಬರೆದ ಪುಸ್ತಕ ಯಾವುದು?
– 'ಕುಡಿಯೋಣು ಬಾರಾ'!

● **ಚೈತ್ರಾ, ತುಮಕೂರು**
ಭಟ್ರೇ, ಪಾಸ್‌ಪೋರ್ಟ್ ಸಿದ್ಧವಿದೆ, ಯಾವಾಗ ನಿಮ್ಮ ಜತೆ ವಿದೇಶಕ್ಕೆ ಬರಲಿ?
– ಬರೀ ಪಾಸ್‌ಪೋರ್ಟ್ ಒಂದೇ ಇದ್ದರೆ ಏನು ಬಂತು.. ವಿದೇಶ ಪ್ರಯಾಣಕ್ಕೆ ಬೇಕಿರುವುದು ವೀಸಾ!

● **ನವೀನ ಶೆಟ್ಟಿಹಳ್ಳಿ, ಶಿವಮೊಗ್ಗ**
ಭಟ್ರೇ, ಕುಮಾರಸ್ವಾಮಿಗೆ ಉಕ್ಕು ಖಾತೆ ಕೊಟ್ಟರೂ ಅವರ ಖಾತೆ ಟೇಕಾಫ್ ಆಗಿಲ್ಲವಂತೆ?
– ಆ ಖಾತೆ ಟೇಕಾಫ್ ಆಗದಿದ್ದರೆ ತುಕ್ಕು ಹಿಡಿಯೋದು ಗ್ಯಾರಂಟಿ!

● **ಗುರುಪ್ರಸಾದ ಮಾಯನಕಟ್ಟೆ, ಬೆಂಗಳೂರು**
ಭಟ್ರೇ, ದೇಶದ ಜನ ಎಚ್‌ಎಂಟಿ ವಾಚನ್ನು ಕಟ್ಟಲಿ ಎಂದು ಕುಮಾರಸ್ವಾಮಿ ಕರೆ ಕೊಟ್ಟಿದ್ದಾರಲ್ಲ?
– ಅವರ ಬಳಿ ಇರುವ ಬೆಲೆಬಾಳುವ ವಾಚನ್ನು ಏನು ಮಾಡ್ತಾರಂತೆ?!

● **ಕೇಶವ ನಾಡಿಗ, ಹುಬ್ಬಳ್ಳಿ**
ಭಟ್ರೇ, ದರ್ಶನ್ ಅಭಿಮಾನಿಗಳಿಗೆ ಸಂಸ್ಕಾರವೇ ಇಲ್ಲ ಅಂತಾರಲ್ಲ?
– ಇಲ್ಲಿ ಅಭಿಮಾನಿಗಳಿಗೆ ಎಂಬ ಪದ ಅಗತ್ಯವಿರಲಿಲ್ಲ!

● **ರಾಜಿ, ಕೆಂಗೇರಿ**
ಭಟ್ರೇ, ಕನ್ನಡ ಸಿನಿಮಾ ನಟರು ಸಿಟ್ಟಿನ ದೃಶ್ಯಗಳಲ್ಲಿ ಸಹಜವಾಗಿ ನಟಿಸುವುದಿಲ್ಲ ಏಕೆ?
– ಯಾಕಂದ್ರೆ, ಕೋಪ ಬಂದಾಗ ಇಂಗ್ಲಿಷಿನಲ್ಲಿ ಮಾತಾಡ್ತಾರಲ್ಲ!

● **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ಹೆಂಡತಿಯ ತಪ್ಪನ್ನು ಎತ್ತಿ ಹಿಡಿಯುವ ಗಂಡಂದಿರು ಈಗಲೂ ಇದ್ದಾರಾ?
– ಇದ್ದಾರೆ.. ಆದರೆ ಅದಕ್ಕೂ ಹೆಂಡತಿಯ ಪರ್ಮಿಷನ್ ಪಡೆಯಬೇಡವೇ?!

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಒಳ್ಳೆಯ ಪುಸ್ತಕಗಳು, ಒಳ್ಳೆಯ ವ್ಯಕ್ತಿಗಳು ಸುಲಭಕ್ಕೆ ಅರ್ಥವಾಗುವುದಿಲ್ಲ, ಏಕೆ?
– ಬರಗೂರು ಮತ್ತು ಅವರ ಕೃತಿ ಇದಕ್ಕೆ ಅಪವಾದ!

ಮರಣವೂ ಇಲ್ಲ, ದಂಡನೆಯೂ ಇಲ್ಲ!

ಕೆಲವು ದಾದಿಯರಿಗೆ ಅರುಣಾ ಸಹೋದರಿಯಾಗಿದ್ದಳು. ಕೆಲವರಿಗೆ ತಾಯಿಯಂತಾಗಿದ್ದರೆ ಇನ್ನು ಕೆಲವರಿಗೆ ಮಗಳಂತಾಗಿದ್ದಳು. ಹೊರಗಿನ ಪ್ರಪಂಚದಲ್ಲಿ ಅಷ್ಟೆಲ್ಲ ನಡೆಯುತ್ತಿದ್ದರೂ ಅರುಣಾ ಮಾತ್ರ ಅದ್ಯಾವುದನ್ನೂ ಗ್ರಹಿಸಲಾಗದೆ ತನ್ನ ನೋವಿನ ಪ್ರಪಂಚದಲ್ಲಿಯೇ ಮುಳುಗಿ ಬಳಲುತ್ತಿದ್ದಳು.

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಕೆಇಎಂ ಆಸ್ಪತ್ರೆಯಲ್ಲಿ ದಾದಿಯಾಗಿದ್ದ ಅರುಣಾಳ ಮೇಲೆ ನಡೆಸಿದ ಮಾರಣಾಂತಿಕ ಹಲ್ಲೆ ಮತ್ತು ಕಳ್ಳತನದ ಆರೋಪದ ಮೇಲೆ ಸೋಹನ್‌ಲಾಲ್‌ನನ್ನು ಪೊಲೀಸರು ಬಂಧಿಸಿ ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲಿಸಿದ್ದರು. ಶೀಘ್ರಗತಿಯಲ್ಲಿ ವಿಚಾರಣೆ ನಡೆದು ತೀರ್ಪೂ ಹೊರ ಬಂತು. ನ್ಯಾಯಾಲಯ ಸೋಹನ್‌ಲಾಲ್‌ಗೆ ಕೇವಲ 7 ವರ್ಷಗಳ ಶಿಕ್ಷೆ ವಿಧಿಸಿತು. ಮಾರಣಾಂತಿಕ ಹಲ್ಲೆ ನಡೆಸಿದ್ದಕ್ಕಾಗಿ 7 ವರ್ಷ, ಕಳ್ಳತನದ ಆರೋಪಕ್ಕೆ 7 ವರ್ಷ ಎಂದು ಶಿಕ್ಷೆ ವಿಧಿಸಿತು.

ಲೆಕ್ಕದಂತೆ 14 ವರ್ಷವಾಗಬೇಕಿತ್ತು ತಾನೆ? ಆದರೆ ಹಾಗಾಗಲಿಲ್ಲ. ಎರಡೂ ಶಿಕ್ಷೆಯನ್ನು ಒಟ್ಟಿಗೇ ಅನುಭವಿಸಿದ ಸೋಹನ್‌ಲಾಲ್ 1980ರಲ್ಲಿ ಜೈಲಿನಿಂದ ಹೊರಗೆ ಬಂದಿದ್ದ. ಬಿಡುಗಡೆಯಾದ ನಂತರ ಯಾರ ಕೈಗೂ ಸಿಗಲಿಲ್ಲ, ಯಾರಿಗೂ ಮುಖ ತೋರಿಸಲಿಲ್ಲ, ಯಾರ ಕಣ್ಣಿಗೂ ಬೀಳಲಿಲ್ಲ. ಅವನಿಂದ ಅತ್ಯಾಚಾರ ಮತ್ತು ಹಲ್ಲೆಗೆ ಒಳಗಾಗಿದ್ದ ಅರುಣಾ ಮಾತ್ರ ಅದೇ ಆಸ್ಪತ್ರೆಯ ಅದೇ ಹಾಸಿಗೆಯ ಮೇಲೆ ಎಂದಿನಂತೆಯೇ ತರಕಾರಿ ತುಂಡಿನಂತೆ ಬಿದ್ದುಕೊಂಡಿದ್ದಳು.

ಆಸ್ಪತ್ರೆಯ ದಾದಿಯರು ಮಾತ್ರ ಶ್ರದ್ಧೆಯಿಂದ ಅರುಣಾಳಿಗೆ ಸ್ನಾನ ಮಾಡಿಸುತ್ತಿದ್ದರು. ಪ್ರತಿ ತುತ್ತನ್ನೂ ಬಲವಂತವಾಗಿ ತಿನ್ನಿಸುತ್ತಿದ್ದರು. ಸುಮಾರು 10 ವರ್ಷಗಳ ಕಾಲ ಅರುಣಾಳ ಮನೆಯವರು ನೋಡಲು ಬರುತ್ತಿದ್ದರು. ಅರುಣಾಳ ಸಹೋದರಿ ಆಗಾಗ ಬಂದು ಆಕೆಯ ಬಳಿ ಕುಳಿತುಕೊಳ್ಳುತ್ತಿದ್ದಳು. ಒಂದು ಕಾಲದಲ್ಲಿ ಒಟ್ಟಿಗೆ ಆಟವಾಡುತ್ತಿದ್ದ, ಓಡಾಡುತ್ತಿದ್ದ, ಊಟ ಮಾಡುತ್ತಿದ್ದ, ಅರುಣಾಳ ಸಹೋದರಿಯ ಮಗಳೊಬ್ಬಳು ಆಸ್ಪತ್ರೆಗೆ ಬಂದು ಅರುಣಾಳ ಹಾಸಿಗೆಯನ್ನು ಸ್ವಚ್ಛ ಮಾಡುವುದು ಅವಳಿಗೆ ಊಟ ತಿನಿಸುವುದು ಇತ್ಯಾದಿಗಳನ್ನು ಮಾಡುತ್ತಿದ್ದಳು. ಇನ್ನೊಬ್ಬ ಸಹೋದರಿಯ ಮಗನೂ ಅರುಣಾಳನ್ನು ನೋಡಲು ಆಗಾಗ ಬರುತ್ತಿದ್ದ. ಒಂದು ದಶಕದ ನಂತರ ಕ್ರಮೇಣ ಅವರ ಬರುವಿಕೆಯೂ ನಿಂತುಹೋಗಿತ್ತು. ಅವರೆಲ್ಲ ಉದ್ಯೋಗ ನಿಮಿತ್ತ ಮುಂಬೈ ಬಿಟ್ಟು ಬೇರೆ ಬೇರೆ ಪ್ರದೇಶಕ್ಕೆ ಹೋಗಿದ್ದರು. ಅಲ್ಲಿಗೆ ಅರುಣಾಳ ಸಂಪೂರ್ಣ ದೇಖರೇಕಿ ಆಸ್ಪತ್ರೆಯಲ್ಲಿರುವ ದಾದಿಯರ ಮೇಲೆ ಬಿತ್ತು. ಅವರು ನಿಶ್ಚಿಂತೆಯಿಂದ ಆ ಕೆಲಸವನ್ನು ಮಾಡುತ್ತಿದ್ದರು. ಅರುಣಾಳನ್ನು ನೋಡಿಕೊಳ್ಳುವುದರಲ್ಲಿ, ಅವಳ ಸೇವೆ ಮಾಡುವುದರಲ್ಲಿ ಆಸ್ಪತ್ರೆಯ ದಾದಿಯರಿಗೆ ಕಿಂಚಿತ್ತೂ ಬೇಸರವಿರಲಿಲ್ಲ. ಬದಲಾಗಿ ಕೆಲವು ದಾದಿಯರು ಅವಳನ್ನು ಪ್ರತಿನಿತ್ಯ ಮಾತನಾಡಿಸುತ್ತಿದ್ದರು– ಅರುಣಾಳಿಗೆ ಮಾತನಾಡಲು ಸಾಧ್ಯವಿಲ್ಲ ಎಂದು ಗೊತ್ತಿದ್ದರೂ. ಕೆಲವು ದಾದಿಯರಿಗೆ ಅರುಣಾ ಸಹೋದರಿಯಾಗಿದ್ದಳು. ಕೆಲವರಿಗೆ ತಾಯಿಯಂತಾಗಿದ್ದರೆ ಇನ್ನು ಕೆಲವರಿಗೆ ಮಗಳಂತಾಗಿದ್ದಳು. ಹೊರಗಿನ ಪ್ರಪಂಚದಲ್ಲಿ ಇಷ್ಟೆಲ್ಲ ನಡೆಯುತ್ತಿದ್ದರೂ ಅರುಣಾ ಮಾತ್ರ ಇದ್ಯಾವುದನ್ನೂ ಗ್ರಹಿಸಲು ಸಾಧ್ಯವಾಗದೆ ತನ್ನ ನೋವಿನ ಪ್ರಪಂಚದಲ್ಲಿಯೇ ಮುಳುಗಿ ಬಳಲುತ್ತಿದ್ದಳು.

ಅರುಣಾಳಿಗೆ 60 ವರ್ಷ ಆಗುತ್ತಿದ್ದಂತೆ ವಯಸ್ಸೂ ತನ್ನ ಪ್ರಭಾವವನ್ನು ತೋರಿಸುತ್ತಿತ್ತು. ಮೊದಲ 25 ವರ್ಷ ಲವಲವಿಕೆಯಿಂದ ಬದುಕಿದ ಅರುಣಾ, ಅದಕ್ಕಿಂತಲೂ ಹೆಚ್ಚು ವರ್ಷ ಜೀವನೋತ್ಸಾಹದ ಲವಲೇಶವೂ ಇಲ್ಲದೆ ಒಂದೇ ಕಡೆ ಬಿದ್ದುಕೊಂಡಿದ್ದಳು. ಸುಮಾರು 35 ವರ್ಷಗಳವರೆಗೆ ಸೂರ್ಯನ ಕಿರಣದ ಒಂದು ಎಳೆಯೂ ಅವಳನ್ನು ಸೋಂಕಲಿಲ್ಲ. ಸೋಂಕುಗಳು ಮಾತ್ರ ಭರಪೂರ ತಟ್ಟಿದ್ದವು. ಆಕೆಯ ವಸಡುಗಳಿಗೆ ಸೋಂಕು ತಾಗಿದ್ದರಿಂದ ಹಲ್ಲು ಉಜ್ಜಿಸಲು ಸಾಧ್ಯವಾಗುತ್ತಿರಲಿಲ್ಲ. ಅಷ್ಟೇ ಅಲ್ಲ, ಹಲ್ಲುಗಳು ಹುಳುಕಾಗಿ ಹಾಸಿಗೆಯಲ್ಲಿ ಬೀಳುತ್ತಿದ್ದವು. ಘಟನೆ ನಡೆದಾಗಿನಿಂದ ಕಣ್ಣಂತೂ ಕಾಣುತ್ತಿರಲಿಲ್ಲ, ಈಗ ಗಂಟೆಗಟ್ಟಲೆ ಕಣ್ಣು ರೆಪ್ಪೆಗಳೂ ಮುಚ್ಚಿಕೊಳ್ಳುತ್ತಿರಲಿಲ್ಲ. ತಲೆಯಲ್ಲಿ ಹೊಟ್ಟು ಕಟ್ಟಿಕೊಳ್ಳುತ್ತಿತ್ತು. ಕೈ, ಕಾಲು, ಬೆರಳುಗಳು ಮರಗಟ್ಟಿತ್ತು. ಬೆಳೆದ ಉಗುರುಗಳನ್ನು ಕತ್ತರಿಸಲು ಆಸ್ಪತ್ರೆಯ ದಾದಿಯರು ಅರುಣಾಳ ಬೆರಳನ್ನು ಬಲವಂತವಾಗಿ ಬಿಡಿಸಿಕೊಳ್ಳಬೇಕಿತ್ತು. ಕೊಳವೆ ಮಾರ್ಗವಾಗಿ ಸತತ ಮೂರೂವರೆ ದಶಕಕ್ಕೂ ಹೆಚ್ಚು ಕಾಲ ಮೂಗಿನಿಂದ ಆಹಾರ, ಔಷಧ ಕೊಡುತ್ತಿದ್ದುದರ ಪರಿಣಾಮವಾಗಿ, ಆಗಾಗ ಮಲಬದ್ಧತೆ, ಅತಿಸಾರ ಆಗುತ್ತಿತ್ತು. ದೇಹದಲ್ಲಿ ಇಷ್ಟೆಲ್ಲ ನಡೆಯುತ್ತಿರುವಾಗ ಆಕೆ ನೋವು ಅನುಭವಿಸುತ್ತಿದ್ದಳು ಆದರೆ ಹೇಳಿಕೊಳ್ಳಲು ಮಾತ್ರ ಆಗುತ್ತಿರಲಿಲ್ಲ. ಅಂತಿಮವಾಗಿ, ಅರುಣಾಳಿಗೆ 66 ವರ್ಷ ವಯಸ್ಸಾದಾಗ ನ್ಯುಮೋನಿಯಾ ಅಂಟಿಕೊಂಡಿತು. ಆಕೆಯನ್ನು ತುರ್ತು ಚಿಕಿತ್ಸೆಯ ವಿಭಾಗಕ್ಕೆ ಸೇರಿಸಿ, ವೆಂಟಿಲೇಟರ್ ಅಳವಡಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಸುಮಾರು 42 ವರ್ಷಕ್ಕೂ ಹೆಚ್ಚು ಕಾಲ ಒಳಗೊಳಗೇ ವಿಲವಿಲನೆ ಒದ್ದಾಡಿದ ಜೀವವೊಂದು ಕೊನೆಗೂ ಮುಕ್ತಿ ಪಡೆಯಿತು. 18 ಮೇ 2015ರಂದು, ಕ್ರೂರ ವಿಧಿಯ ಕರುಳು ಕರಗಿತು. ಬದುಕಿದ್ದೂ ಶವದಂತಿದ್ದ ಅರುಣಾ ಶಾಶ್ವತವಾಗಿ ಇಹಲೋಕ ತ್ಯಜಿಸಿದ್ದಳು.

ಇಲ್ಲಿ ಇಷ್ಟೆಲ್ಲ ನಡೆಯುತ್ತಿರುವಾಗ, ಇದಕ್ಕೆಲ್ಲ ಕಾರಣನಾದ ಸೋಹನ್‌ಲಾಲ್ ಎಲ್ಲಿದ್ದ? ಆ ಸಂದರ್ಭದಲ್ಲಿ ಅದು ಯಾರಿಗೂ ತಿಳಿದಿರಲಿಲ್ಲ. ಕೆಲವರು ಆತ ಸತ್ತು ಹೋಗಿದ್ದಾನೆ ಎಂದರೆ, ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದರು. ಇನ್ನು ಕೆಲವರು ಆತ ಬದುಕಿದ್ದಾನೆ ಆದರೆ ತಲೆಮರೆಸಿ ಕೊಂಡಿದ್ದಾನೆ ಎಂದರು. ಕೆಲವರಂತೂ ಆತ ಮಾರು ವೇಷದಲ್ಲಿ ಆಸ್ಪತ್ರೆಯ ಅಕ್ಕಪಕ್ಕದಲ್ಲಿಯೇ ಓಡಾಡುತ್ತಿರಬಹುದು ಎಂದೂ ಹೇಳಿದರು. ಅವನನ್ನು ಹುಡುಕುವ ಪ್ರಯತ್ನವೂ ನಡೆಯಿತು. ಆದರೆ ಆತ ಮಾತ್ರ ಹಲವು ವರ್ಷಗಳವರೆಗೆ ಯಾರ ಕಣ್ಣಿಗೂ ಕಾಣಿಸಿಕೊಳ್ಳಲಿಲ್ಲ.

ಪ್ರತಿ ಕಥೆಯಲ್ಲಿರುವಂತೆ ಈ ಕಥೆಯಲ್ಲಿಯೂ ಒಂದು ತಿರುವು ಇದೆ. ಅರುಣಾ ಮರಣದ ನಂತರ ಧನೇಶ್ ಚೌಹಾನ್ ಹೆಸರಿನ ಮರಾಠಿ ಪತ್ರಿಕೆಯ ಪತ್ರಕರ್ತನೊಬ್ಬ ಸೋಹನ್‌ಲಾಲ್‌ನನ್ನು ಪತ್ತೆಹಚ್ಚಿದ. ಆಗ ಸೋಹನ್‌ಲಾಲ್ ಉತ್ತರ ಪ್ರದೇಶದ ಗಾಜಿಯಾಬಾದ್‌ನಿಂದ ಸುಮಾರು 60 ಕಿ.ಮೀ. ದೂರದಲ್ಲಿ ತನ್ನ ಪೂರ್ವಜರು ಕಟ್ಟಿಸಿದ ಮನೆಯಲ್ಲಿ ವಾಸಿಸುತ್ತಿದ್ದ. ಆಗ ಅವನಿಗೂ 60 ವರ್ಷ ದಾಟಿ ಹೋಗಿತ್ತು. ಆದ್ದರಿಂದ ಆತನ ನೆನಪು ಕ್ಷೀಣಿಸತೊಡಗಿತ್ತು. ಎಲ್ಲಿಯವರೆಗೆ ಎಂದರೆ ಆತನಿಗೆ ತಾನು ಅರುಣಾಳೊಂದಿಗೆ ವರ್ತಿಸಿದ ರೀತಿ, ಆ ದಿನಾಂಕ ಇತ್ಯಾದಿ ಮರೆತುಹೋಗಿತ್ತು. ಆದರೆ ಆತನಿಗೆ ತಾನು ಮಾಡಿದ ತಪ್ಪಿನ ಅರಿವಾಗಿತ್ತು. ಆತ ಪಶ್ಚಾತ್ತಾಪ ಪಡುತ್ತಿದ್ದ. ಅದೆಲ್ಲ ಸಿಟ್ಟಿನ ಭರದಲ್ಲಿ ನಡೆದುಹೋಯಿತು ಎಂದು ಹೇಳುತ್ತಿದ್ದ. ಆತನ ಪ್ರಕಾರ, ಆತ ಕಳ್ಳತನ ಮಾಡಲಿಲ್ಲ, ಆಭರಣ ಕದಿಯಲಿಲ್ಲ, ಬಲಾತ್ಕಾರವನ್ನೂ ಮಾಡಲಿಲ್ಲ. ಅದು ಬಹುಶಃ ಬೇರೆ ಯಾರಾದರೂ ಮಾಡಿರಬಹುದು ಎಂದು ಹೇಳುತ್ತಿದ್ದ. ಜೈಲಿನಿಂದ ಹೊರಗೆ ಬಂದ ನಂತರ ಉತ್ತರ ಪ್ರದೇಶದಲ್ಲಿರುವ ತನ್ನ ಮಾವನ ಮನೆಗೆ ಹೋಗಿ ಉಳಿದಿದ್ದ. ದಿನಕ್ಕೆ 25 ಕಿ.ಮೀ. ಸೈಕಲ್ ತುಳಿದು, ಕೂಲಿ ಕೆಲಸಕ್ಕೆ ಹೋಗುತ್ತಿದ್ದ. ಪ್ರತಿನಿತ್ಯ 250 ರುಪಾಯಿ ದುಡಿಯುತ್ತಿದ್ದ.

ಜೈಲಿಗೆ ಹೋಗುವಾಗ ಸೋಹನ್‌ಲಾಲ್‌ಗೆ ಒಂದು ಗಂಡು, ಒಂದು ಹೆಣ್ಣು ಮಗು ಇತ್ತು. ಆತ ಜೈಲಿನಲ್ಲಿ ಇರುವಾಗಲೇ ಆತನ ಹೆಣ್ಣುಮಗು ಸತ್ತುಹೋಗಿತ್ತು. ಸೋಹನ್‌ಲಾಲ್ ಅದನ್ನು ತಾನು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಎಂದು ತಿಳಿದಿದ್ದ. ಜೈಲಿನಿಂದ ಹೊರಗೆ ಬಂದ ನಂತರವೂ ಸದಾ ಮಂಕು-ಮಂಕಾಗಿ ಕುಳಿತಿರುತ್ತಿದ್ದ. ಯಾರೊಂದಿಗೂ ಹೆಚ್ಚು ಮಾತನಾಡುತ್ತಿರಲಿಲ್ಲ, ತನ್ನ ಹೆಂಡತಿಯ ಬಳಿಯೂ ಹೋಗುತ್ತಿರಲಿಲ್ಲ, ಅವಳ ಮೈ ಮುಟ್ಟುತ್ತಿರಲಿಲ್ಲ. ಬಿಡುಗಡೆಯಾದ 14 ವರ್ಷದ ನಂತರ ಆತನಿಗೆ ಎರಡನೆಯ ಗಂಡುಮಗು ಹುಟ್ಟಿತ್ತು.

ಸೋಹನ್‌ಲಾಲ್‌ನ ಇಬ್ಬರೂ ಗಂಡುಮಕ್ಕಳು ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಹಿರಿಯ ಮಗನಿಗೆ ತಾಯಿ ಈ ಘಟನೆಯ ಕುರಿತಾಗಿ ಮೊದಲೇ ಹೇಳಿದ್ದಳು. ಎರಡನೆಯ ಮಗನಿಗೆ 12 ವರ್ಷವಾದಾಗ ಈ ವಿಷಯವನ್ನು ತಿಳಿಸಿದ್ದಳು. ಹಿರಿಯ ಮಗ ಸೋಹನ್‌ಲಾಲ್‌ನೊಂದಿಗೆ ಹೊಂದಿಕೊಂಡಿದ್ದ. ಆದರೆ ಎರಡನೆಯ ಮಗನಿಗೆ ಸೋಹನ್‌ಲಾಲ್ ಬಗ್ಗೆ ಸ್ವಲ್ಪವೂ ಅಭಿಮಾನವಿರಲಿಲ್ಲ. ಆತ ತಂದೆಯೊಂದಿಗೆ ಹೆಚ್ಚು ಬೆರೆಯುತ್ತಿರಲಿಲ್ಲ. ಆತನ ಪ್ರಕಾರ, ತಂದೆ ಕನಿಷ್ಠಪಕ್ಷ ತನ್ನನ್ನು ಶಾಲೆಗೂ ಕಳುಹಿಸಲಿಲ್ಲ, ಓದು ಬರಹ ತನ್ನಿಂದ ದೂರವಾಗಲು,



ಸ್ವಂತ ಹೆಸರು ಬರೆಯಲು ಕೂಡ ಬರದೇ ಇರಲು ತನ್ನ ಅಪ್ಪನೇ ಕಾರಣ ಎಂಬುದು ಆತನ ನಿಲುವಾಗಿತ್ತು.

ಇಷ್ಟೆಲ್ಲ ಹೇಳಿದ ನಂತರ ಪಿಂಕಿ ವೀರಾನಿಯ ಕುರಿತಾಗಿ ಹೇಳದಿದ್ದರೆ ಈ ಲೇಖನ ಅಪೂರ್ಣ. ಪಿಂಕಿ ವಿರಾನಿ ಒಬ್ಬ ಸಮಾಜಸೇವಾಕರ್ತೆ. ಮಾನವ ಹಕ್ಕು ಹೋರಾಟಗಾರ್ತಿ. ಅರುಣಾಳ ಪರಿಸ್ಥಿತಿ ನೋಡಲಾಗದೆ 2011ರಲ್ಲಿ ಪಿಂಕಿ ದೇಶದ ಸರ್ವೋಚ್ಚ ನ್ಯಾಯಾಲಯದ ಮೊರೆಹೋಗಿ ಅರುಣಾಳಿಗೆ ದಯಾಮರಣ ನೀಡಬೇಕೆಂದು ಕೇಳಿಕೊಂಡಿದ್ದಳು. ಅರುಣಾಳಿಗೆ ಘನತೆಯಿಂದ ಬದುಕುವ ಹಕ್ಕಿದೆ, ಅದು ಸಾಧ್ಯವಾಗದಿದ್ದರೆ ಘನತೆಯಿಂದ ಸಾಯುವ ಹಕ್ಕೂ ಇದೆ. ಬೇರೆಯವರ ಸಲುವಾಗಿ ಅಥವಾ ಬೇರೆಯವರು ನೋಡಿಕೊಳ್ಳುತ್ತಿದ್ದಾರೆ ಎಂಬ ಕಾರಣಕ್ಕೆ ಜೀವಂತವಾಗಿ ಇಡಬಾರದು ಎಂಬುದು ಪಿಂಕಿಯ ವಾದವಾಗಿತ್ತು. ಪಿಂಕಿಯ ಈ ನಿರ್ಧಾರದಿಂದ ಆಸ್ಪತ್ರೆಯ ದಾದಿಯರು ಸಿಟ್ಟುಗೊಂಡಿದ್ದರು. ಅವರು ಇದನ್ನು ತೀವ್ರವಾಗಿ ವಿರೋಧಿಸಿದರು. ನ್ಯಾಯಾಲಯ ಅಂದಿನ ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ನೇತೃತ್ವದ ವಿಶೇಷ ಪೀಠವನ್ನು ಸ್ಥಾಪಿಸಿತು. ಆ ಪೀಠ ದೇಶದಲ್ಲಿ ನಿಷ್ಕ್ರಿಯ ದಯಾಮರಣಕ್ಕಾಗಿ ಕೆಲವು ಕಾನೂನು ಮಾರ್ಗಸೂಚಿಗಳನ್ನು ಹಾಕಿಕೊಟ್ಟಿತು. ಪಿಂಕಿ ವಿರಾನಿಯ ಅಪೇಕ್ಷೆಯಂತೆ ಅರುಣಾಳಿಗೆ ದಯಾಮರಣವನ್ನು ನಿರಾಕರಿಸಿತು. ಅಂದು ಆಸ್ಪತ್ರೆಯಲ್ಲಿ ಹಬ್ಬದ ಸಂಭ್ರಮವಿತ್ತು. ದಾದಿಯರು ಸಿಹಿ ಹಂಚಿ ಸಂಭ್ರಮಿಸಿದರು. 'ಇದು ಅರುಣಾಳ ಮರುಜನ್ಮ' ಎಂದು ಸಂತೋಷಪಟ್ಟಿದ್ದರು. ಪಿಂಕಿ ವಿರಾನಿ ಈ ಘಟನೆಯ ವಿವರಗಳನ್ನು ಹೇಳುವ ARUNA'S STORY ಕೃತಿಯನ್ನು ರಚಿಸಿದರು.

ಅಂದು ಪಿಂಕಿಗೆ ಜಯ ಸಿಗಲಿಲ್ಲ. ಆದರೆ ಮುಂದೆ ಇದು ದೇಶದ ದಯಾಮರಣದ ಕಾನೂನು ತಿದ್ದುಪಡಿಯಲ್ಲಿ ಮಹತ್ತರ ಪಾತ್ರವಹಿಸಿತು. 2018ರಲ್ಲಿ, ಅರುಣಾ ಮರಣದ 3 ವರ್ಷದ ನಂತರ, ಭಾರತದ ಸರ್ವೋಚ್ಚ ನ್ಯಾಯಾಲಯ ನಿಷ್ಕ್ರಿಯ ದಯಾಮರಣವನ್ನು ಕಾನೂನುಬದ್ಧಗೊಳಿಸುವ ಐತಿಹಾಸಿಕ ತೀರ್ಪನ್ನು ನೀಡಿತು. ಆ ಸಮಯದಲ್ಲಿ ವಿಶ್ವದ 6 ದೇಶಗಳಲ್ಲಿ ಮಾತ್ರ ಈ ಕಾನೂನು ಇತ್ತು. ಭಾರತ ಏಷ್ಯಾದ ಏಕೈಕ ಹಾಗೂ ವಿಶ್ವದ ಏಳನೆಯ ದೇಶವಾಯಿತು.

ಒಟ್ಟಾರೆ ಹೇಳುವುದಾದರೆ, ಈ ವಿಷಯದಲ್ಲಿ ಬಲಾತ್ಕಾರಕ್ಕೆ, ಹಲ್ಲೆಗೆ ಒಳಗಾದವಳಿಗೆ ಮರಣವೂ ಇಲ್ಲ, ಇದಕ್ಕೆಲ್ಲ ಕಾರಣನಾದವನಿಗೆ ಮರಣ ದಂಡನೆಯೂ ಇಲ್ಲ, ಕೊನೆ ಪಕ್ಷ ಕಠಿಣ ಶಿಕ್ಷೆಯೂ ಇಲ್ಲ. ಇದಕ್ಕೆ ಬಲಿಯಾದವಳನ್ನು ಈ ಲೋಕದ ಸಂಕೋಲೆಯಿಂದ ಕಳಚಿ ಕಳುಹಿಸಲು ಯೋಚಿಸಿ, ದಯಾಮರಣ ಕಲ್ಪಿಸುವಂತೆ ಕೇಳಿದರೆ ಅದೂ ಇಲ್ಲ! ಈ ನೋವಿನ ಘಟನೆಯ ಕುರಿತು ಯೋಚಿಸಿದಾಗ, ಇಹಲೋಕದ ಪರಿವೆಯೇ ಇಲ್ಲದೆ ಬಿದ್ದುಕೊಂಡಿದ್ದ, ನೋವನ್ನು ಅನುಭವಿಸಿದ ಅರುಣಾಳ ಬಗ್ಗೆ ಕಣ್ಣೀರು ಹಾಕುವುದೇ? ಅವಳನ್ನು ಆ ಸ್ಥಿತಿಗೆ ತಳ್ಳಿದವನಿಗೆ 7 ವರ್ಷ ಮಾತ್ರ ಶಿಕ್ಷೆ ಆಯಿತು ಎಂದು ನ್ಯಾಯಾಲಯದ ಮೇಲೆ, ಕಾನೂನು ವ್ಯವಸ್ಥೆಯ ಮೇಲೆ ಕೋಪಗೊಳ್ಳುವುದೇ? ಅಷ್ಟಕ್ಕೇ ಅಪರಾಧಿಯ ಸ್ಥಾನದಲ್ಲಿದ್ದವ ಪ್ರಾಯಶ್ಚಿತ್ತ ಪಟ್ಟುಕೊಂಡ ಎಂದು ಸಮಾಧಾನಪಡುವುದೇ? ಅಥವಾ ಈ ಘಟನೆಯಿಂದ ದೇಶದ ಕಾನೂನಿನಲ್ಲಿ ಒಂದು ಮಹತ್ವದ ತೀರ್ಪು ಬಂದಿತು ಎಂದು ಸಂತೋಷಪಟ್ಟುಕೊಳ್ಳುವುದೇ?

ಒಂದು ಅಂಕಿ-ಅಂಶದ ಪ್ರಕಾರ ಭಾರತದಲ್ಲಿ ಪ್ರತಿನಿತ್ಯ 70 ಅತ್ಯಾಚಾರದ ಪ್ರಕರಣ ದಾಖಲಾಗುತ್ತದೆ. ಇನ್ನು ದಾಖಲಾಗದೇ ಇರುವ ಸಂಖ್ಯೆ ಎಷ್ಟೋ?! ದೇಶಕ್ಕೆ ಸ್ವಾತಂತ್ರ್ಯ ದಕ್ಕಿ 8 ದಶಕವಾಗುತ್ತಾ ಬಂತು, ಜತೆಜತೆಗೆ ಈ ಕಳಂಕವೂ ಅಂಟಿಕೊಂಡೇ ಬಂತು. ಇದಕ್ಕೆ ಮುಕ್ತಿ ಎಂದು? ಇದಕ್ಕೆ ಕೊನೆಯೇ ಇಲ್ಲವೇ?

ಹಾಗಾದರೆ ಇದು ಭಾರತದಲ್ಲಿ ಮಾತ್ರ ನಡೆಯುವಂಥದ್ದೇ ಅಂದರೆ ಖಂಡಿತ ಅಲ್ಲ. ಫ್ರಾನ್ಸ್‌ನಂಥ ಮುಂದುವರಿದ ದೇಶದಲ್ಲೂ ಈ ರೀತಿಯ ವಿಕೃತಿ ಇಂದಿಗೂ ನಡೆದಿದೆ. ನೀವು ಕೇಳಿರಬಹುದು, ಇತ್ತೀಚೆಗಷ್ಟೇ ಫ್ರಾನ್ಸ್‌ನಲ್ಲಿ ವ್ಯಕ್ತಿಯೊಬ್ಬ ತನ್ನ ಪತ್ನಿಗೇ ಮತ್ತಿನ ಮದ್ದು ಕೊಟ್ಟು ಎಪ್ಪತ್ತಕ್ಕೂ ಹೆಚ್ಚು ಜನರಿಂದ ಆಕೆಯ ಮೇಲೆ ಬಲಾತ್ಕಾರ ಮಾಡಿಸಿದ. ಸಾಲದು ಎಂಬಂತೆ ಅದನ್ನೆಲ್ಲ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಳ್ಳುತ್ತಿದ್ದ. ಅವನ ಮಗಳಿಗೆ ವಿಷಯ ತಿಳಿದು ನ್ಯಾಯಾಲಯದ ಮೊರೆ ಹೋದಾಗ, ಬಲಾತ್ಕಾರ ಮಾಡಿದ ಐವತ್ತಕ್ಕೂ ಹೆಚ್ಚು ಜನ ತಮ್ಮ ತಪ್ಪನ್ನು ಒಪ್ಪಿಕೊಂಡರು. ಅಲ್ಲಿಗೆ ಈ ವಿಕೃತ ರಾಕ್ಷಸ ರೋಗಕ್ಕೆ ಯಾವುದೇ ಗಡಿ ಇಲ್ಲ ಎಂದಾಯಿತು. ಆದರೆ ಮನುಷ್ಯರೆಂದು ಕರೆಸಿಕೊಳ್ಳುವ ನಾವು ಇದನ್ನು ಕೊನೆಗಾಣಿಸುವುದಕ್ಕೆ ಗಡುವನ್ನಂತೂ ಹಾಕಿಕೊಳ್ಳಲೇಬೇಕು.

ಅಭಿಮತ

ಎಸ್.ಶ್ರೀನಿವಾಸ್

ಕಲಿಕೆಯ ದಯನೀಯ ಸ್ಥಿತಿ

ಪುತ್ತಿಗೆ ಮಠದ ಶ್ರೀ ಸುಗುಣೇಂದ್ರತೀರ್ಥ ಸ್ವಾಮೀಜಿಯವರು ಹೇಳಿದರೆನ್ನಲಾದ 'ಸಂಸ್ಕೃತ ಕಲಿಕೆಯು ಸ್ವರ್ಗಾರೋಹಣಕ್ಕೆ ರಹದಾರಿ' ಎಂಬರ್ಥದ ಮಾತಿನ ಕುರಿತಾಗಿ ಪರ-ವಿರೋಧದ ಚರ್ಚೆಗಳೇನೋ ನಡೆಯುತ್ತಿವೆ. ಆದರೆ ಇದಕ್ಕೂ ಮೊದಲು ವಸ್ತುಸ್ಥಿತಿಯನ್ನೊಮ್ಮೆ ಅವಲೋಕಿಸೋಣ. ಸಂಸ್ಕೃತ ಕಲಿತವರು ಸ್ವರ್ಗಕ್ಕೆ ಹೋಗುವ ಸಾಧ್ಯಾಸಾಧ್ಯತೆಗಳು ಒತ್ತಟ್ಟಿಗಿರಲಿ, ನಮ್ಮ ಶಾಲಾ ಕಾಲೇಜುಗಳಲ್ಲಿ ಸಂಸ್ಕೃತವನ್ನು ಸರಿಯಾಗಿ ಕಲಿಸಿಕೊಡುವುದಕ್ಕೆ ಮೊದಲು ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ. ಪ್ರಸ್ತುತ, ಅನಕ್ಷರಸ್ಥ ತಂದೆ-ತಾಯಿಗೆ ಹುಟ್ಟಿದ ಒಂದು ಮಗುವು ಕೂಡ 2-3 ವರ್ಷಗಳಲ್ಲಿ ತನ್ನ ಮಾತೃಭಾಷೆಯಲ್ಲಿ ಮಾತಾಡಲು ಕಲಿಯುತ್ತದೆ. ಆದರೆ, ಒಂದೋ ಎರಡೋ ಭಾಷೆಗಳನ್ನು ತಿಳಿದಿರುವ, ಪ್ರತಿಷ್ಠಿತ ಶಾಲೆ-ಕಾಲೇಜುಗಳಲ್ಲಿ ಓದಿರುವ ವಿದ್ಯಾರ್ಥಿಗಳು ಐದು ವರ್ಷದವರೆಗೂ (ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ) ಸಂಸ್ಕೃತವನ್ನು 125 ಅಂಕಗಳಿಗೆ ಪ್ರಥಮ ಭಾಷೆಯಾಗಿ ತೆಗೆದುಕೊಂಡಿದ್ದರೂ, ಇಂಥವರಲ್ಲಿ ಅನೇಕರು ಸ್ನಾತಕೋತ್ತರ ಪದವಿ ಪಡೆದ ಶಿಕ್ಷಕರಿಂದ ಕಲಿತ ನಂತರವೂ ಒಂದು ಸಣ್ಣ ವಾಕ್ಯ ರಚಿಸಲು, ಮಾತಾಡಲು ಅಸಮರ್ಥರಾಗುವ ನಿದರ್ಶನಗಳಿವೆ. ಸಂಸ್ಕೃತವನ್ನು ಕಲಿಸುವ ಕ್ರಮದಲ್ಲಿನ ನ್ಯೂನತೆಯನ್ನು ಇದು ಪ್ರದರ್ಶಿಸುತ್ತದೆ.

ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ತೆಗೆದುಕೊಂಡ ವಿದ್ಯಾರ್ಥಿಗಳು ಪದವಿಯನ್ನು ಪಡೆದು ವಿವಿಧ ಕ್ಷೇತ್ರಗಳಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿದ್ದಾರೆ. ಇಂಥವರಲ್ಲಿ ಕೆಲವರು (ಕನಿಷ್ಠ ಐದು ವರ್ಷದವರೆಗೆ ಸಂಸ್ಕೃತವನ್ನು ಓದಿದ ನಂತರವೂ) ಒಂದು ಸಣ್ಣ ವಾಕ್ಯವನ್ನು ರಚಿಸಲಾರರು ಎಂದರೆ, ಅಷ್ಟು ವರ್ಷ ಅವರು ಸಂಸ್ಕೃತ ಓದಿದ್ದು ನೀರಿನಲ್ಲಿ ಹೋಮ ಮಾಡಿದಂತೆ ಅಲ್ಲವೇ? ಇದು ಕೇವಲ ಒಬ್ಬಿಬ್ಬರ ಕುರಿತಾದ ಪ್ರಶ್ನೆಯಲ್ಲ, ವರ್ಷಾನುವರ್ಷ ಉತ್ತೀರ್ಣರಾಗುವ ಲಕ್ಷಾಂತರ ವಿದ್ಯಾರ್ಥಿಗಳ ಕಥೆ. ಇವರಲ್ಲಿ ದೊಡ್ಡವರು, ಚಿಕ್ಕವರು ಸೇರಿದ್ದಾರೆ. ಕರ್ನಾಟಕದ ಪ್ರಸಿದ್ಧ ಯಾತ್ರಾಸ್ಥಳವೊಂದರ ಹಿಂದಿನ ಆಡಳಿತಗಾರರೊಬ್ಬರು ಒಮ್ಮೆ ಭಾಷಣ ಮಾಡುವಾಗ, 'ನಾನು ಕೂಡ ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ತೆಗೆದುಕೊಂಡಿದ್ದೆ; ಆದರೆ ಸಂಸ್ಕೃತದಲ್ಲಿ ನನಗೆ ಮಾತನಾಡಲು ಬರುವುದಿಲ್ಲ' ಎಂದಿದ್ದರು.



ಸ್ವಲ್ಪ ಮಟ್ಟಿಗೆ ಸಾಮಾನ್ಯಜ್ಞಾನ ಉಳ್ಳವರು ಕೂಡಾ ತಿಳಿದಿರುವ ವಿಷಯವೇನೆಂದರೆ, ಯಾರಿಗಾದರೂ ಒಂದು ಭಾಷೆಯನ್ನು ಕಲಿಸಬೇಕಾದರೆ ಮೊದಲು ಅವರಿಗೆ ಮಾತನಾಡಲು ಅನುವು ಮಾಡಿಕೊಡಬೇಕು, ನಂತರ ಓದುವ-ಬರೆಯುವ ಅಭ್ಯಾಸಕ್ಕೆ ಅವರನ್ನು ಒಡ್ಡಬೇಕು. ಆದರೆ ನಮ್ಮಲ್ಲಿ ಸಂಸ್ಕೃತವನ್ನು ಹೇಳಿಕೊಡುವ ರೀತಿಯೇ ಅವೈಜ್ಞಾನಿಕವಾಗಿದೆ. ಸಂಸ್ಕೃತ ಶಿಕ್ಷಕರು ಪಠ್ಯಪುಸ್ತಕವನ್ನು ಓದಿ ಅದನ್ನು ಕನ್ನಡ ಅಥವಾ ಇಂಗ್ಲಿಷ್‌ಗೆ ಭಾಷಾಂತರಿಸುತ್ತಾರೆ. ಮೊದಲೆಲ್ಲ ಪರೀಕ್ಷೆಯಲ್ಲಿ ಸಂಸ್ಕೃತದಲ್ಲಿ ಪ್ರಶ್ನೆಯನ್ನು ಕೇಳುತ್ತಿದ್ದರು ಹಾಗೂ ವಿದ್ಯಾರ್ಥಿಗಳು ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಉತ್ತರಿಸುತ್ತಿದ್ದರು. ಈಗ ಸಂಸ್ಕೃತದಲ್ಲಿಯೇ ಉತ್ತರ ಬರೆಯಬೇಕೆಂದು ನಿರ್ದೇಶಿಸಲಾಗಿದೆ. ಆದರೂ, ಎಸ್‌ಎಸ್‌ಎಲ್‌ಸಿಯಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಲ್ಲಿ ಅನೇಕರಿಗೆ ಸಂಸ್ಕೃತದಲ್ಲಿ ಒಂದೆರಡು ವಾಕ್ಯಗಳನ್ನು ಮಾತನಾಡಲಿಕ್ಕೆ ಆಗುವುದಿಲ್ಲ, ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕು. ಬಹುತೇಕ ವಿದ್ಯಾರ್ಥಿಗಳು ಎಂಟನೇ ತರಗತಿಯಲ್ಲಿ ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಆಯ್ಕೆ ಮಾಡಲು ಮುಖ್ಯ ಕಾರಣ ಆ ಭಾಷೆಯ ಮೇಲಿನ ಪ್ರೀತಿಯೋ ಅಥವಾ ಸಂಸ್ಕೃತವನ್ನು ಕಲಿಯಬೇಕೆಂಬ ಆಸೆಯೋ ಅಲ್ಲ; ಸಂಸ್ಕೃತವನ್ನು ತೆಗೆದುಕೊಂಡರೆ ಹೆಚ್ಚು ಅಂಕವನ್ನು ಪಡೆಯಬಹುದು ಎಂಬ ಉದ್ದೇಶವೇ ಇದಕ್ಕೆ ಕಾರಣ. ವಿಷಾದಕರ ಸಂಗತಿಯೆಂದರೆ, ವಿದ್ಯಾವಂತ ಪೋಷಕರು ಕೂಡ ಐದು ವರ್ಷ ಸಂಸ್ಕೃತವನ್ನು ಓದಿರುವ ತಮ್ಮ ಮಕ್ಕಳನ್ನು, 'ಎಲ್ಲಿ, ಒಂದೆರಡು ಸಾಲು ಸಂಸ್ಕೃತದಲ್ಲಿ ಮಾತನಾಡು ನೋಡೋಣ?' ಎಂದು ಕೇಳುವುದಿಲ್ಲ, ಅದಕ್ಕೆ ಬಯಸುವುದಿಲ್ಲ; ಅವರಿಗೆ ಬೇಕಾಗಿರುವುದು ತಮ್ಮ ಮಕ್ಕಳು ಸಂಸ್ಕೃತದಲ್ಲಿ ಎಷ್ಟು ಅಂಕಗಳನ್ನು ಪಡೆದಿದ್ದಾರೆ ಎಂಬುದು ಮಾತ್ರ.

ಜರ್ಮನ್, ಫ್ರೆಂಚ್ ಮುಂತಾದ ವಿದೇಶಿ ಭಾಷೆಗಳನ್ನು ಸಾಧಾರಣವಾಗಿ ಮಾತನಾಡಲು ಕೆಲ ತಿಂಗಳಲ್ಲಿ ಕಲಿಸಿಕೊಡಲಾಗುವುದು. ಆದರೆ ಸಂಸ್ಕೃತದ ವಿಷಯದಲ್ಲಿ ಹೀಗಾಗುತ್ತಿಲ್ಲ- ವಿದ್ಯಾರ್ಥಿಗಳು ಐದು ವರ್ಷದವರೆಗೆ ಸಂಸ್ಕೃತವನ್ನು ಕಲಿತರು ಕೂಡ! ಇಲ್ಲಿ ದೋಷವಿರುವುದು ಸಂಸ್ಕೃತ ಪಠ್ಯಕ್ರಮವನ್ನು ರೂಪಿಸಿದ ಘನ ವಿದ್ವಾಂಸರದ್ದು. ನನ್ನ ಸಹೋದ್ಯೋಗಿ ಸಂಸ್ಕೃತ ಉಪನ್ಯಾಸಕರೊಬ್ಬರು ಹೇಳಿದ ವಿಷಯವನ್ನು ಈ ಸಂದರ್ಭದಲ್ಲಿ ಸ್ಮರಿಸಲು ಬಯಸುತ್ತೇನೆ. 'ಒಂದು ವಾಕ್ಯವನ್ನೂ ಸ್ವತಂತ್ರವಾಗಿ ರಚಿಸಲಾಗದ ವಿದ್ಯಾರ್ಥಿಗಳಿಗೂ ನೀವು ನಲವತ್ತು ಅಂಕಗಳನ್ನು ನೀಡಿ ತೇರ್ಗಡೆ ಮಾಡುವುದೇಕೆ?' ಎಂದು ಅವರನ್ನು ಪ್ರಶ್ನಿಸಿದಾಗ, 'ವಿದ್ಯಾರ್ಥಿಗಳಿಗೆ ನಾವು ಹಾಗೆ ಉದಾರವಾಗಿ ಅಂಕಗಳನ್ನು ನೀಡದಿದ್ದರೆ, ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ತೆಗೆದುಕೊಳ್ಳುವುದನ್ನು ವಿದ್ಯಾರ್ಥಿಗಳು ನಿಲ್ಲಿಸುತ್ತಾರೆ. ಆಗ ಶಾಲಾ-ಕಾಲೇಜಿನಲ್ಲಿ ಸಂಸ್ಕೃತ ವಿಭಾಗವನ್ನು ತೆಗೆದುಹಾಕುತ್ತಾರೆ ಹಾಗೂ ನಾವು ನಿರುದ್ಯೋಗಿಗಳಾಗುತ್ತೇವೆ' ಎಂಬ ಉತ್ತರ ಅವರಿಂದ ಹೊಮ್ಮಿತು. ಇಂಥ ನಿಲುವಿನಿಂದಾಗಿ ಸಂಸ್ಕೃತ ಶಿಕ್ಷಕರು ಆತ್ಮವಂಚನೆ ಮಾಡಿಕೊಂಡಂತೆ ಆಗುವುದಿಲ್ಲವೇ?

'ನಾವು ನಮ್ಮ ಯುವಜನರಿಗೆ ದೇಶದ ಸಂಸ್ಕೃತಿ ಹಾಗೂ ಪರಂಪರೆಯ ಬಗ್ಗೆ ತಿಳಿವಳಿಕೆ ನೀಡಬೇಕು' ಎಂಬ ಕೂಗು ಪ್ರಸ್ತುತ ಕೇಳಿಬರುತ್ತಿದೆ. ರಾಷ್ಟ್ರಕವಿ ಕುವೆಂಪು ಅವರ ಪ್ರಕಾರ, ಸಂಸ್ಕೃತಿ ಪ್ರಸಾರ ಮಾಡುವುದು ಎಂದರೆ ನಮ್ಮ ಪ್ರಾಚೀನ ಗ್ರಂಥಗಳನ್ನು ವಿಮರ್ಶಿಸಿ, ಯಾವುದು ವಿಚಾರಪೂರಕವಾದುದು ಮತ್ತು ಯಾವುದು ಅಲ್ಲ ಎಂಬುದನ್ನು ಬೇರ್ಪಡಿಸಿ ಜನರಿಗೆ ತಿಳಿಸುವುದು. ಇದನ್ನು ಮಾಡಬೇಕಾದರೆ ಮೊದಲು ನಮಗೆ ಭಾಷೆಯ ಜ್ಞಾನ ಬೇಕು. ವೇದ, ಪುರಾಣ, ವೇದಾಂತ, ಆಗಮಶಾಸ್ತ್ರ, ಮಹಾಕಾವ್ಯಗಳು, ಆಯುರ್ವೇದ ಸೇರಿದಂತೆ ವಿವಿಧ ಪ್ರಕಾರದ ನಮ್ಮ ಪ್ರಾಚೀನ ಬರಹಗಳು ಸಂಸ್ಕೃತದಲ್ಲಿವೆ. ವಿದೇಶಿಯರು ಸೇರಿದಂತೆ ಕೆಲವೇ ವ್ಯಕ್ತಿಗಳು ಈ ಬರಹಗಳ ಭಾಷಾಂತರ ಹಾಗೂ ವ್ಯಾಖ್ಯಾನವನ್ನು ಮಾಡಿದ್ದು, ಪ್ರಸ್ತುತ ಅಧ್ಯಯನ ಮಾಡುವಾಗ ಅವನ್ನೇ ನಾವು ಬಳಸಬೇಕಾದ ಅನಿವಾರ್ಯತೆಯಿದೆ. ಸಂಸ್ಕೃತ ಗೊತ್ತಿಲ್ಲದ ಕಾರಣ ಸಮಾಜಶಾಸ್ತ್ರದ ವಿದಾರ್ಥಿಗಳಿಗೆ ಮೂಲಗ್ರಂಥವನ್ನು ಓದಲಾಗುತ್ತಿಲ್ಲ ಹಾಗೂ ಪ್ರಾಚೀನ ಭಾರತದ ಗ್ರಂಥಗಳನ್ನು ಅಧ್ಯಯನ ಮಾಡಬೇಕಾದರೆ ಅವುಗಳ ಆಂಗ್ಲ ಆವೃತ್ತಿಗೇ ಅವರು ಮೊರೆಹೋಗಬೇಕಾಗಿದೆ.

ಮೌಲ್ಯಗಳು ಕಾಲಕಾಲಕ್ಕೆ ಬದಲಾಗುತ್ತವೆ. ಆದ್ದರಿಂದ, ಆಯಾ ಕಾಲಘಟ್ಟದ ಪೀಳಿಗೆಯವರು ನಮ್ಮ ಪ್ರಾಚೀನ ಗ್ರಂಥಗಳನ್ನು ವಸ್ತುನಿಷ್ಠತೆಯಿಂದ ವಿಮರ್ಶಿಸಬೇಕಾದರೆ, ಅವರಿಗೆ ಸಂಸ್ಕೃತದ ಜ್ಞಾನ ಅತ್ಯವಶ್ಯಕವಾಗುತ್ತದೆ. ಅಲ್ಲದೆ, ಭಾಷೆಯನ್ನು ಮಾತಾಡಲು ಕಲಿತಾಗಲೇ ಇವತ್ತಿನ ಸಮಾಜದಲ್ಲಿ ವ್ಯವಹಾರ ಮಾಡಲು ಸಾಧ್ಯ. ಹಾಗೆಯೇ, ಯಾವ ಯಾವ ಕ್ಷೇತ್ರಗಳಲ್ಲಿ ಸಂಸ್ಕೃತದ ಪದಗಳ ಕೊರತೆ ಇದೆ ಎಂದು ತಿಳಿದಾಗಲೇ ಅದಕ್ಕೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬಹುದು. ಒಂದು ಭಾಷೆ ಜೀವಂತವಾಗಿರಬೇಕಾದರೆ, ದಿನನಿತ್ಯದ ವ್ಯವಹಾರದಲ್ಲಿ ನಾವು ಆ ಭಾಷೆಯನ್ನು ಬಳಸಬೇಕು. ಇಸ್ರೇಲ್ ದೇಶದವರು ತಮ್ಮ ಪ್ರಾಚೀನ ಭಾಷೆಯಾದ 'ಹಿಬ್ರೂ'ವನ್ನು ಜನಸಾಮಾನ್ಯರ ಭಾಷೆಯಾಗಿ ಮಾಡಿದ ಮಾದರಿ ನಮಗೆ ಮೇಲ್ಪಂಕ್ತಿಯಾಗಬೇಕು; ಸಂಸ್ಕೃತವನ್ನು ಅಧ್ಯಯನ ಭಾಷೆಯಾಗಿ ತೆಗೆದುಕೊಂಡ ನಮ್ಮ ವಿದ್ಯಾರ್ಥಿಗಳು ಸಂಸ್ಕೃತದಲ್ಲಿ ಸರಾಗವಾಗಿ ಮಾತನಾಡುವಂತಾಗಬೇಕು ಮತ್ತು ಅದು ಸುಗಮವಾಗಿ ನೆರವೇರುವುದಕ್ಕೆ ಅನುವು ಮಾಡಿಕೊಡುವ ಪಠ್ಯಕ್ರಮವನ್ನು ರೂಪಿಸಲು ನಮ್ಮ ಪಂಡಿತರು ಪ್ರಯತ್ನಿಸಬೇಕು.

(ಲೇಖಕರು ಇತಿಹಾಸಕಾರರು ಹಾಗೂ ಸಂಶೋಧಕರು)

ರೈಲು ಸಂಪರ್ಕದ ವಿಷಯದಲ್ಲಿ ಕ್ರಾಂತಿಯಾಗಬೇಕಿದೆ

ಪ್ರಗತಿಪಥ
ಡಾ.ರವೀಂದ್ರ ನಿಡೋಣಿ
vveditoped@gmail.com

ಯಾವುದೇ ಒಂದು ನಗರ, ಜಿಲ್ಲೆ ಅಥವಾ ರಾಜ್ಯ ಅಭಿವೃದ್ಧಿ ಹೊಂದಬೇಕಾದರೆ, ಕೈಗಾರಿಕೆಗಳು ಬರಬೇಕಾದರೆ ಆ ಜಿಲ್ಲೆಗಳಲ್ಲಿ ಮೊದಲು ಸಂಪರ್ಕ ಕ್ರಾಂತಿಗಳಾಗಬೇಕು. ಕರ್ನಾಟಕದ ಮಟ್ಟಿಗೆ ನೋಡುವುದಾದರೆ, ಕರ್ನಾಟಕವೆಂದರೆ 'ಬೆಂಗಳೂರು' ಎನ್ನುವಂಥ ಭಾವನೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೂಡಲು ರಾಜಧಾನಿ ಬೆಂಗಳೂರಿಗೆ ಇರುವ 'ಸಂಪರ್ಕ'ವೂ ಒಂದು ಕಾರಣ. ಇಂಥ ಸಂಪರ್ಕ ರಾಜ್ಯದ ಇತರ ಭಾಗಗಳಿಗೂ ವಿಸ್ತರಣೆಯಾದರೆ, ಸಾವಿರಾರು ಮಂದಿ ಯುವಕರು ತಮ್ಮೂರಲ್ಲಿಯೇ ಬದುಕು ಕಟ್ಟಿಕೊಳ್ಳಬಹುದು.

ರಾಜ್ಯದ ಮಟ್ಟಿಗೆ ನೋಡಿದರೆ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳು ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಆರ್ಥಿಕವಾಗಿ ಸಮೃದ್ಧವಾಗಿದ್ದರೂ ಎಲ್ಲೋ ಒಂದು ಕಡೆ ಅಭಿವೃದ್ಧಿಯಲ್ಲಿ, ಕೈಗಾರಿಕೆಗಳನ್ನು ಸೆಳೆಯುವಲ್ಲಿ ಹಿಂದೆ ಬಿದ್ದಿವೆ ಎಂದರೆ ತಪ್ಪಾಗುವುದಿಲ್ಲ. ಹಾಗೆ ನೋಡಿದರೆ, ವಿಜಯಪುರದ ಗೋಲಗುಮ್ಮಟ ವಿಶ್ವಪ್ರಸಿದ್ಧಿ ಹೊಂದಿದೆ. ಗೋಲಗುಮ್ಮಟ ಮಾತ್ರವಲ್ಲದೇ ಹತ್ತು ಹಲವು ಆಕರ್ಷಕ ಸ್ಮಾರಕಗಳಿಂದ ಅದು ಪ್ರಸಿದ್ಧಿ ಪಡೆದಿದೆ. ಇನ್ನು ಬಾಗಲಕೋಟೆ, ಬಾದಾಮಿ ಗುಹೆ ಮತ್ತು ಯುನೆಸ್ಕೋ ಪಾರಂಪರಿಕ ತಾಣದ ಪಟ್ಟಿಯಲ್ಲಿರುವ ಪಟ್ಟದಕಲ್ಲು ಸೇರಿದಂತೆ ಹಲವು ಸ್ಥಳಗಳಿಂದ ಪ್ರಸಿದ್ಧಿಯಾಗಿರುವುದರಿಂದ, ಪ್ರವಾಸಿಗರನ್ನು ಸೆಳೆಯುತ್ತಿದೆ. ಇದರೊಂದಿಗೆ ಎರಡೂ ಜಿಲ್ಲೆಗಳು ಸಿಮೆಂಟ್ ಉದ್ಯಮಗಳು, ಸಕ್ಕರೆ ಬೆಳೆ, ಆಹಾರ ಸಂಸ್ಕರಣೆ ಮತ್ತು ಬೆಳೆಯುತ್ತಿರುವ ವೈನ್ ಉದ್ಯಮಗಳಿಗೆ ಕೇಂದ್ರವಾಗಿದ್ದು, ಆರ್ಥಿಕ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ಎಲ್ಲದರ ಹೊರತಾಗಿಯೂ ಈ ಎರಡು ಜಿಲ್ಲೆಗಳಿಗೆ ರೈಲುಗಳ ಬರ ಈಗಲೂ ಮುಂದುವರಿದಿರುವುದು ಶ್ರೀಮಂತ ಜಿಲ್ಲೆಗಳ ಅಭಿವೃದ್ಧಿಗೆ ತೊಡಕಾಗಿದೆ ಎಂದರೆ ತಪ್ಪಾಗುವುದಿಲ್ಲ.

ವಿಜಯಪುರ ಹಾಗೂ ಬಾಗಲಕೋಟೆಗೆ ರೈಲು ಸಂಪರ್ಕವನ್ನು ನೀಡಲಾಗಿದೆ. ಆದರೆ ನೀಡಿರುವ ಪ್ರಮಾಣವನ್ನು ಸೂಕ್ಷ್ಮವಾಗಿ ಗಮನಿಸಬೇಕಿದೆ. ಈ ಎರಡು ಜಿಲ್ಲೆಗಳಿಂದ ಪ್ರತಿವರ್ಷ ಸಾವಿರಾರು ಯುವಕರು ಕೆಲಸಗಳನ್ನು ಅರಸಿ, ಬೆಂಗಳೂರಿನತ್ತ ಬರುತ್ತಾರೆ. ಆದರೆ ಈ ರೀತಿ ಬಂದು ಹೋಗುವ ಜನರಿಗೆ ರೈಲಿನ ಸಂಪರ್ಕದಲ್ಲಿ ಮಾತ್ರ ಹೇಳಿಕೊಳ್ಳುವಷ್ಟು ಸೌಲಭ್ಯಗಳಿಲ್ಲ, ಅಂದರೆ ಸಾಕಷ್ಟು ಸಂಖ್ಯೆಯ ರೈಲುಗಳಿಲ್ಲ. ಅದರಲ್ಲಿಯೂ 'ವೇಗ'ದ ರೈಲಿನ ಬರ ಈ ಜಿಲ್ಲೆಗೆ ಬಹುದೊಡ್ಡ ಸಮಸ್ಯೆಯಾಗಿದೆ.

ಉದಾಹರಣೆಗೆ ಬೆಂಗಳೂರಿನಿಂದ ವಿಜಯಪುರ, ಬಾಗಲಕೋಟೆಗಿರುವ ರೈಲು ಸಂಪರ್ಕ ಹಾಗೂ ನೆರೆ ಜಿಲ್ಲೆಗಳಿಗಿರುವ ರೈಲುಗಳ ಸಂಖ್ಯೆಯನ್ನು ಸೂಕ್ಷ್ಮವಾಗಿ ಗಮನಿಸಬೇಕಿದೆ. ಬೆಂಗಳೂರು-ವಿಜಯಪುರದ ನಡುವೆ ನಿತ್ಯ ಮೂರು ರೈಲುಗಳು ಸಂಚರಿಸಿದರೆ, ವಿಜಯಪುರದಿಂದ ಬೆಂಗಳೂರಿಗೂ ಮೂರು ರೈಲುಗಳಿವೆ. ಈ ರೈಲುಗಳ ಸರಾಸರಿ ವೇಗ ಗಂಟೆಗೆ 44 ಕಿ.ಮೀ. ಇನ್ನು ಬೆಂಗಳೂರಿನಿಂದ ಬಾಗಲಕೋಟೆಗೆ ಮೂರು ರೈಲುಗಳು ನಿತ್ಯ ಸರಾಸರಿ 42 ಕಿ.ಮೀ ವೇಗದಲ್ಲಿ ಸಂಚರಿಸಿದರೆ, ಬಾಗಲಕೋಟೆಯಿಂದ ಬೆಂಗಳೂರಿಗೆ ಸಾಗುವ ಮೂರು ರೈಲುಗಳು 49 ಕಿ.ಮೀ. ವೇಗದಲ್ಲಿ ಸಂಚರಿಸುತ್ತವೆ. ಈ ಎಲ್ಲ ರೈಲುಗಳು ತಮ್ಮ ಗಮ್ಯಸ್ಥಾನವನ್ನು ತಲುಪಲು ಕನಿಷ್ಠ 13ರಿಂದ 14 ತಾಸು ಪಡೆಯಲಿವೆ (ಮಾರ್ಗಮಧ್ಯೆ ಯಾವುದೇ ಸಮಸ್ಯೆಯಾಗದಿದ್ದರೆ). ಆದರೆ ಬೆಂಗಳೂರಿನಿಂದ ಕಲಬುರ್ಗಿಗೆ 9, ರಾಯಚೂರಿಗೆ 14, ಹುಬ್ಬಳ್ಳಿಗೆ 14 ರೈಲುಗಳಿವೆ. ಈ ಎಲ್ಲ ರೈಲುಗಳ ಸರಾಸರಿ ವೇಗ 68ರಿಂದ 78 ಕಿ.ಮೀ. ಆಗಿದೆ. ಜತೆ ಗಮ್ಯಸ್ಥಾನ ತಲುಪುವ ಸಮಯವೂ ಐದರಿಂದ ಆರು ಗಂಟೆಗೆ ಸೀಮಿತವಾಗಿದೆ. ವಿಜಯಪುರ, ಬಾಗಲಕೋಟೆ ದಾಟಿ ಹೋಗಬೇಕಿರುವ ಕಲಬುರ್ಗಿಗೂ ಏಳೂವರೆ ತಾಸಿನಲ್ಲಿ ರೈಲು ತಲುಪುತ್ತದೆ. ಆದರೆ ವಿಜಯಪುರ, ಬಾಗಲಕೋಟೆಗೆ ಮಾತ್ರ 12 ತಾಸು!

ಅವಳಿ ಜಿಲ್ಲೆಗಳು ಈ ರೀತಿ ರೈಲಿನ ಕೊರತೆ ಅನುಭವಿಸುತ್ತಿರುವುದು ಇತ್ತೀಚಿನ ಸಮಸ್ಯೆ ಏನಲ್ಲ. ದಶಕಗಳಿಂದ ಸೂಕ್ತ ರೈಲು ಸಂಪರ್ಕದ ಕೊರತೆಯಿಂದಾಗಿ ಅವು ತೊಂದರೆ ಅನುಭವಿಸುತ್ತಿವೆ. ಕಚೇರಿ ನಿಮಿತ್ತ ಅಥವಾ ವೈಯಕ್ತಿಕ ಕೆಲಸಕ್ಕೆ ರಾಜಧಾನಿಗೆ ಆಗಮಿಸುವ ಅನೇಕರಿಗೆ, ಇದರಿಂದಾಗಿ ತೀವ್ರ ತೊಂದರೆಯಾಗುತ್ತಿದೆ; ಜಿಲ್ಲೆಯ ಜನರು ಹೆಚ್ಚಿನ ಅನಾನುಕೂಲ ಹಾಗೂ ಆರ್ಥಿಕ ನಷ್ಟವನ್ನು ಅನುಭವಿಸುತ್ತಿದ್ದಾರೆ.

ಈ ಸಮಸ್ಯೆಗೆ ಪರಿಹಾರವೇ ಇಲ್ಲ ಎನ್ನುವಂತೇನಿಲ್ಲ. ಈ ಜಿಲ್ಲೆಗಳ ಪ್ರಯಾಣದ ಅವಧಿ ಹಾಗೂ ರೈಲುಗಳ ಕೊರತೆಯನ್ನು ನೀಗಿಸಲು ಸಾಧ್ಯವಿದೆ. ಇದಕ್ಕಾಗಿ ರೈಲ್ವೇ ಇಲಾಖೆ ಅಥವಾ ಸರಕಾರಗಳು ಹೆಚ್ಚುವರಿ ಅನುದಾನ, ಮೂಲಸೌಕರ್ಯ ಅಥವಾ ಕೋಟ್ಯಂತರ ರುಪಾಯಿ ಹೂಡಿಕೆ ಮಾಡಬೇಕೆಂದಿಲ್ಲ. ಬದಲಿಗೆ ಇಲ್ಲಿ ಬೇಕಿರುವುದು ನೈಋತ್ಯ ರೈಲ್ವೆ ಅಧಿಕಾರಿಗಳ ಆಸಕ್ತಿ ಮತ್ತು ರಾಜಕೀಯ ಇಚ್ಛಾಶಕ್ತಿ ಮಾತ್ರ!

ಹೌದು, ಅನೇಕರಿಗೆ ಇದು ಅಚ್ಚರಿಯಾಗಬಹುದು. ವಿಜಯಪುರದಿಂದ ಬಾಗಲಕೋಟೆ ಮೂಲಕ ಬೆಂಗಳೂರಿಗೆ ವಿಶೇಷ ವೇಗದ ರೈಲು ಸೇವೆಯನ್ನು ಪ್ರಾರಂಭಿಸುವ ಮೂಲಕ, ಗದಗ ಮತ್ತು ಹುಬ್ಬಳ್ಳಿಯ 'ಬಾಟಲ್‌ನೆಕ್'ಗಳನ್ನು ತಪ್ಪಿಸುವ ಮೂಲಕ, ಪ್ರಯಾಣದ ಸಮಯವನ್ನು 10 ಗಂಟೆ ಅಥವಾ ಅದಕ್ಕಿಂತ ಕಡಿಮೆ ಅವಧಿಗೆ ಇಳಿಸಬಹುದು. ಈ ರೈಲುಗಳನ್ನು ಎಲ್ಲ ನಗರಗಳ ಒಳಗೆ ಪ್ರವೇಶಿಸಲು ಬಿಡದೇ, ಬೈಪಾಸ್‌ಗಳ ಮೂಲಕ ಓಡಿಸಿದರೆ, ಪ್ರಯಾಣವನ್ನು ಅತಿ ಕಡಿಮೆ ಸಮಯದಲ್ಲಿ ಮತ್ತು ವೇಗವಾಗಿ ಮಾಡಬಹುದು. ಇದನ್ನು ಮಾಡುವುದರಿಂದ, ಗದಗಕ್ಕೆ ಒಂದು ಸೂಪರ್ ಫಾಸ್ಟ್ ರೈಲು ಹೆಚ್ಚುವರಿಯಾಗಿ ಸಿಕ್ಕಂತಾಗುತ್ತದೆ. ವಿಜಯಪುರ, ಬಾಗಲಕೋಟೆ, ಬಾದಾಮಿ, ಕೂಡಲಸಂಗಮ ಮತ್ತು ರಾಜ್ಯದ ರಾಜಧಾನಿಯ ನಡುವಿನ ನೇರ ಮತ್ತು ವೇಗವಾದ ಸಂಪರ್ಕವನ್ನು ಇದರಿಂದ ಒದಗಿಸಬಹುದು.

ಈ ರೀತಿಯ ಹೆಚ್ಚುವರಿ ಸೇವೆ ಆರಂಭಿಸುವುದರಿಂದ ವಿಜಯಪುರ ಮತ್ತು ಬಾಗಲಕೋಟೆಯಂಥ ಹಿಂದುಳಿದಿರುವ ಜಿಲ್ಲೆಗಳ ಸಂಕಷ್ಟವನ್ನು ನಿವಾರಿಸಿದಂತಾಗುತ್ತದೆ. ಮಾತ್ರವಲ್ಲದೆ, ಆ ಭಾಗಗಳ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಗೂ ಅದು ಸಹಾಯಕವಾಗುತ್ತದೆ. ಸರಕಾರವು ಈ ನ್ಯಾಯಯುತ ಬೇಡಿಕೆಯನ್ನು ಗಮನಿಸಿ, ವಿಜಯಪುರ ಮತ್ತು ಬಾಗಲಕೋಟೆಯ ಜನತೆ ಹಿಂದುಳಿದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಹುಬ್ಬಳ್ಳಿ ಮತ್ತು ಗದಗ ಬೈಪಾಸ್ ರೈಲು ನಿಲ್ದಾಣಗಳು ಕೋಟಿ ಕೋಟಿ ರು. ಹಣದ ವೆಚ್ಚದೊಂದಿಗೆ ನಿರ್ಮಾಣಗೊಂಡರೂ, ನೈಋತ್ಯ ರೈಲು ಮಾರ್ಗವು ಈ ಸೌಲಭ್ಯವನ್ನು ವಿಜಯಪುರ ಮತ್ತು ಬಾಗಲಕೋಟೆ ಎರಡೂ ನಗರಗಳ ವೇಗದ ರೈಲು ಸೇವೆಗಾಗಿ ಬಳಸುತ್ತಿಲ್ಲ. ಎಲ್ಲಾ ರೈಲು ವಲಯಗಳಲ್ಲಿ ಬೈಪಾಸ್‌ಗಳನ್ನು ಬಳಸುವ ಮೂಲಕ ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳ ಪ್ರಯಾಣದ ಸಮಯವನ್ನು ಕಡಿಮೆ ಮಾಡಲಾಗುತ್ತದೆ. ಉದಾಹರಣೆಗೆ, ನೈಋತ್ಯ ರೈಲು ಮಾರ್ಗವು ಯಶವಂತಪುರ ಮತ್ತು ಬೆಂಗಳೂರು ಸಿಟಿ ಜಂಕ್ಷನ್‌ನಂಥ ಮುಖ್ಯ ನಿಲ್ದಾಣಗಳನ್ನು ತಪ್ಪಿಸಿ, ತಮಿಳುನಾಡು ಕಡೆಗೆ ಹೋಗುವ ರೈಲುಗಳಿಗೆ ಬೈಪಾಸ್‌ಗಳನ್ನು ಬಳಸುತ್ತಿದೆ. ಈ ರೀತಿಯ ಲಾಭಗಳಿದ್ದರೂ ವಿಜಯಪುರ ಮತ್ತು ಬಾಗಲಕೋಟೆ ರೈಲುಗಳಿಗಾಗಿ ಇಂಥ ಬೈಪಾಸ್ ಮಾರ್ಗಗಳನ್ನು ಅಳವಡಿಸಿಲ್ಲ, ಇದರಿಂದ ಈ ಪ್ರದೇಶ ವೇಗವಾದ ಮತ್ತು ಪರಿಣಾಮಕಾರಿಯಾದ ರೈಲು ಸಂಪರ್ಕವನ್ನು ಕಳೆದುಕೊಂಡಿದೆ. ಇದರಿಂದಾಗಿ ಪ್ರಾದೇಶಿಕ ಪ್ರಯಾಣದ ದಕ್ಷತೆ ಮತ್ತು ಆರ್ಥಿಕ ಅಭಿವೃದ್ಧಿ ನಿರ್ಲಕ್ಷಿಸಲ್ಪಡುತ್ತಿದೆ. ಇಂಥ ಸರಳ ಕ್ರಮಗಳೊಂದಿಗೆ ಸುಲಭವಾಗಿ ಮತ್ತು ವೇಗವಾಗಿ ರೈಲು ಸೇವೆಗಳನ್ನು ಬಿಜಾಪುರ ಮತ್ತು ಬಾಗಲಕೋಟೆ ಎರಡೂ ನಗರಗಳಿಗೆ ಒದಗಿಸಬಹುದು. ಆದರೆ ನೈಋತ್ಯ ರೈಲ್ವೇ ಹಿಂದೇಟು ಹಾಕುತ್ತಿರುವುದೇಕೆ ಎನ್ನುವ ಪ್ರಶ್ನೆಗಳು ಉದ್ಭವಿಸುತ್ತದೆ. ಅದರಲ್ಲಿಯೂ ಖಾಸಗಿ ಬಸ್‌ಗಳ ಲಾಬಿಗೆ ಮಣಿದು ಈ ಮಾರ್ಗ ಬಳಸುತ್ತಿಲ್ಲವೇ ಎನ್ನುವುದು ಈಗಿರುವ ಬಹುದೊಡ್ಡ ಪ್ರಶ್ನೆ. ಈ ಪ್ರದೇಶದ ಅಭಿವೃದ್ಧಿ ಮತ್ತು ಸಂಪರ್ಕಶೀಲತೆ ಇದರಿಂದಾಗಿ ತೀವ್ರವಾಗಿ ಹಾನಿಗೊಂಡಿದೆ. ಮಾಫಿಯಾದ ಒತ್ತಡಕ್ಕೆ ಮಣಿಯದೇ, ಸಾರ್ವಜನಿಕ ಹಿತಾಸಕ್ತಿ ಮತ್ತು ನ್ಯಾಯವನ್ನು ಕಾಪಾಡಬೇಕು. ಎರಡೂ ನಗರಗಳಿಗೆ ನ್ಯಾಯ ಒದಗಿಸಲು ಹಾಗೂ ಅವುಗಳಿಗೆ ವೇಗವಾದ, ಪರಿಣಾಮಕಾರಿ ರೈಲು ಸಂಪರ್ಕ ಕಲ್ಪಿಸುವ ಮೂಲಕ ಜನರ ಸುಖಸಮೃದ್ಧಿಯ ಕಡೆಗೆ ಗಮನವಿಡಬೇಕಾಗಿದೆ.

ಇನ್ನು ಗೋಲ್‌ಗುಂಬಜ್ ಎಕ್ಸ್‌ಪ್ರೆಸ್ ರೈಲಿನ ವೇಗದ ಬಗ್ಗೆ ಒಮ್ಮೆ ಗಮನಿಸಲೇಬೇಕಾಗಿದೆ. ಬೆಂಗಳೂರು-ವಿಜಯಪುರ ನಡುವೆ ಸಂಚರಿಸುವ ಈ ರೈಲು ಗಮ್ಯಸ್ಥಾನವನ್ನು ತಲುಪಲು 13 ಗಂಟೆ 10 ನಿಮಿಷ ತೆಗೆದುಕೊಳ್ಳುತ್ತದೆ. ಆದರೆ ಅದೇ ರೈಲಿನ ವೇಗವನ್ನು ಸೆಕ್ಷನ್ ಸ್ಪೀಡ್ ಪ್ರಕಾರ ತಾಳೆ ಹಾಕಿದರೆ ಭಾರಿ ವ್ಯತ್ಯಾಸ ಬರಲಿದೆ. ವಿಜಯಪುರ ಹಾಗೂ ಬಾಗಲಕೋಟೆಯಿಂದ ಸಂಚರಿಸುವ ಎರಡೂ ಎಕ್ಸ್‌ಪ್ರೆಸ್ ರೈಲುಗಳ ವೇಗದ ಮಿತಿ 44ರಿಂದ 48 ಕಿ.ಮೀ. ಅಂತರದಲ್ಲಿದೆ. ಇದರೊಂದಿಗೆ ಹುಬ್ಬಳ್ಳಿ ಹಾಗೂ ಗದಗದಲ್ಲಾಗುವ ಎಂಜಿನ್ ರಿವರ್ಸಲ್ ಬಗ್ಗೆ ಉಲ್ಲೇಖಿಸಬೇಕು. ಯಾವುದೇ ಒಂದು ರಿವರ್ಸಲ್ ಆದರೆ ಕನಿಷ್ಠ 45 ನಿಮಿಷ ಅಗತ್ಯವಿದೆ. ಇದರಿಂದ ಇತರೆ ರೈಲುಗಳ ಸಮಯದ ಮೇಲೆ ಪರಿಣಾಮವಾಗುತ್ತದೆ. ಜತೆಗೆ ಗೂಡ್ಸ್ ರೈಲುಗಳನ್ನು ಸಹ ಬೇರೆ ಬೇರೆ ಸ್ಟೇಷನ್‌ಗಳಲ್ಲಿ ನಿಲ್ಲಿಸಬೇಕಾಗುತ್ತದೆ. ಇದರಿಂದ ರೈಲ್ವೆಯ ಗೂಡ್ಸ್ ಗಾಡಿಗಳ ಸದ್ಬಳಕೆ ಮತ್ತು ಮಾನವ ಸಂಪನ್ಮೂಲಗಳು ವ್ಯರ್ಥವಾಗುತ್ತವೆ. ಈಗಾಗಲೇ ಚಾಲ್ತಿಯಲ್ಲಿರುವ ಬೈಪಾಸ್‌ಗಳ ಪರಿಣಾಮಕಾರಿ ಉಪಯೋಗವಾಗದಿದ್ದಾರೆ ಅವುಗಳ ನಿರ್ಮಾಣದಿಂದ ಯಾರಿಗೇನು ಉಪಯೋಗ?

ಆದ್ದರಿಂದ ಇಷ್ಟು ದಿನ ವಿಜಯಪುರ, ಬಾಗಲಕೋಟೆ ಜಿಲ್ಲೆಗಳಿಗೆ ಆಗಿರುವ ಅನ್ಯಾಯವನ್ನು ಈಗಾಲಾದರೂ ಸರಿಪಡಿಸಬೇಕಿದೆ. ವಿಜಯಪುರದ ಸಂಸದ ರಮೇಶ ಜಿಗಜಿಣಗಿ, ಬಾಗಲಕೋಟ ಸಂಸದ ಪಿ.ಸಿ ಗದ್ದಿಗೌಡರ್, ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಬಾಗಲಕೋಟ ಶಾಸಕ ವೀರಣ್ಣ ಚರಂತಿಮಠ, ವಿಜಯಪುರ ಉಸ್ತುವಾರಿ ಎಂ.ಬಿ ಪಾಟೀಲ್ ಅವರು ವೈಯಕ್ತಿಕ ಆಸಕ್ತಿ ವಹಿಸಿ ಈ ಸಮಸ್ಯೆಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಿದೆ.

(ಲೇಖಕರು ಯಕೃತ್ ತಜ್ಞ ವೈದ್ಯರು ಹಾಗೂ ಸಾಮಾಜಿಕ ಚಿಂತಕರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:67, Issue: 124

ಸಮಾಚಾರ ಸಣ್ಣದಲ್ಲ

ಬೆಳೆಹಾನಿ ಪಟ್ಟಿ: ಆಕ್ಷೇಪಣೆಗೆ ಆಹ್ವಾನ

ಹೊಸಪೇಟೆ: ರಾಜ್ಯ ಸರಕಾರವು 16.08.2024 ರಂದು ಹೊರಡಿಸಿದ ಆದೇಶದಂತೆ 2024-25ನೇ ಸಾಲಿನಲ್ಲಿ ನೈಸರ್ಗಿಕ ವಿಕೋಪಗಳಾದ ಪ್ರವಾಹ/ ಅತಿವೃಷ್ಟಿಯಿಂದ ವಿಜಯನಗರ ಜಿಲ್ಲೆಯಲ್ಲಿ ಉಂಟಾದ ಬೆಳೆ ಹಾನಿ ಪರಿಹಾರವನ್ನು ಪಾವತಿಸುವ ಕುರಿತಂತೆ ಬೆಳೆ ಹಾನಿಯಾದ ರೈತರ ಪಟ್ಟಿಯನ್ನು ಜಿಲ್ಲಾಧಿಕಾರಿಗಳ, ಉಪವಿಭಾಗಾಧಿಕಾರಿಗಳ, ತಹಶೀಲ್ದಾರ, ಗ್ರಾಮ ಪಂಚಾಯತಿ ಹಾಗೂ ರೈತ ಸಂಪರ್ಕ ಕೇಂದ್ರಗಳಲ್ಲಿ ಸೆಪ್ಟೆಂಬರ್ 5ರಂದು ಪ್ರಕಟಿಸಲಾಗಿದೆ. ಈ ಕುರಿತು ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಸಂಬಂಧಿಸಿದ ತಹಶೀಲ್ದಾರರ ಅಥವಾ ಕೃಷಿ ಅಥವಾ ತೋಟಗಾರಿಕಾ ಇಲಾಖೆಗಳ ತಾಲೂಕಾ ಕಚೇರಿಗಳಲ್ಲಿ 7 ದಿನಗಳೊಳಗಾಗಿ ಅಂದರೆ ಸೆಪ್ಟೆಂಬರ್ 11ರೊಳಗಾಗಿ ಸಲ್ಲಿಸುವಂತೆ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ (https://vijayanagara.nic.in) ಅಂತರ್ಜಾಲದಲ್ಲಿ ಪರಿಶೀಲಿಸಬಹುದು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಯೋಗಿನಿಗೆ 20ರವರೆಗೆ ಅವಕಾಶ

ಬಳ್ಳಾರಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನ ನಗರ ಶಿಶು ಅಭಿವೃದ್ಧಿ ಯೋಜನೆಯಡಿ ಉದ್ಯೋಗಿನಿ ಯೋಜನೆಗೆ ಅರ್ಜಿ ಆಹ್ವಾನಿಸಲಾಗಿದ್ದು, ಸೆ.20ರೊಳಗಾಗಿ ಅರ್ಜಿ ಸಲ್ಲಿಸಬಹುದು ಎಂದು ಬಳ್ಳಾರಿ ನಗರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಿಳಿಸಿದ್ದಾರೆ. ಮಹಿಳೆಯರಿಗೆ ವ್ಯಾಪಾರ, ಸೇವಾ ಹಾಗೂ ಗುಡಿ ಕೈಗಾರಿಕ ಚಟುವಟಿಕೆಗಳಿಗೆ ಆರ್ಥಿಕ ನೀಡಲು ಉದ್ದೇಶಿಸಲಾಗಿದ್ದು, ಮಹಿಳಾ ಫಲಾನುಭವಿಗಳು ಬೆಂಗಳೂರು ಒನ್, ಕರ್ನಾಟಕ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೇವಿನಗರದ ಶಿಶು ಅಭಿವೃದ್ಧಿ ಯೋಜನೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿಗೆ ಸಂಪರ್ಕಿಸಿ.

ವಾರಕ್ಕೊಮ್ಮೆ ವಿಶೇಷ ರೈಲು ಆರಂಭ

ಹೊಸಪೇಟೆ: ದಸರಾ-ದೀಪಾವಳಿ ಹಬ್ಬದ ಪ್ರಯುಕ್ತ ಓರಿಸ್ಸಾ ರಾಜಧಾನಿ ಭುವನೇಶ್ವರ ಮತ್ತು ಬೆಳಗಾವಿ ನಡುವೆ ಹೊಸಪೇಟೆ ಮಾರ್ಗವಾಗಿ ವಾರಕ್ಕೊಮ್ಮೆ ವಿಶೇಷ ರೈಲು ಆರಂಭಿಸಲಾಗಿದೆ. ರೈಲು ಸಂಖ್ಯೆ 02813 ಪ್ರತಿ ಶನಿವಾರ ಭುವನೇಶ್ವರದಿಂದ ಸಂಜೆ: 7:15ಕ್ಕೆ ತೆರಳಿ ದುವ್ವಾಡ (ವಿಶಾಖಪಟ್ಟಣ), ರಾಜಮಂಡ್ರಿ, ವಿಜಯವಾಡ, ಡೋನ್, ಗುಂಟಕಲ್, ಬಳ್ಳಾರಿ ಮಾರ್ಗವಾಗಿ ಭಾನುವಾರ ರಾತ್ರಿ:7:50ಕ್ಕೆ ಹೊಸಪೇಟೆಗೆ ಆಗಮಿಸಿ ಗದಗ, ಹುಬ್ಬಳ್ಳಿ, ಧಾರವಾಡ ಮಾರ್ಗವಾಗಿ ಬೆಳಗಾವಿಗೆ ಸೋಮವಾರ ಮುಂಜಾನೆ 3:00ಗಂಟೆಗೆ ತಲುಪುತ್ತದೆ. ಹಾಗೂ ರೈಲು ಸಂಖ್ಯೆ :02814 ಪ್ರತೀ ಸೋಮವಾರ ಬೆಳಗ್ಗೆ 7.30ಕ್ಕೆ ಬೆಳಗಾವಿಯಿಂದ ನಿರ್ಗಮಿಸಿ ಅದೇ ಮಾರ್ಗವಾಗಿ ಮಧ್ಯಾಹ್ನ 12:30ಕ್ಕೆ ಹೊಸಪೇಟೆ ಆಗಮಿಸಿ ಬಳ್ಳಾರಿ. ಗುಂತಕಲ್ ಮಾರ್ಗವಾಗಿ ಮಂಗಳವಾರ ಮಧ್ಯಾಹ್ನ:2:30ಕ್ಕೆ ಭುವನೇಶ್ವರ ತಲುಪುತ್ತದೆ. ಈ ರೈಲು ಸಂಚಾರದಿಂದ ಭುವನೇಶ್ವರಕ್ಕೆ ಹತ್ತಿರದಲ್ಲೆ ಇರುವ ವಿಶ್ವಪಾರಂಪರಿಕ ತಾಣವಾದ ಕೋನಾರ್ಕ್ ಸೂರ್ಯದೇವಾಲಯ, ಹಾಗೂ ಪ್ರಸಿದ್ಧ ಪುರಿ ಜಗನ್ನಾಥ ಧಾರ್ಮಿಕ ಕ್ಷೇತ್ರ (ಬಂದರು ನಗರ)ಕ್ಕೆ ನೇರ ಸಂಪರ್ಕ ದೊರೆಯುತ್ತದೆ. ಸೆಪ್ಟಂಬರ್ 9 ರಿಂದ ಡಿಸೆಂಬರ್ 2 ರವರೆಗೆ ಸಂಚರಿಸಲಿದೆ ಎಂದು ರೈಲ್ವೆ ಇಲಾಖೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ ಎಂದು ವಿಜಯನಗರ ರೈಲ್ವೆ ಕ್ರಿಯಾ ಸಮಿತಿ ಕಾರ್ಯದರ್ಶಿ ಮಹೇಶ ಕುಡುತಿನಿ ಮತ್ತು ಜಿ.ಉಮಾಮಹೇಶ್ವರ ತಿಳಿಸಿದ್ದಾರೆ.

ಅರ್ಜಿ ಸಲ್ಲಿಕೆಯ ಅವಧಿ ವಿಸ್ತರಣೆ

ಬಳ್ಳಾರಿ: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧೀನಕ್ಕೆ ಒಳಪಡುವ ಎಲ್ಲಾ ಸಮುದಾಯದ ನಿಗಮದ ವತಿಯಿಂದ ಪ್ರಸಕ್ತ ಸಾಲಿನ ವಿವಿಧ ಯೋಜನೆಗಳ ಸಾಲ ಸೌಲಭ್ಯ ಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸೆ.15ರವರೆಗೆ ವಿಸ್ತರಿಸಲಾಗಿದೆ ಎಂದು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ. ವಿವಿಧ ನಿಗಮಗಳ ಸ್ವಯಂ ಉದ್ಯೋಗ ವೈಯಕ್ತಿಕ ಸಾಲ ಯೋಜನೆ, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ, ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆ (ವ್ಯಾಣಿಜ್ಯ ಬ್ಯಾಂಕ್‌ಗಳ ಸಹಯೋಗದೊಂದಿಗೆ), ಹೊಲಿಗೆ ಯಂತ್ರ ವಿತರಣೆ ಯೋಜನೆ (ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಮಾತ್ರ), ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆಯಡಿ ಅರ್ಜಿಗಳನ್ನು ಆಹ್ವಾನಿ ಸಲಾಗಿದೆ. ಆಸಕ್ತ ಅರ್ಜಿದಾರರು ಕರ್ನಾಟಕ-ಒನ್, ಅಟಲ್-ಜಿ, ಜನಸ್ನೇಹಿ ಕೇಂದ್ರ ಮತ್ತು ನಾಗರೀಕ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಸೇವಾ ಸಿಂಧು ಪೋರ್ಟಲ್‌ನಯಡಿ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಗೋವಿಂದ ಕಾರಜೋಳ} ಸಂಸದ

ಜನತಂತ್ರ ವ್ಯವಸ್ಥೆಯಲ್ಲಿ ನಿಜವಾದ ಪ್ರಮುಖ ಪಾತ್ರ ವಹಿಸುವವರು ಮುದ್ರಣ ಮಾಧ್ಯಮದವರು ಹಾಲು ಹಾಕುವರು, ಪೋಸ್ಟ್ ಮ್ಯಾನ್‌ಗಳ ಸೇವೆಗಿಂತ ತ್ವರಿತವಾಗಿ ಪತ್ರಿಕಾ ವಿತರಕರು ಕೆಲಸ ಮಾಡುತ್ತಿದ್ದಾರೆ.

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಿನ್ನೆಲೆ ಮತ್ತೊಂದು ಸುತ್ತಿನ ಸಿದ್ಧತಾ ಸಭೆ | ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ

15ರಂದು ಪ್ರಜಾಪ್ರಭುತ್ವ ದಿನ ಆಚರಣೆ

ಹೊಸಪೇಟೆ: ಸೆಪ್ಟೆಂಬರ್ 15 ರಂದು ನಿಗದಿಯಾದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ರಾಜ್ಯ ಸರಕಾರದ ನಿರ್ದೇಶನದಂತೆ ವಿಜಯನಗರ ಜಿಲ್ಲೆಯಲ್ಲಿ ನಡೆಸುವ ಮಾನವ ಸರಪಳಿ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್ .ದಿವಾಕರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಹಿನ್ನೆಲೆಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ವಿಜಯನಗರ ಜಿಲ್ಲೆಯಲ್ಲಿ ಈ ಕಾರ್ಯಕ್ರಮವು ಅಚ್ಚುಕಟ್ಟಾಗಿ ನಡೆಯಬೇಕು. ಅಂದು ಕೊಪ್ಪಳ ಜಿಲ್ಲೆಯಿಂದ ಎನ್‌ಎಚ್-50ರ ರಾಷ್ಟ್ರೀಯ ಹೆದ್ದಾರಿ ಮೂಲಕ ವಿಜಯನಗರ ಜಿಲ್ಲೆಯ ಸರಹದ್ದು ಟಿ.ಬಿ.ಡ್ಯಾಮನ ಗಣೇಶ ಗಣೇಶ ದೇವಸ್ಥಾನದಿಂದ ಪ್ರವೇಶವಾಗಲಿದೆ. ಅಲ್ಲಿಂದ ಸಾಯಿಬಾಬಾ ಸರ್ಕಲ್, ಬಸವೇಶ್ವರ ಸರ್ಕಲ್, ಅಪ್ಪು ಸರ್ಕಲ್, ಪುಣ್ಯಮೂರ್ತಿ ಸರ್ಕಲ್, ಮಿರಲಂ ಟಾಕೀಸ್, ಬಳ್ಳಾರಿ ರೋಡ್ ಸರ್ಕಲ್, ಅಲ್ಲಿಂದ ಕಾಲುವೆವರೆಗೆ, ಕಾರಿಗನೂರು, ವಡ್ಡರಹಳ್ಳಿ, ಪಿ. ಕೆ.ಹಳ್ಳಿ, ಬಯಲುವದ್ದಿಗೇರಿ, ಧರ್ಮಸಾಗರ, ಗಾದಿಗನೂರು, ಭುವನಹಳ್ಳಿಯವರೆಗೆ ಮಾನವ ಸರಪಳಿಯನ್ನು ವಿಜಯನಗರ ಜಿಲ್ಲಾ ವ್ಯಾಪ್ತಿಯಲ್ಲಿ ರಚಿಸಲಾಗುತ್ತದೆ ಎಂದು ತಿಳಿಸಿದರು.

ಮಾನವ ಸರಪಳಿ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗಿಯಾಗಬೇಕು. ಈ ಬಗ್ಗೆ ವ್ಯಾಪಕ ಪ್ರಚಾರ ಮಾಡಬೇಕು ಎಂದರು.

ಹೊಸಪೇಟೆ ನಗರ ಹಾಗೂ ಗ್ರಾಮೀಣ ಭಾಗದ ಶಾಲಾ ಕಾಲೇಜು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುವಂತೆ ನೋಡಿಕೊಳ್ಳಲು ಶಾಲಾ ಶಿಕ್ಷಣ ಇಲಾಖೆ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕು. ಆಯಾ ಇಲಾಖೆಗಳಿಗೆ ವಹಿಸಿದ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಬೇಕು ಎಂದು ಸೂಚನೆ ನೀಡಿದರು.

ಪ್ರತಿ 100 ಮೀಟರಗೆ ಒಬ್ಬರಂತೆ ಶಿಕ್ಷಕರು ಅಥವಾ ಸಿಬ್ಬಂದಿಯನ್ನು ಇನ್‌ಚಾರ್ಜ್ ಎಂದು ನಿಯೋಜಿಸಬೇಕು. ತಾಲೂಕುಮಟ್ಟದ ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳು ತಮ್ಮ ತಮ್ಮ ಹಂತದಲ್ಲಿ ಸಭೆಗಳನ್ನು ನಡೆಸಿ ಸಿದ್ಧತೆ ಮಾಡಿಕೊಳ್ಳಬೇಕು. ವಿಜಯನಗರ ಜಿಲ್ಲೆಯಲ್ಲಿ ಅಂದು ಬೆಳಗ್ಗೆ ಸರಿಯಾದ ಸಮಯಕ್ಕೆ ಕಾರ್ಯಕ್ರಮ ಆರಂಭವಾಗಬೇಕು. ಸುಮಾರು 50 ಕಿ.ಮೀ ಮಾನವ ಸರಪಳಿ ನಿರ್ಮಿಸಲು ರೂಟ್ ಮ್ಯಾಪ್ ರಚಿಸಬೇಕು ಎಂದು ತಿಳಿಸಿದರು.

ಸೆಪ್ಟೆಂಬರ್ 15 ಭಾನುವಾರ ಬರಲಿದೆ. ಆದ್ದರಿಂದ ವಿದ್ಯಾರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಲು ಖಾಸಗಿ ಶಾಲೆಗಳ ಬಸ್‌ಗಳನ್ನು ಬಳಸಿಕೊಳ್ಳಲು ಆರ್‌ಟಿಓ ಅಧಿಕಾರಿಗಳು ಕ್ರಮವಹಿಸಬೇಕು ಎಂದು ಸೂಚನೆ ನೀಡಿದರು.

ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಪ್ರತಿ ತಾಲೂಕಿಗೆ 1 ಲಕ್ಷ ರು.ನಂತೆ ಎಲ್ಲ ತಾಲೂಕುಗಳಿಗೆ ಒಟ್ಟು 6 ಲಕ್ಷ ರು.ಅನುದಾನ ನೀಡಲಾಗುತ್ತದೆ. ಈ ಅನುದಾನದಲ್ಲಿ ಡಿಸೆಲ್ ವೆಚ್ಚ ಭರಿಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಇ ಬಾಲಕೃಷ್ಣ, ಸಹಾಯಕ ಆಯುಕ್ತರಾದ ವಿವೇಕಾನಂದ ಪಿ., ಜಿಲ್ಲಾ ಪಂಚಾಯತ್‌ನ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಮಂಜುನಾಥ, ಕೃಷಿ ಇಲಾಖೆಯ ಜಂಟಿ ನಿರ್ದೇಶಕಾರದ ಶರಣಪ್ಪ ಮುದಗಲ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮನೋಹರ, ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ಪ್ರಭುಲಿಂಗ ಎಸ್.ತಳಿಕೆರೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ರಾಮಚಂದ್ರಪ್ಪ ಕೆ.ಬಿ., ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಶಾಶುಮೊದ್ದೀನ್, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ಸಾರ್ವಜನಿಕರಲ್ಲಿ ಮನವಿ

ಸೆಪ್ಟೆಂಬರ್ 15 ರಂದು ವಿಜಯನಗರ ಜಿಲ್ಲೆಯಲ್ಲಿ ನಿಗದಿಯಾದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಮಾನವ ಸರಪಳಿ ಕಾರ್ಯಕ್ರಮವು ಸಂವಿಧಾನದ ಗೌರವ ಮತ್ತು ಘನತೆಯನ್ನು ಹೆಚ್ಚಿಸಲಿದೆ. ಜಿಲ್ಲೆಯ ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಸ್ವ-ಇಚ್ಛೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಬೇಕು ಎಂದು ಡಿಸಿ ಎಂ.ಎಸ್.ದಿವಾಕರ ಮನವಿ ಮಾಡಿದರು.

ಭವಿಷ್ಯದ ದೇಶ ಕಟ್ಟುವಲ್ಲಿ ಶಿಕ್ಷಕರ ಪಾತ್ರ ಅಮೂಲ್ಯ: ಶಾಸಕ

ಬಳ್ಳಾರಿ: ಭವಿಷ್ಯದ ದೇಶ ಕಟ್ಟಲು ಮಕ್ಕಳನ್ನು ಒಳ್ಳೆಯ ದಾರಿಯಲ್ಲಿ ಮುನ್ನಡೆಸಬೇಕೆಂದರೆ ಶಿಕ್ಷಕರ ಪಾತ್ರ ಅಮೂಲ್ಯವಾಗಿದೆ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ಜಿಲ್ಲಾಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾದ 13 ಶಿಕ್ಷಕರನ್ನು ಸನ್ಮಾನಿಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ರವರ 136 ನೇ ಜನ್ಮದಿನಾಚರಣೆ ಅಂಗವಾಗಿ ನಗರದ ನಲ್ಲಚೇರುವು ಪ್ರದೇಶದ ಜಿಲ್ಲಾ ಕ್ರೀಡಾಂಗಣ ರಸ್ತೆಯ ಮಹರ್ಷಿ ಶ್ರೀ ವಾಲ್ಮೀಕಿ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕರ ಪ್ರಶಿಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಒಂದು ದೇಶದ ಭವಿಷ್ಯ ಅರಳುವುದು ನಾಲ್ಕು ಗೋಡೆಗಳ ಮಧ್ಯದ ಮಕ್ಕಳ ಶಿಕ್ಷಣದಲ್ಲಿ. ಶಿಕ್ಷಕರು ದೈವ ಸ್ವರೂಪಿಗಳು. ದೇಶದ ಅಭಿವೃದ್ಧಿಯ ಪಥ ಶಿಕ್ಷಕರ ಕೈಯಲ್ಲಿದೆ, ಅವರ ಮಾರ್ಗದರ್ಶನದ ಪ್ರೇರಣೆಯಿಂದ ಮಾತ್ರ ಮನುಷ್ಯನು ಉನ್ನತ ಸ್ಥಾನಕ್ಕೆ ಬೆಳೆಯಲು ಸಾಧ್ಯ ಎಂದರು.

ಜಿಲ್ಲೆಯಲ್ಲಿ ಬಹುದಿನಗಳ ಬೇಡಿಕೆಯಾದ ಗುರು ಭವನ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಜಿಲ್ಲಾಧಿಕಾರಿಗಳ ಜೊತೆ ಚರ್ಚಿಸಲಾಗುವುದು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಮಾತನಾಡಿ, ಶಿಕ್ಷಕರು ಮಕ್ಕಳನ್ನು ಕೂಡ ತಮ್ಮ ಮಕ್ಕಳಂತೆ ಭಾವಿಸಿ ಶಿಕ್ಷಣ ನೀಡುವುದು ಶ್ಲಾಘನೀಯ ಕಾರ್ಯವಾಗಿದೆ. ಅಜ್ಞಾನದಿಂದ ಜ್ಞಾನದ ಕಡೆಗೆ ಕೊಂಡೊಯ್ಯಲು ಶಿಕ್ಷಕರ ಶ್ರಮ ಪ್ರಮುಖವಾದುದು ಎಂದು ಹೇಳಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಬಿ. ಉಮಾದೇವಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಮಹಾನ್ ವ್ಯಕ್ತಿಗಳ ಜನ್ಮದಿನಾಚರಣೆಗಳನ್ನು ವಿಶಿಷ್ಟ ಹಾಗೂ ಆದರ್ಶ ದಿನವನ್ನಾಗಿ ಆಚರಿಸಲಾಗುತ್ತದೆ. ಅದರಲ್ಲಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆ ಸವಿನೆನಪಿಗಾಗಿ ಶಿಕ್ಷಕರ ದಿನಾಚರಣೆ ಮತ್ತು ಜವಾಹರಲಾಲ್ ನೆಹರು ಅವರ ಜನ್ಮದಿನದ ಅಂಗವಾಗಿ ಮಕ್ಕಳ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ ಎಂದರು.

ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕರ ಪ್ರಶಿಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮ ನಗರ ಶಾಸಕ ನಾರಾ ಭರತ್ ರೆಡ್ಡಿ ಉದ್ಘಾಟಿಸಿದರು.

ಪ್ರಸ್ತುತದಲ್ಲಿನ ಶಿಕ್ಷಣದ ಸವಾಲುಗಳನ್ನು ಎದುರಿಸಿ, ಮಕ್ಕಳಿಗೆ ಗುಣಮಟ್ಟ ಶಿಕ್ಷಣ ನೀಡಬೇಕು. ಮಕ್ಕಳನ್ನು ಮುಖ್ಯವಾಹಿನಿಗೆ ತರಲು ನೈತಿಕ ಮೌಲ್ಯಗಳು, ಸಾಮಾಜಿಕ ಪಿಡುಗುಗಳ ಬಗ್ಗೆ ಅರಿವು ಮೂಡಿಸುವಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗಿದೆ ಎಂದರು.

ಕೆಪಿಎಸ್‌ನ ಸಮಾಜಶಾಸ್ತ್ರ ಉಪನ್ಯಾಸಕ ಡಾ.ಯು. ಶ್ರೀನಿವಾಸಮೂರ್ತಿ ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ದೀಪ(ಹಣತೆ) ತಾನು ಉರಿದು ಬೆಳಕು ನೀಡುತ್ತದೆ, ಅದೇರೀತಿಯಾಗಿ ಶಿಕ್ಷಕರು ತಾವು ಶ್ರಮಪಟ್ಟು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿ ಆದರ್ಶ ಜೀವನ ರೂಪಿಸುತ್ತಾರೆ ಎಂದು ಹೇಳಿದರು.

ಜಿಲ್ಲೆಯಲ್ಲಿ 1 ರಿಂದ 7 ತರಗತಿ ವಿದ್ಯಾರ್ಥಿಗಳಿಗೆ ಕಲಿಕಾ ಆಂದೋಲನ ಕಾರ್ಯಕ್ರಮದಡಿ ಶಿಕ್ಷಕರಿಗೆ ಕಾರ್ಯಾಗಾರ ನಡೆಸಿ, ಕಠಿಣ ವಿಷಯಗಳ ಅರ್ಥೈಸುವಿಕೆ ಕುರಿತು ಕಾರ್ಯಯೋಜನೆ ಕೈಗೊಳ್ಳಲಾಗುತ್ತಿದೆ. ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಜಿಲ್ಲೆಯನ್ನು ಮುಂಚೂಣಿಯಲ್ಲಿರಿಸಲು ಶಿಕ್ಷಕರರು ಶ್ರಮವಹಿಸಬೇಕು ಎಂದು ಕಿವಿಮಾತು.

-ಭರತ್ ರೆಡ್ಡಿ, ಶಾಸಕ

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್, ಉಪಮೇಯರ್ ಡಿ.ಸುಕುಂ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚಿದಾನಂದಪ್ಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ರಾಜ್ಯ ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಶಿವಾಜಿರಾವ್ ಸೇರಿದಂತೆ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ಮಕ್ಕಳ ಭವಿಷ್ಯ ರೂಪಿಸಲು ಶಿಕ್ಷಕರ ಪಾತ್ರ ಮಹತ್ವ

ಹೊಸಪೇಟೆ: ಮಕ್ಕಳು ಮಣ್ಣಿನ ಮುದ್ದೆ ಇದ್ದಂತೆ ಅವರನ್ನು ಸುಂದರ ಮೂರ್ತಿಗಳನ್ನಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ತರವಾಗಿದೆ ಎಂದು ಸರಕಾರಿ ಬಾಲಕಿಯರ ಪ್ರೌಢಶಾಲಾ ಎಸ್ಡಿಎಂಸಿ ಅಧ್ಯಕ್ಷರು ಹಾಗೂ ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಚೇರ್ಮನರಾದಾ ಎಚ್ ಶ್ರೀನಿವಾಸರಾವ್ ತಿಳಿಸಿದರು.

ನಗರದ ಸರಕಾರಿ ಬಾಲಕಿಯರ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ರವರ ಜನ್ಮ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಉತ್ತಮ ಸಮಾಜ ನಿರ್ಮಾತೃಗಳು ಹಾಗೂ ಭಾರತದ ಭದ್ರ ಭವಿಷ್ಯದ ನಿರ್ಣಾಯಕರಾಗಿ ಶಿಕ್ಷಕರ ಸೇವೆ ಅಗ್ರಮಾನ್ಯ, ಮಕ್ಕಳ ಉಜ್ವಲ ಭವಿಷ್ಯ ರೂಪಿಸುವ ಗುರುತರ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಶಾಲೆಯ ಉಪ ಪ್ರಾಂಶುಪಾಲರಾದ ವೆಂಕಟೇಶ್ ಕುಲಕರ್ಣಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರಸಕ್ತ ಸಾಲಿನ ಎಸ್.ಎಸ್.ಎಲ್‌ಸಿ ಫಲಿತಾಂಶ ಸುಧಾರಣೆಗೆ ಹಾಗೂ ಶಾಲೆಯ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ, ಉತ್ತಮ ಶಿಕ್ಷಕ ವರ್ಗವು ಶಾಲೆಯ ಏಳ್ಗೆಗಾಗಿ ಅವಿರತ ಶ್ರಮಿಸುತ್ತಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಪಡೆದ ಸದರಿ ಶಾಲೆಯ ಗಣಿತ ಶಿಕ್ಷಕರಾದ ಸುಧಾಕರ್ ವರಿಗೆ ಶಾಲಾ ಎಸ್‌ಡಿಎಂಸಿ ವತಿಯಿಂದ ಸನ್ಮಾನಿಸಿ ಗೌರವವನ್ನು ಸಮರ್ಪಿಸಲಾಯಿತು.

ರೆಡ್ ಕ್ರಾಸ್ ನ ಜಿಲ್ಲಾ ಪ್ರತಿನಿಧಿ ರೇಖಾ ಪ್ರಕಾಶ್, ಜಿಲ್ಲಾ ಕಾರ್ಯದರ್ಶಿ ಅನ್ನಪೂರ್ಣ ಸದಾಶಿವಾ, ಎಸ್ಡಿಎಂಸಿ ಸದಸ್ಯೆ ಶೋಭಾ, ಶಿಕ್ಷಕರಾದ ಗಾಯಿತ್ರಿ ಜ್ಯೋತಿ ನಾಯಕ್, ಕುಸುಮ ,ಶಿವಮ್ಮ, ತಿಮ್ಮಪ್ಪ, ಸುಧಾಕರ , ರಮಿಜಾಬಿ, ನಾಗರತ್ನ ರಾಜಶೇಖರ್, ಮಂಜುನಾಥ್ ಹಾಗೂ ಇತರರು ಇದ್ದರು.

ಸೊಳ್ಳೆ ಉತ್ಪತ್ತಿ ತಾಣ ನಿರ್ಮೂಲನೆಗೊಳಿಸಿ

ಬಳ್ಳಾರಿ: ಸಾರ್ವಜನಿಕರು ತಮ್ಮ ಮನೆಯ ಸುತ್ತಮುತ್ತಲಿನ ಪರಿಸರದ ನೀರು ಸಂಗ್ರಹಾರಕಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವ ಮೂಲಕ ಸೊಳ್ಳೆ ಉತ್ಪತ್ತಿ ತಾಣಗಳನ್ನು ನಿರ್ಮೂಲನೆಗೊಳಿಸಿ ಅನಾರೋಗ್ಯದಿಂದ ದೂರವಿರಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ವಿಭಾಗ, ಗುಗ್ಗರಹಟ್ಟಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಆಶ್ರಯದಲ್ಲಿ ಡೆಂಘೀ ಹರಡುವ ಈಡೀಸ್ ಲಾರ್ವಾ ನಿರ್ಮೂಲನಾ ದಿನದ ಅಂಗವಾಗಿ ಬಂಡಿಮೋಟ್ ಪ್ರದೇಶದಲ್ಲಿನ ಮನೆಗಳಿಗೆ ಭೇಟಿ ನೀಡಿ ಮಾತನಾಡಿದರು.

ನೀರು ಸಂಗ್ರಹಿಸುವ ಡ್ರಮ್, ಬ್ಯಾರೆಲ್, ಕಲ್ಲಿನದೋಣಿ, ಸಿಮೆಂಟ್ ತೊಟ್ಟಿ ಮುಂತಾದವುಗಳಲ್ಲಿ ಕಂಡುಬರುವ ಬಾಲದ ಹುಳುವನ್ನು ನಿರ್ಲಕ್ಷ್ಯ ಮಾಡಬಾರದು. 7 ದಿನಗಳಲ್ಲಿ ಸೊಳ್ಳೆಯಾಗಿ ಡೆಂಘೀ ರೋಗ ಹರಡುವ ಈಡೀಸ್ ಸೊಳ್ಳೆಯ ಮರಿಯಾಗುತ್ತವೆ ಎಂದರು.

ಸಾರ್ವಜನಿಕರು ತಮ್ಮ ಮನೆಗೆ ಬಳಕೆಗಾಗಿ ನೀರು ತುಂಬುವ ಎಲ್ಲಾ ಪರಿಕರಗಳನ್ನು ವಾರಕ್ಕೊಮ್ಮೆ ತೊಳೆದು, ಒಣಗಿಸಿ ನೀರು ತುಂಬಿದ ನಂತರ ಸರಿಯಾಗಿ ಮುಚ್ಚಳ ಮುಚ್ಚುವ ಮೂಲಕ ರೋಗ ನಿಯಂತ್ರಿಸಬೇಕು ಎಂದರು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಆರ್ ಅಬ್ದುಲ್ಲಾ ಮಾತನಾಡಿ, ಸಾರ್ವಜನಿಕರು ಡೆಂಘೀ ಕಾಯಿಲೆಗೆ ಕಂಡುಬರುವ ಲಕ್ಷಣಗಳಾದ ಜ್ವರ, ಕಣ್ಣು ಕೆಂಪಾಗುವಿಕೆ, ತಲೆನೋವು, ಗಂಧೆಗಳು, ಕೀಲುಗಳಲ್ಲಿ ನೋವು, ಸ್ನಾಯುಗಳಲ್ಲಿ ನೋವು ಕಂಡುಬಂದಲ್ಲಿ ತಕ್ಷಣವೇ ಹತ್ತಿರದ ಆಸ್ಪತ್ರೆಗೆ ತಪ್ಪದೇ ಭೇಟಿ ನೀಡಿ ವೈದ್ಯರ ಸಲಹೆ ಮೇರೆಗೆ ಅಗತ್ಯ ಔಷದೋಪಚಾರವನ್ನು ಕೈಗೊಳ್ಳಬೇಖು ಎಂದರು.

ಇತ್ತೀಚೆಗೆ ರಾಜ್ಯ ಸರಕಾರವು ಡೆಂಗ್ಯೂ ಜ್ವರವನ್ನು ಸಾಂಕ್ರಾಮಿಕ ಕಾಯ್ದೆಗೆ ಒಳಪಡಿಸಿದ್ದು, ಈಡೀಸ್ ಸೊಳ್ಳೆಗಳ ಲಾರ್ವಾ ಉತ್ಪತ್ತಿ ತಾಣಗಳನ್ನು ನಿರ್ಲಕ್ಷ್ಯವಹಿಸಿದರೆ 200 ರೂ.ಗಳಿಂದ 2000 ರು.ಗಳ ವರೆಗೆ ದಂಡ ವಿಧಿಸುವ ಕಾನೂನು ಜಾರಿಗೆ ತಂದಿದೆ.

-ಡಾ.ಆರ್ ಅಬ್ದುಲ್ಲಾ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ

ಹೆಚ್ಚು ದಿನಗಳ ಕಾಲ ನೀರು ಸಂಗ್ರಹವಿರುವ ಸ್ಥಳಗಳಲ್ಲಿ ಗಪ್ಪಿ ಮತ್ತು ಗಾಂಬೋಷಿಯ ಮೀನುಗಳನ್ನು ಬಿಡಲು ಅವಕಾಶವಿದ್ದು, ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಮೀನುಗಳನ್ನು ಪಡೆದು ನೀರಿನ ತಾಣಗಳಲ್ಲಿ ಬಿಡಲು ಹಾಗೂ ಮನೆಯ ಮುಂದೆ ಸ್ವಚ್ಛಗೊಳಿಸಲಾಗದ ನೀರಿನ ಪರಿಕರಗಳಿಗೆ ಟೆಮಿಫಾಸ್ ದ್ರಾವಣವನ್ನು ತಮ್ಮ ಮನೆಗೆ ಆರೋಗ್ಯ ಇಲಾಖೆಯ ಸಿಬ್ಬಂದಿಯವರು ಭೇಟಿ ನೀಡಿದಾಗ ಹಾಕಿಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕೀಟಶಾಸ್ತ್ರಜ್ಞೆ ನಂದಾ ಕಡಿ, ವೈದ್ಯಾಧಿಕಾರಿ ಡಾ.ಶಗುಪ್ತಾ ಶಾಹಿನ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್.ದಾಸಪ್ಪನವರ, ಸಿಬ್ಬಂದಿಗಳಾದ ನಿರಂಜನ್, ಯರ್ರಿಸ್ವಾಮಿ, ಉಮಾ ಮಹೇಶ್ವರಿ, ಅರುಣಾ, ಆರ್.ಕೆ ನರ್ಸಿಂಗ್ ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಹಾಜರಿದ್ದರು.

ಸ್ಪರ್ಧಾತ್ಮಕ ಯುಗ ಮಕ್ಕಳಿಗೆ ಸ್ಫೂರ್ತಿ ಆಗಲಿ

ಹರಪನಹಳ್ಳಿ: ಇತ್ತಿಚ್ಚಿನ ದಿನಗಳಲ್ಲಿ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳ ಸೃಜನಶೀಲ ವ್ಯಕ್ತಿಯ ಶೈಕ್ಷಣಿಕ ಏಳಿಗೆಗೆ ಶಿಕ್ಷಕರ ಪಾತ್ರ ಮಹತ್ವದ್ದು ಎಂದು ಇಲ್ಲಿಯ ಕಂದಾಯ ಉಪವಿಭಾಗಾಧಿಕಾರಿ ಚಿದಾನಂದಗುರುಸ್ವಾಮಿ ಹೇಳಿದ್ದಾರೆ.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದ ಆವರಣದಲ್ಲಿ ಶಿಕ್ಷಕರ ಸಂಘಟನೆ ಹಾಗೂ ಇತರ ಸಂಘಟನೆಗಳ ಆಶ್ರಯದಲ್ಲಿ ಶಾಲಾ ಶಿಕ್ಷಣ ಇಲಾಖೆ ಡಾ.ಸರ್ವಪಲ್ಲಿ ರಾಧಕೃಷ್ಣ ರವರ ಜನ್ಮದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಭಾರತೀಯ ಪರಂಪರೆಯಲ್ಲಿ ಗುರುಗಳಿಗೆ ವಿಶಿಷ್ಟ ಸ್ಥಾನವಿದೆ ಎಂದ ಅವರು ತಾಲೂಕಿನಲ್ಲಿ ಈ ಬಾರಿ ಎಸ್ಸೆಸ್ಸೆಲ್ಸಿ ಪಲಿತಾಂಶ ಹೆಚ್ಚಿಸುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು.ಶಾಸಕರು ಶೈಕ್ಷಣಿಕ ಅಭಿವೃದ್ದಿಗೆ ಹೆಚ್ಚಿನ ಒತ್ತು ನೀಡಿದ್ದಾರೆ ಎಂದು ಹೇಳಿದರು.

ಪುರಸಭಾ ಹಿರಿಯ ಸದಸ್ಯ ಎಂ.ವಿ. ಅಂಜಿನಪ್ಪ ಮಾತನಾಡಿ ಸಮ ಸಮಾಜ ನಿರ್ಮಾಣ ಮಾಡುವಲ್ಲಿ ಶಿಕ್ಷಕರ ಪಾತ್ರ ಬಹುದೊಡ್ಡದು ,ತಾಲೂಕಿನಲ್ಲಿ ಶಾಲೆಗಳ ಮೂಲ ಸೌಕರ್ಯ ನೀಗಿಸಲು ಶಾಸಕರು ಒತ್ತು ನೀಡಿದ್ದಾರೆ ಎಂದು ಹೇಳಿದರು.

ಕ್ಷೇತ್ರಶಿಕ್ಷಣಾಧಿಕಾರಿ ಎಚ್.ಲೇಪಾಕ್ಷಪ್ಪ ಮಾತನಾಡಿ ಪ್ರಸಕ್ತ ವರ್ಷ ಎಸ್ಸೆಸ್ಸೆಲ್ಸಿ ಪಲಿತಾಂಶ ಹೆಚ್ಚಿಸಲು ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ, ಶೇ.85 ಕ್ಕೂ ಹೆಚ್ಚು ಪಲಿತಾಂಶ ಪಡೆಯಲು ಗುರಿ ಹೊಂದಿದ್ದೇವೆ ಎಂದ ಅವರು ಒಟ್ಟಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ನೀಡಲು ಎಲ್ಲಾ ರೀತಿಯ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು.

ನಿವೃತ್ತ ಬಿಇಒ ಬಸವರಾಜಪ್ಪ ರವರಿಗೆ ವಿಶೇಷ ಸನ್ಮಾನ ನೀಡಿ ಗೌರವಿಸಲಾಯಿತು. ವೇದಿಕೆ ಕಾರ್ಯಕ್ರಮಕ್ಕೂ ಪೂರ್ವದಲ್ಲಿ ಬಿಇಒ ಕಚೇರಿ ಬಳಿಯಿಂದ ರಾದಕೃಷ್ಣನ್ ಭಾವಚಿತ್ರ ವನ್ನು ಟ್ರಾಕ್ಟರ್‌ನಲ್ಲಿ ಇಟ್ಟುಕೊಂಡು ಮೆರವಣಿಗೆ ಮೂಲಕ ಶಿಕ್ಷಕರು ತರಳ ಬಾಳು ಕಲ್ಯಾಣ ಮಂಟಪದ ಕಾರ್ಯಕ್ರಮದ ಸ್ಥಳಕ್ಕೆ ಆಗಮಿಸಿದರು.

ತಾ.ಪಂ ಇಒ ಚಂದ್ರಶೇಖರ, ಪುರಸಭಾ ಸದಸ್ಯರಾದ ಲಾಟಿದಾದಾಪೀರ, ಉದ್ದಾರ ಗಣೇಶ, ಜಾಕೀರ ಹುಸೇನ್, ಕ್ಷೇತ್ರಸಮನ್ವಯಾಧಿಕಾರಿ ಹೊನ್ನತ್ತೆಪ್ಪ,ಅಕ್ಷರ ದಾಸೋಹದ ನಿರ್ದೇಶಕ ನಾಗರಾಜ,ದೈಹಿಕ ಶಿಕ್ಷಣ ಪರಿವೀಕ್ಷಕ ಷಣಮೂಖಪ್ಪ, ಶಿಕ್ಷಕರ ಸಂಘದ ಜಿಲ್ಲಾದ್ಯಕ್ಷ ಬಸವರಾಜ ಸಂಗಪ್ಪನವರ್, ರಾಜ್ಯ ಉಪಾದ್ಯಕ್ಷೆ ಜಿ.ಪದ್ಮಲತಾ, ನೌಕರರ ಸಂಘದ ಅಧ್ಯಕ್ಷ ಎಸ್.ರಾಮಪ್ಪ, ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಬಿ.ರಾಜಶೇಖರ, ಶಿಕ್ಷಕರ ಪತ್ತಿನ ಸಂಘದ ಅಧ್ಯಕ್ಷ ಬಿ.ಚಂದ್ರಮೌಳಿ ಉಪಸ್ಥಿತರಿದ್ದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದ ಆವರಣದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು. ಎಸಿ ಚಿದಾನಂದಗುರುಸ್ವಾಮಿ, ಬಿಇಒ ಲೇಪಾಕ್ಷಪ್ಪ, ಎಂ.ವಿ.ಅಂಜಿನಪ್ಪ, ಬಸವರಾಜ ಸಂಗಪ್ಪನವರ್ ಇದ್ದರು.

ಹಿತ ಬಯಸುವ ಉಜ್ಜಯಿನಿ ಪೀಠ

ಕೊಟ್ಟೂರು: ಸಮಾಜದ ಪ್ರತಿಯೊಂದು ಸಮುದಾಯದ ಜನರ ಹಿತ ಬಯಸುತ್ತಾ ಬಂದಿರುವ ಉಜ್ಜಯಿನಿಯ ಸದ್ಧರ್ಮ ಪೀಠ ಅಂದಿನ ದಿನಗಳಲ್ಲಿಯೇ ಅಕ್ಷರ ದಾಸೋಹ ಕ್ರಾಂತಿ ಮಾಡಿ ಅನೇಕರ ಶಿಕ್ಷಣಕ್ಕೆ ದಾರಿ ಮಾಡಿದೆ ಎಂದು ಸಂಸದ ಈ.ತುಕಾರಾಂ ಹೇಳಿದರು. ತಾಲೂಕಿನ ಉಜ್ಜಯಿನಿ ಸದ್ಧರ್ಮ ಮಹಾ ಸಂಸ್ಥಾನದಲ್ಲಿ ಶ್ರಾವಣ ಮಾಸ ಪ್ರಯುಕ್ತ ನಡೆದ ಶ್ರೀ ಪೀಠದ ಜಗದ್ಗುರುಗಳ ಪೂಜಾ ಅನುಷ್ಠಾನ ಹಾಗೂ ಪುರಾಣ ಮಹಾಮಂಗಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ಇಂದಿನ ದಿನಗಳಲ್ಲಿ ಉಜ್ಜಯಿನಿ ಪ್ರಮುಖ ಧಾರ್ಮಿಕ ಕ್ಷೇತ್ರವಾಗಿ ಗುರುತಿಸಿಕೊಂಡಿದ್ದು, ಇಲ್ಲಿಗೆ ಆಗಮಿಸುವ ಸಕಲ ಭಕ್ತಾದಿಗಳಿಗೆ ಎಲ್ಲ ಅಗತ್ಯ ಮೂಲ ಸೌಕರ್ಯ ಕಲ್ಪಿಸುವುದು ಜನಪ್ರತಿನಿಧಿಗಳ ಕರ್ತವ್ಯವಾಗಿದೆ ಎಂದರು. ಒಂದು ಸಾವಿರ ಆಸನದ ಸುಸಜ್ಜಿತ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಕಲ್ಪಿಸುವೆ. ಅಲ್ಲದೇ ಕೂಡ್ಲಿಗಿ ಉಜ್ಜಯಿನಿ ಮಾರ್ಗದ ರಸ್ತೆ ನಿರ್ಮಾಣ ಕಾಮಗಾರಿಗೆ ಕೆಲವೇ ದಿನಗಳಲ್ಲಿ ಚಾಲನೆ ನೀಡುತ್ತೇನೆ. ಶ್ರೀ ಪೀಠದ ಜಗದ್ಗುರುಗಳ ಕೃಪಾಶೀರ್ವಾದಿಂದ ಸಂಸ್ಥಾನದಲ್ಲಿ ಶ್ರೀ ಸ್ವಾಮಿ ದರ್ಶನಕ್ಕೆ ಆಗಮಿಸುವ ಭಕ್ತರಿಗೆ ವಸತಿ, ಪ್ರಸಾದ ವ್ಯವಸ್ಥೆ ಉತ್ತಮವಾಗಿ ಮುಂದುವರೆದಿದೆ. ಸಂಸದನಾಗಿ ಶ್ರೀ ಪೀಠದ ಅಭಿವೃದ್ಧಿಗೆ ಸದಾ ಮುಂದೆ ಇರುತ್ತೇನೆ ಎಂದು ಹೇಳಿದರು

ಮಾನವ ಸರಪಳಿ ಕಾರ್ಯಕ್ರಮಕ್ಕೆ ಕೈ ಜೋಡಿಸಿ

ಹರಪನಹಳ್ಳಿ: ದಿನಾಚರಣೆ ನಿಮಿತ್ತ, ಸೆ.15 ರಂದು ನಡೆಯಲಿರುವ ದೇಶದಲ್ಲಿ ಪ್ರಥಮ ಬಾರಿಗೆ ಅಂತರಾಷ್ಟೀಯ ಪ್ರಜಾಪ್ರಭುತ್ವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಈ ಒಂದು ಕಾರ್ಯಕ್ರಮಕ್ಕೆ ಜಿಲ್ಲೆಯ ಗಡಿ ಭಾಗದ ಸಾರ್ವಜನಿಕರು ವಿದ್ಯಾರ್ಥಿಗಳು ಎಲ್ಲಾರೂ ಸೇರಿ ಮಾನವ ಸರಪಳಿ ಕಾರ್ಯಕ್ರಮವನ್ನು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ತಹಶೀಲ್ದಾರ ಗಿರೀಶಬಾಬು ಕರೆ ನೀಡಿದರು.

ಪಟ್ಟಣದ ತಾಲೂಕು ಪಂಚಾಯಿತಿಯ ರಾಜೀವಗಾಂಧಿ ಸಭಾಂಗಣದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿಜಯನಗರ ಜಿಲ್ಲೆಯ ಗಡಿಭಾಗದವರೆಗೆ ಸುಮಾರು 50 ಕಿ.ಮೀ.ಉದ್ದದ ಮಾನವ ಸರಪಳಿ ಕಾರ್ಯಕ್ರಮವನ್ನು ಜಿಲ್ಲಾಡಳಿತ ಹಮ್ಮಿಕೊಂಡಿದ್ದು ಇದರ ಅಂಗವಾಗಿ ಹರಪನಹಳ್ಳಿ ತಾಲೂಕಿನಿಂದ ಜಿಲ್ಲೆಯ ಗಡಿಭಾಗವಾದ ವಡ್ಡರಹಳ್ಳಿಯಿಂದ ಪಿ.ಕೆ.ಹಳ್ಳಿಯವರೆಗೂ ಸುಮಾರು 4ಕಿ.ಮೀ.ದೂರದವರೆಗೂ ಮಾನವ ಸರಪಳಿ ರಚಿಸುವ ಗುರಿ ಇದ್ದು, ಇದರಲ್ಲಿ ಗ್ರಾಮ ಪಂಚಾಯಿತಿ, ವಿವಿಧ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು, ತಾಲೂಕಿನಿಂದ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂಧಿಗಳು, ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ವೈ.ಎಚ್. ಚಂದ್ರಶೇಖರ ಮಾತನಾಡಿ ಜಿಲ್ಲಾಡಳಿತದಿಂದ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿಯ ಸಿಬ್ಬರು, ಅಧಿಕಾರಿಗಳು ಸೇರಿದಂತೆ ಇತರರು ಭಾಗವಹಿಸಲು ಸೂಚಿಸುವುದಾಗಿ ತಿಳಿಸಿದರು. ಅಧ್ಯಕ್ಷ ಬಸವರಾಜ ಸಂಗಪ್ಪನವರ್ ಮಾತನಾಡಿದರು.

ಕ್ಷೇತ್ರಶಿಕ್ಷಣಾಧಿಕಾರಿ ಲೇಪಾಕ್ಷಪ್ಪ, ಎಇಇ ಕಬೇಂದ್ರನಾಯ್ಕ್, ಸರಕಾರಿ ನೌಕರರ ಸಂಘದ ಅಧ್ಯಕ್ಷ ಎಸ್.ರಾಮಪ್ಪ, ಬಿಸಿಎಂ ಇಲಾಖೆಯ ಕೆ.ಭೀಮಪ್ಪ, ಬಿಆರ್‌ಸಿ ಹೊನ್ನೆತೆಪ್ಪ, ಸಿನಿಯರ್ ನಿಲಯ ಪಾಲಕರಾದ ಎನ್.ಜಿ.ಬಸವರಾಜ್, ಯಸ್ಮೀನ್, ರವಿಗೌಡ, ದೇವೇಂದ್ರಪ್ಪ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆರೋಗ್ಯ ಇಲಾಖೆ ಸೇರಿದಂತೆ ಇದ್ದರು.

ಪಟ್ಟಣದ ತಾಲೂಕು ಪಂಚಾಯಿತಿ ರಾಜೀವಗಾಂಧಿ ಸಭಾಂಗಣದಲ್ಲಿ ಅಂತರಾಷ್ಟೀಯ ಪ್ರಜಾಪ್ರಭುತ್ವ ದಿನಾಚರಣೆ ಕುರಿತು ಪೂರ್ವಭಾವಿ ಸಭೆ ಜರುಗಿತು.

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವದ ದಿನಾಚರಣೆ ಯಶಸ್ವಿಗೊಳಿಸಲು, ನಮ್ಮ ಸಮಾಜ ಕಲ್ಯಾಣ, ಹಿಂದುಳಿದ ವರ್ಗ, ಪ.ಜಾತಿ, ಪ.ಪಂಗಡ ಇಲಾಖೆಯಿಂದ 40 ಬಸ್‌ಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇದರ ಜೊತೆಯಲ್ಲಿ ಬೆಳಗಿನ ಉಪಹಾರದ ವ್ಯವಸ್ಥೆಯನ್ನು ಆಯೋಜಿಸಲಾಗಿದ್ದು ವಸತಿ ನಿಲಯದ ವಿದ್ಯಾರ್ಥಿಗಳು ಒಳಗೊಂಡು ಇತರರು ಇದರಲ್ಲಿ ಪಾಲ್ಗೊಳ್ಳಬೇಕು.

- ಗಂಗಪ್ಪ , ಸಮಾಜ ಕಲ್ಯಾಣ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ

ಥ್ರೋಬಾಲ್‌ನಲ್ಲಿ ಹಿಕ್ಕಿಂಗೆರೆ ಶಾಲೆ ಪ್ರಥಮ

ಹರಪನಹಳ್ಳಿ: ತಾಲೂಕಿನಲ್ಲಿ 2024-25ನೇ ಸಾಲಿನ ಅರಸಿಕೆರೆ ವಲಯ ಮಟ್ಟದ ಥ್ರೋಬಾಲ್ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ಹಿಕ್ಕಿಂಗೆರೆಯ ಸರಕಾರಿ ಪ್ರೌಢಶಾಲೆಯ ಬಾಲಕರ ಮತ್ತು ಬಾಲಕಿಯರು ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದರು. ನಗರದ ತಾಲೂಕು ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಅರಸಿಕೆರೆ ವಲಯಟ್ಟದ ಕ್ರೀಡಾ ಕೂಟದಲ್ಲಿ ಭಾಗವಹಿಸಿದ್ದ ಹಿಕ್ಕಿಂಗೆರೆಯ ಸರಕಾರಿ ಪ್ರೌಢ ಶಾಲೆಯ ವಿದ್ಯರ್ಥಿಗಳು ಥ್ರೋಬಾಲ್‌ನಲ್ಲಿ ಬಾಲಕ ಬಾಲಕಿಯರು ಪ್ರಥಮ ಸ್ಥಾನ, ರಿಲೆ ಓಟದಲ್ಲಿ ಬಾಲಕರು ಪ್ರಥಮ ಸ್ಥಾನ, ಶಟಲ್ ಬ್ಯಾಟ್‌ಮಿಟನ್ ಬಾಲಕರ ವಿಭಾಗದಲ್ಲಿ ಪ್ರಥಮ ಮತ್ತು ಬಾಲಕಿಯರ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದರು. ಈ ಶಾಲೆಯ ವಿದ್ಯರ್ಥಿಗಳು ಅನೇಕ ರ್ಷಗಳಿಂದ ವಲಯ ಮಟ್ಟದ ಬಾಲಕಿಯರ ಹಾಗೂ ಬಾಲಕರ ಥ್ರೋಬಾಲ್ ವಿಭಾಗದಲ್ಲಿ ಪ್ರಥಮ ಸ್ಥಾನಗಳಿಸುತ್ತಾ ಕ್ರೀಡಾ ಕೂಟದಲ್ಲಿ ತಮ್ಮದೇ ಆದ ಛಾಪು ಮೂಡಿಸಿ ಹಿಕ್ಕಿಂಗೆರೆ ಶಾಲೆಯ ಹಿರಿಮೆಯನ್ನು ಹೆಚ್ಚಿಸುತ್ತ ಬಂದಿದ್ದಾರೆ. ಈ ಸಂರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಯರಾದ ಜಯಶ್ರೀ, ದೈಹಿಕ ಶಿಕ್ಷಕರಾದ ಮಹೇಶ್, ಹೆಚ್.ಆನಂದ, ಬಿ.ಅಂಜಿನಪ್ಪ, ವೀರಮ್ಮ, ವೀರಭದ್ರಪ್ಪ, ಅಶೋಕ್, ಮಂಜುನಾಥ್ ಹಾಗೂ ಶಾಲೆಯ ಹಳೇಯ ವಿದ್ಯರ್ಥಿಗಳು ಈ ಕ್ರೀಡಾ ಕೂಟದಲ್ಲಿ ಸಾಧನೆ ಮಾಡಿದ ಆಟಗಾರರಿಗೆ ಅಭಿನಂದನೆ ಸಲ್ಲಿಸಿದರು.

ವಿಶ್ವವಾಣಿ ಆರಾಮ

@vishwavaninews

ಬೆಂಗಳೂರು
ಸೋಮವಾರ
09 | 09 | 2024

ಅನುದಿನವೂ ವಿರಾಮಕ್ಕೆ ಒಂದು ನೆಪ

ವಿದೇಶಗಳಿಗೆ ಹೋದಾಗ ನಮ್ಮ ಊರಿನ ತಿಂಡಿ ಸಿಕ್ಕಿದರೆ ನಿಜಕ್ಕೂ ಖುಷಿ ಆಗುತ್ತದೆ!

ಅಮೆರಿಕದಲ್ಲಿ ಬೆಂಗಳೂರಿನ ನೆನಪು!

• ರವೀಂದ್ರ ವೈದ್ಯ

ಬೆಂಗಳೂರಿನಲ್ಲಿರುವ ಎಮ್.ಟಿ.ಆರ್. ಹೋಟೆಲ್ ಬಗ್ಗೆ ಯಾರಿಗೇ ತಾನೇ ಗೊತ್ತಿಲ್ಲ! ಈ ಹೋಟೆಲ್, 100 ವರ್ಷ ಹಳೆಯದೆಂಬ ಹೆಗ್ಗಳಿಕೆ ಹೊಂದಿದೆ. ರುಚಿ ಮತ್ತು ಗುಣಮಟ್ಟದ ಊಟ ಮತ್ತು ಉಪಹಾರ ಪೂರೈಸುತ್ತಿರುವ ಹೋಟೆಲ್ ಎಂದು ಹೆಸರು ವಾಸಿಯಾಗಿದೆ ನಮ್ಮ ಈ ಎಮ್.ಟಿ.ಆರ್. ರೆಸ್ಟೋರೆಂಟ್.

ಈ ಬಾರಿ ನಮ್ಮ ಅಮೆರಿಕ ಪ್ರವಾಸದಲ್ಲಿ ವಾಷಿಂಗಟನ್ ರಾಜ್ಯದ ಸಿಯಾಟಲ್ ನಗರದಲ್ಲಿ ಎಮ್.ಟಿ.ಆರ್ 1924 ಹೋಟೆಲ್ ಬೋರ್ಡ್ ನಮ್ಮ ಕಣ್ಣಿಗೆ ಬಿದ್ದು, ಆಶ್ಚರ್ಯ ಮತ್ತು ಸಂತೋಷ ಉಂಟಾಯಿತು. ಬೋರ್ಡಿನಲ್ಲಿ 1924 ಎಂದು ಕಂಡಾಗ ನಾವು ಇರುವದು ಅಮೆರಿಕವೋ, ಬೆಂಗಳೂರೋ ಎನ್ನುವ ಮಟ್ಟಿಗೆ ಸಂಶಯ ಕಾಡಿತು. ಸಂಜೆ ಬೆಟ್ಟದ ಮೇಲೆ ಸೂರ್ಯಾಸ್ತದ ಸೊಬಗನ್ನು ಕಣ್ತುಂಬಿಸಿಕೊಂಡು, ಎಂ.ಟಿ.ಆರ್. ಹೋಟೆಲ್‌ಗೆ ಟೇಬಲ್ ಬುಕ್ ಮಾಡಲು ಫೋನಾಯಿಸಿದಾಗ ರಾತ್ರಿ 10.00 ಗಂಟೆಗೆ ಹೋಟೆಲ್ ಮುಚ್ಚುವದಾಗಿ ಮತ್ತು ಈಗಾಗಲೇ 9.30 ರ ವರೆಗೆ ಟೇಬಲ್ ಬುಕ್ ಆಗಿರುವದರಿಂದ, ಇಂದಿಗೆ ಸಾಧ್ಯವಿಲ್ಲ ಎಂಬ ಉತ್ತರ ಕೇಳಿ ನಿರಾಸೆ ಮೂಡಿತು. ಮರುದಿನ ಸೋಮವಾರ, ಹೋಟೆಲ್‌ಗೆ ರಜಾ ದಿನವೆಂದೂ, ಮಂಗಳವಾರ ಟೇಬಲ್ ಬುಕ್ ಮಾಡುವುದಾಗಿ ತಿಳಿಸಿದರು.

ಎಮ್.ಟಿ.ಆರ್.ಗೆ ಹೋಗುವ ಕನಸು ಕಾಣುತ್ತ ಬೆಂಗಳೂರಿನ ಎಮ್.ಟಿ.ಆರ್. ಅಮೇರಿಕಾಕ್ಕೆ ಬಂದ ಬಗ್ಗೆ ಕುತೂಹಲ ಹೆಚ್ಚಾಗಿ, ನನ್ನ ಶಡ್ಡಕನ ಸೊಸೆ ಶೃತಿಗೆ, ನ್ಯಾಯಾಲಯದಲ್ಲಿ ಸಾಕ್ಷಿಗೆ ವಕೀಲರು ಪ್ರಶ್ನೆ ಕೇಳುವಂತೆ, ಪ್ರಶ್ನೆಗಳನ್ನು ಕೇಳಿ ಕುತೂಹಲ ತಣಿಸಿಕೊಂಡೆ. ಬೆಂಗಳೂರಿನ ಉದ್ಯಮಿ ಸ್ನೇಹಿತರಿಬ್ಬರು (ಅವರಲ್ಲಿ ಒಬ್ಬರು, ಶೃತಿಯ ಸ್ನೇಹಿತೆಯ ತಂದೆ) ವ್ಯವಹಾರ ಮಾಡುವ ಕುರಿತು ಅಮೇರಿಕಾದ ಸಿಯಾಟಲ್‌ಗೆ ಬಂದು, 6-8 ವರ್ಷಗಳವರೆಗೆ ವ್ಯವಹಾರ ನಡೆಸಿ, ನಂತರ ಹೋಟೆಲ್ ಪ್ರಾರಂಭಿಸುವ ಕುರಿತು

ಮಂಗಳವಾರ ಎಮ್.ಟ.ಆರ್. 1924 ರೆಸ್ಟಾರೆಂಟ್‌ಗೆ ಸಂಜೆ 5.30ಕ್ಕೆ ಹೋದಾಗ, 8-10 ಗ್ರಾಹಕರು ಕಾಯುತ್ತ ನಿಂತಿದ್ದರು. ಸ್ವಾಗತಕಾರಿಣಿಗೆ ತಿಳಿಸಿ, ಕಾಯುತ್ತಾ ಹೊರಗೆ ನಿಂತೆವು. ಬೆಂಗಳೂರಿನ ಎಮ್.ಟಿ.ಆರ್.ನಲ್ಲಿ ಸಿಗುವ ದಕ್ಷಿಣ ಭಾರತದ ತಿಂಡಿ-ತಿನಸುಗಳು ಇಲ್ಲಿಯೂ ದೊರಕುವ ಸಂಗತಿ ಮೆನು ಕಾರ್ಡನಿಂದ ತಿಳಿಯಿತು. ಬಿಸಿ ಬಿಸಿ ಗುಲಾಬ ಜಾಮೂನ, ಜಿಲೇಬಿ, ಇತ್ಯಾದಿ ಸಿಹಿ ತಿಂಡಿಗಳನ್ನು, ರವಾ ಇಡ್ಲಿಗೆ ಮಿಳ್ಳಿಯಿಂದ ತುಪ್ಪ ಸುರಿದು ಚಟ್ನಿ ಮತ್ತು ಸಾಗುವಿನೊಂದಿಗೆ, ನಮ್ಮಲ್ಲಿ ಒಂದಿಬ್ಬರು ಮೊಸರು ವಡಾ, ತುಪ್ಪದ ಮಸಾಲೆ ದೋಸೆ ಮತ್ತು ಬಿಸಿಬೇಳೆ ಭಾತ ಮೇಲೆ ತುಪ್ಪ ಸುರಿದು ಖಾರಾ ಬುಂದಿಯೊಂದಿಗೆ, ಎಲ್ಲವನ್ನೂ ಸೇವಿಸಿ, ಕಾಫಿ ಹೀರಿದೆವು.

ಆದರೆ, ಅದೇಕೋ ಇಲ್ಲಿಯ ತಿಂಡಿಗಳ ರುಚಿ ಮತ್ತು ಗುಣಮಟ್ಟ ಬೆಂಗಳೂರು ಮಟ್ಟದಲ್ಲಿರಲಿಲ್ಲ. ಓರ್ವ ಮೇಲ್ವಿಚಾರಕರು ನಮ್ಮ ಅಭಿಪ್ರಾಯ ಕೇಳಿದಾಗ, ನನ್ನ ಅಸಮಾಧಾನವನ್ನು ಹೇಳಿಕೊಂಡೆ. ಅದಕ್ಕೆ ಅವರು ಇಲ್ಲಿಯ ನೀರಿನ ರುಚಿ, ಸಿಗುವ ತರಕಾರಿಗಳ, ಹಾಲು ಮೊಸರಿನ, ಮಸಾಲೆಗಳ ಮತ್ತು ಕಾಳು ಕಡಿಗಳ ರುಚಿ ವಿಭಿನ್ನವಾಗಿದ್ದು, ಬೆಂಗಳೂರಿನ ರುಚಿಯನ್ನು ಹೊಂದುವುದು ಕಷ್ಟ, ಆದರೂ ಗುಣಮಟ್ಟವನ್ನು ಇನ್ನಷ್ಟು ಸುಧಾರಿಸಲು ಪ್ರಯತ್ನಿಸುವುದಾಗಿ ಹೇಳಿ, ಸೌಜನ್ಯದಿಂದ ಥ್ಯಾಂಕ್ಸ್ ಹೇಳಿದರು. (ಅದು ಇಲ್ಲಿಯವರ ಸ್ಪೇಷಲ್ ಗುಣ.)

ಮೆನು ಕಾರ್ಡಿನಲ್ಲಿ ಕಂಡುಬಂದ ತಿಂಡಿಗಳ ದರಪಟ್ಟಿ ಗಾಬರಿಗೊಳಿಸಿತು. ತುಪ್ಪದ ಒಂದು ಮಸಾಲೆ ದೋಸೆ ಇಲ್ಲಿ 15 ಡಾಲರ್! ಆದರೆ ಇದು ಇಲ್ಲಿ ಸಾಮಾನ್ಯ ದರ ಎನಿಸಿದೆ. ಅಮೆರಿಕದಲ್ಲಿರುವವರು ಡಾಲರ್‌ನಲ್ಲಿ ಸಂಪಾದಿಸಿ, ಡಾಲರ್ ಹಣ ಖರ್ಚು ಮಾಡುವದರಿಂದ, ಅವರು ಇಲ್ಲಿನ ಬೆಲೆಗಳಿಗೆ ಹೊಂದಿಕೊಂಡಿದ್ದಾರೆ. ಅಮೆರಿಕಕ್ಕೆ ಹೋದಾಗ, ಎಮ್.ಟಿ.ಆರ್. ರೆಸ್ಟಾರೆಂಟ್‌ನಲ್ಲಿ ತಿಂಡಿ ತಿಂದ ಅನುಭವ ತೃಪ್ತಿಕೊಟ್ಟಿತು.

ಹಲಸಿನ ಎಲೆಯ ಕೊಟ್ಟೆ ಕಡಬು

• ಸುರೇಂದ್ರ ಪೈ, ಭಟ್ಕಳ

ಚೌತಿ ಹಬ್ಬದಂದು ಗಣಪನಿಗೆ ವಿವಿಧ ಭಕ್ಷ್ಯ ಭೋಜನಗಳನ್ನು ನೈವೇದ್ಯ ಮಾಡಲಾಗುತ್ತದೆ. ಜತೆಗೆ, ಮಲೆನಾಡು, ಉತ್ತರ ಕನ್ನಡ, ದಕ್ಷಿಣ ಕನ್ನಡದ ಭಾಗದಲ್ಲಿ ಹಲಸಿನ ಎಲೆಯ ಕೊಟ್ಟೆಯನ್ನು ತಯಾರಿಸಲಾಗುತ್ತದೆ. ಹಲಸಿನ ಎಲೆಯ ಕೊಟ್ಟೆ (ದೊನ್ನೆಯ ಹೋಲಿಕೆ) ಯನ್ನು ತಯಾರಿಸಿ ಅದರೊಳಗೆ ಉದ್ದಿನ ಹಿಟ್ಟನ್ನು ತುಂಬಿಸಿ, ಒಲೆಯ ಮೇಲೆ ಬೇಯಿಸಿ ಸಿದ್ದಪಡಿಸುವ ನಮ್ಮ ಸಾಂಪ್ರದಾಯಿಕ ಖಾದ್ಯವೇ ಈ ಹಲಸಿನ ಎಲೆಯ ಕೊಟ್ಟೆ ಕಡಬು.

ಒಂದು ಹಲಸಿನ ಕೊಟ್ಟೆ ತಯಾರಿಸಲು ನಾಲ್ಕು ಹಲಸಿನ ಎಲೆ ಹಾಗೂ ತೆಂಗಿನ ಕಡ್ಡಿ ಅಥವಾ ಬಿದಿರಿನ ಕಡ್ಡಿ ಇದ್ದರೆ ಸಾಕು. ಮೊದಲು ಎರಡು ಎಲೆಗಳನ್ನು ಎದುರು ಬದುರಾಗಿ ಇಟ್ಟು ಅದರ ಕೆಳಭಾಗವನ್ನು ಕಡ್ಡಿಯಿಂದ ಸೇರಿಸಿಕೊಳ್ಳಬೇಕು. ಅನಂತರ ಇನ್ನುಳಿದ ಎರಡು ಎಲೆಗಳನ್ನು ಅಕ್ಕಪಕ್ಕದಲ್ಲಿ ನಾಲ್ಕು ಮೂಲೆಗಳಿಗೆ ಸರಿಹೊಂದುವಂತೆ ಇಟ್ಟು ಕಡ್ಡಿಯಿಂದ 'ಪತ್ರಾವಳಿ' (ಊಟಕ್ಕೆ ಬಳಸುವ ಎಲೆಯ ತಟ್ಟೆ) ಸಿದ್ದಪಡಿಸಿಕೊಳ್ಳಬೇಕು. ಅನಂತರ ಎಲೆಯ ಪತ್ರಾವಳಿಯ ನಾಲ್ಕು ಚೊಟ್ಟಿನ ಭಾಗವನ್ನು ಮೇಲ್ಮುಖವಾಗಿ ಕಡ್ಡಿಯ ಸಹಾಯದಿಂದ ಚುಚ್ಚಬೇಕು. ಆಗ ಅದು ದೊನ್ನೆಯ ಆಕಾರವನ್ನು ತಾಳುತ್ತದೆ. ಬುಡ(ತಳ) ಭಾಗವು ನೆಲಕ್ಕೆ ನಿಲ್ಲುವಂತಾಗುತ್ತದೆ. ಸಿದ್ಧವಾದ ಕೊಟ್ಟೆಯೊಳಗೆ ರುಬ್ಬಿದ ಉದ್ದಿನ ಹಿಟ್ಟನ್ನು ಹಾಕಿ ಬೇಯಿಸಿದರೆ ರುಚಿ ರುಚಿಯಾದ ಹಲಸಿನ ಕೊಟ್ಟೆ ಕಡಬು ಸವಿಯಲು ಸಿದ್ಧ. ಎಲೆಗಳ ಮೂಲಕ ಹಬೆ ಹಾದು ವಿಶಿಷ್ಟವಾಗಿ ಬೇಯುವುದರಿಂದ, ಇಡ್ಲಿಗಿಂತ ಭಿನ್ನವಾದ ರುಚಿ, ಮೃದುತ್ವ ಇದಕ್ಕೆ ಲಭ್ಯವಾಗುತ್ತದೆ. ಕರಾವಳಿ ಭಾಗದಲ್ಲಿ ಚೌತಿಯಂದು ಎಲ್ಲರ ಮನೆಯಲ್ಲೂ ಕೊಟ್ಟೆ ಕಡಬು ಮಾಡಲಾಗುತ್ತದೆ. ಮುಂಡುಕನ ಓಲಿಯಲ್ಲೂ ಇದನ್ನು ಹೋಲುವ ಮೂಡೆ ತಯಾರಿಸುವುದುಂಟು.

ಹಲಸಿನ ಎಲೆಯ ಕೊಟ್ಟೆ ಕಡುಬು ನಗರದಲ್ಲೂ ತನ್ನ ಅಸ್ತಿತ್ವ ಉಳಿಸಿಕೊಂಡಿದೆ; ಆನ್‌ಲೈನ್ ವ್ಯಾಪಾರೀ ಸಂಸ್ಥೆಗಳು ಈ ಜನಪ್ರಿಯತೆಯನ್ನು ಕಂಡು, ಒಂದು ಹಲಸಿನ ಖಾಲಿ ಕೊಟ್ಟೆಗೆ ಐದು ರುಪಾಯಿಯಂತೆ ಸರಬರಾಜು ಮಾಡುವುದನ್ನು ಕಾಣಬಹುದು! ಇದಕ್ಕೆ ಕಾರಣ, ಹಲಸಿನ ಎಲೆಗಳ ನಡುವೆ ಹಬೆಯಲ್ಲಿ ಬೇಯುವ ಇಡ್ಲಿ ಹಿಟ್ಟಿನ ರುಚಿ. ಇದನ್ನು ಚಟ್ನಿ, ಸಾಂಬಾರು ಅಥವಾ ಪಾಯಸದೊಂದಿಗೆ ಸೇವಿಸುವ ಪದ್ಧತಿ ಇದೆ. ಕರಾವಳಿಯಲ್ಲಿ, ಹಬ್ಬದ ದಿನ ಮನೆಗೆ ಬಂದವರಿಗೆ ಹಲಸಿನ ಕೊಟ್ಟೆ ಕಡುಬನ್ನು ನೀಡುವುದುಂಟು.

ಸದ್ವಿಚಾರಗಳು ಮತ್ತೆ ಮತ್ತೆ ಬರಲಿ

• ವಿದ್ಯಾ ಶಂಕರ ಶರ್ಮ

ಜಗತ್ತಿನ ಎಲ್ಲ ಸಾಹಿತ್ಯಗಳನ್ನು ಅವಲೋಕಿಸಿದಾಗ ಒಂದು ಸಾಮಾನ್ಯ ಅಂಶ ನಮಗೆ ಕಾಣುತ್ತದೆ. ವ್ಯಕ್ತಿತ್ವ ವಿಕಸನ, ನೀತಿಭೋಧಕ, ಒಳ್ಳೆಯ ವಿಚಾರಗಳ ಕುರಿತು ಮೇಲಿಂದ ಮೇಲೆ ಬರಹಗಳು ಬರುತ್ತಲೇ ಇರುತ್ತವೆ. ಎಲ್ಲವುಗಳ ಹೂರಣ ಒಂದೇ ಆಗಿದ್ದರೂ ಅದನ್ನು ಪ್ರಸ್ತುತಪಡಿಸುವ ಶೈಲಿ ಭಿನ್ನವಾಗಿರುತ್ತದೆ. ಆದರೆ ಇವುಗಳನ್ನು ಓದುವವರು, ಅದರ ಬಗೆಗೆ ಚಿಂತನೆ ಮಾಡುವವರು ಬಹಳ ಕಡಿಮೆ ವರ್ಗದ ಜನರು. ಇದಕ್ಕೆ ತದ್ವಿರುದ್ದವಾಗಿ ದಿನ ನಿತ್ಯ ನೆಡೆಯುವ ದುರ್ಘಟನೆ, ಹಿಂಸೆ, ಮೋಸ, ಅನ್ಯಾಯ, ಅಕ್ರಮಗಳನ್ನು ಹೊತ್ತು ತರುವ ಸಮಾಚಾರವು ಎಲ್ಲರನ್ನೂ ಒಂದೇ ತೆರನಾಗಿ ಆಕರ್ಷಿಸುತ್ತದೆ. ವಿಚಿತ್ರವಲ್ಲವೇ? ನಮ್ಮ ಮನಸ್ಸು ಸಹಜವಾಗಿ ಇಂತಹ ವಿಷಯಗಳ ಕಡೆ ಎಳೆಯುತ್ತದೆ. ನಮ್ಮ ಮನಸ್ಸು ಏನೋ ಒಂದು ಕೂತುಹಲದಿಂದ ಇಂತಹ ಅಹಿತಕರ ಸುದ್ದಿಯನ್ನು ಸ್ವೀಕರಿಸುತ್ತದೆ.

ಈ ಕಾರಣಕ್ಕಾಗಿಯೇ ಅರ್ಥಪೂರ್ಣವಾದ, ಸದಭಿರುಚಿಯ, ಆರೋಗ್ಯಕರ ಯೋಚನಾ ಲಹರಿಯನ್ನು ಮೂಡಿಸುವ ಸಂಗತಿಗಳ ಪುನರಾವರ್ತನೆ ಆಗಬೇಕಿದೆ. ಬಹು ಸಾಮಾನ್ಯ ಎನ್ನುವಂತೆ ಸುವಿಚಾರಗಳ ಬಗ್ಗೆ ಚರ್ಚೆ ನಮಗೆ ಬರಡು ಎನಿಸುತ್ತದೆ. ಅದರಲ್ಲೂ ಬೇರೆಯವರ ಬಗೆಗೆ ಮಾತನಾಡುವುದೇ ಹಲವರ ಟೈಮ್ ಪಾಸ್. ಆದರೆ ಇದರಿಂದ ನಮಗೆ ಕಿಂಚಿತ್ತಾದರೂ ಲಾಭವಿದೆಯೇ ಎಂದು ಕೇಳಿದರೆ, ಏನೂ ಇಲ್ಲ ಎಂಬುದೇ ಸರಿಯಾದ ಉತ್ತರ. ಹಾಗಾಗಿ ಉತ್ತಮ ಮೌಲ್ಯಗಳೆಡೆಗೆ, ಆಶಾದಾಯಕ ನಂಬಿಕೆಗಳೆಡೆಗೆ, ಈ ಬದುಕಿನ ಉದ್ದೇಶದೆಡೆಗೆ ನಮ್ಮ ಕುಣಿಯುವ ಚಿತ್ತವನ್ನು ಎಳೆದು ತಂದು ನಿಲ್ಲಿಸುವ ಪ್ರಯತ್ನ ಪುನಃ ಪುನಃ ಆಗಬೇಕಿದೆ. ಚಿಕ್ಕ ಮಗುವನ್ನು ಹೇಗೆ ಮತ್ತೆ ಮತ್ತೆ ಸಂಭಾಳಿಸುತ್ತೇವೆಯೋ ಅದೇ ರೀತಿಯಲ್ಲಿ, ಮಗುವಿನಂತೆ ಆಟ ಆಡುವ ಮನಸನ್ನು ತರಬೇತುಗೊಳಿಸಲು ಸದ್ವಿಚಾರಗಳ ಪ್ರಚಾರವು ಅನಿವಾರ್ಯ ಎನ್ನುವ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ಪ್ರಕೃತಿಯ ನಿಯಮದಂತೆ ನಿರ್ಮಾಣವು ಎಂದೂ ಕಷ್ಟ ಮತ್ತು ನಾಶ ಬಹು ಸುಲಭ. ಈ ಕಹಿ ಸತ್ಯವನ್ನು ನೆನಪಿಸಿಕೊಂಡಾಗ ನೈತಿಕ ಬಲವರ್ಧನೆ ಎಷ್ಟು ಕಠಿಣವಾದದ್ದು ಮತ್ತು ಮುಗಿಯದ ದಾರಿಯಂತೆ ಎಂಬುದು ಅರ್ಥವಾಗುತ್ತದೆ. ನೋವು ಮತ್ತು ನಲಿವುಗಳಲ್ಲಿ ಸಮಭಾವ ಹೊಂದುವುದು ನಮ್ಮ ಮಾನಸಿಕ ಮತ್ತು ಶಾರೀರಿಕ ಸ್ವಾಸ್ಥ್ಯಕ್ಕೆ ಅಡಿಪಾಯ. ಶುದ್ಧ, ನಿರ್ಮಲ ಮನೋ ಚಿಂತನೆ, ಕದಡಿದ ನೀರನ್ನು ತಿಳಿಗೊಳಿಸುವ ತೆರದಲ್ಲಿ ಚದುರಿದ ಮನದ ಅಲೆಗಳನ್ನು ಶಾಂತಗೊಳಿಸುತ್ತದೆ. ಗುರುಗಳು ಹೇಳಿಕೊಟ್ಟ ಪಾಠವನ್ನು ಅಭ್ಯಾಸ ಮಾಡಿದಂತೆ ಆದರ್ಶಯುತ ಮಾತುಗಳನ್ನು ಕೇಳಲು, ಅಂತಹ ವಿಷಯಗಳ ಬಗ್ಗೆ ಇರುನ ಬರಹಗಳನ್ನು ಓದಲು ಸಮಯ ವ್ಯಯ ಮಾಡಿದರೆ ನಮ್ಮ ಚಿಂತನೆಗಳು ಸಹಜವಾಗಿ ಸದ್ವಿಚಾರಗಳ ಕಡೆಗೆ ಹರಿಯುವದರಲ್ಲಿ ಸಂಶಯವಿಲ್ಲ.

ಜೀವನದಲ್ಲಿ ಸವಾಲುಗಳು ಯಾವಾಗ, ಹೇಗೆ, ಯಾವ ರೂಪದಲ್ಲಿ ಬರುತ್ತದೆಯೋ ನಮಗೆ ತಿಳಯದ ರಹಸ್ಯ. ಆದರೆ ಸವಾಲುಗಳು ಬರುವದಂತೂ ನಿಶ್ಚಿತ. ಅಂತಹ ಕ್ಲಿಷ್ಟ ಪರಿಸ್ಥಿತಿಗಳನ್ನು ದಾಟಲು ಮನದ ಪ್ರಬುದ್ದತೆಯು ಬಹಳವಾಗಿ ಆಸೆಯಾಗುತ್ತದೆ. ಪ್ರಬುದ್ಧತೆಗೆ ಮೂಲ ಆಧಾರವೇ ನಿಷ್ಕಲ್ಮಶ ಯೋಚನಾ ರೀತಿ. ಅಂತಹ ಯೋಚನಾ ರೀತಿಗೆ ಕಾರಣವಾಗುವುದೇ ಸದ್ವಿಚಾರಗಳು. ಎಲ್ಲರೂ ಹೋಗುವ ಹೆದ್ದಾರಿಯಲ್ಲಿ ನಾವು ಇನ್ನೊಬ್ಬರಾಗಿ ಹೋಗುವುದರಲ್ಲಿ ಹೆಗ್ಗಳಿಕೆಯಿಲ್ಲ. ಕೆಲವರು ಮಾತ್ರ ಆಯ್ಕೆ ಮಾಡಿಕೊಂಡ ಚಿಕ್ಕ ಚೊಕ್ಕ ಹಾದಿಯಲ್ಲಿ ಸಾಗುವುದರಲ್ಲಿ ಅದೊಂದು ರೀತಿಯ ಉತ್ಸುಕತೆ ಇದೆ. ಒಳ್ಳೆಯ ವಿಚಾರದ ದಾರಿಯು ನಮಗೆ ಆ ಬಗೆಯ ಅನುಭವ ನೀಡುತ್ತದೆ.

ಪದಬಂಧ



ಎಡದಿಂದ ಬಲಕ್ಕೆ

2. ಅಲ್ಲಗಳೆ ಅಥವಾ ಒಪ್ಪದಿರು (5)
6. ಮತ್ತೊಂದು ಬಾಣದಿಂದ ತೊಡಗಿರುವ ಸಮುದ್ರ (3)
8. ಮಾಡಿದ ಕೆಲಸಕ್ಕೆ ನೀಡಿದ ವೇತನ (3)
10. ಇದು ವಿರಳವಾದುದು (4)
12. ಉತ್ತೇಜಿಸು ಎನ್ನುವುದು ತಿರುಗಿ ಬಂದಿದೆ (4)
14. ತೆಳುವಾಗಿರುವ ಲೋಹದ ಹಾಳೆ (3)
15. ಬಾಳೆಹಣ್ಣು, ಬೆಲ್ಲ ಸೇರಿಸಿ ಮಾಡಿದ ಸಿಹಿಖಾದ್ಯ (4)
17. ಲಲಿತಕಲೆಗಳನ್ನು ತಿಳಿದವನು (4)
20. ನೂಲು ತೆಗೆಯುವ ಒಂದು ಸಾಧನ (3)
22. ವಿಷ್ಣುವಿನ ಐದನೆಯ ಅವತಾರ (3)
24. ಗಾಳಿಸೇವನೆಗೆ ಹೋದ ಸಂಚಾರ (5)

ಎಡದಿಂದ ಬಲಕ್ಕೆ

1. ಯಮನ ಕೈಯಲ್ಲಿರುವ ಹಗ್ಗ (2)
2. ಸಂಪತ್ತಿಗೆ ಮತ್ತೊಂದು ಹೆಸರು (2)
3. ತುಕ್ಕು ಹಿಡಿಯುವ ಲೋಹ (3)
4. ಹೂವಿಗೆ ಮತ್ತೊಂದು ಹೆಸರು (2)
5. ನೀರು, ಉದಕ (2)
7. ತಲೆಕೆಳಗಾಗಿ ಬಂದಿರುವ ಸಂಬಳ (3)
9. ಜೂಜುಕೋರನಿಗೆ ಮತ್ತೊಂದು ಹೆಸರು (3)
10. ಮತ್ತೊಂದು ಆರ್ಭಟ (3)
11. ಕೆಳಕ್ಕೆ ಬೀಳುವಿಕೆ (3)
12. ಮದ್ಯಪಾನ ಮಾಡುವವನನ್ನು ಹೀಗೆನ್ನಬಹುದೇ! (3)
13. ದೂರವನ್ನಳೆಯುವ ಒಂದು ಪ್ರಮಾಣ (3)
16. ನಿಪುಣ ಅಥವಾ ಸಾಧನೆ ಮಾಡುವವನು (3)
18. ಅಪೂರ್ವವಾದ ದಾಖಲೆ ಅರುವತ್ತು ಸಂವತ್ಸರಗಳಲ್ಲಿ ಒಂದು (3)
19. ಮತ್ತೊಬ್ಬ ಸೂರ್ಯನೊಂದಿಗೆ ಬಂದಿರುವ ಒತ್ತೆ (3)
20. ಮಜ್ಜಿಗೆಗೆ ಪರ್ಯಾಯ ಪದ (2)
21. ಸುಗ್ರೀವನ ಸಹೋದರ ತಲೆಕೆಳಗಾಗಿ ಬಂದಿದ್ದಾನೆ (2)
22. ಏಳು ದಿನಗಳ ಅವಧಿ (2)
23. ನೀರಿನ ನಲ್ಲಿ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ನಿರಾಕರಿಸು 6. ಶರಧಿ 8. ಮಜೂರಿ 10. ಅಪರೂಪ 12. ಕುಹಾಲಿಗಾ 14. ತಗಡು 15. ರಸಾಯನ 17. ಕಲಾವಿದ 20. ತಕಲಿ 22. ವಾಮನ 24. ವಾಯುವಿಹಾರ

ಮೇಲಿನಿಂದ ಕೆಳಕ್ಕೆ: 1. ಪಾಶ 2. ನಿಧಿ 3. ಕಬ್ಬಿಣ 4. ಸುಮ 5. ವಾರಿ 7. ರಗಾಪ 9. ಜೂದಾಳಿ 10. ಅಬ್ಬರ 11. ತಪನ 12. ಕುಡುಕ 13. ಗಾವುದ 16. ಸಾಧಕ 18. ವಿಕ್ರಮ 19. ಗಿರವಿ 20. ತಕ್ರ 21. ಲಿವಾ 22. ವಾರ 23. ನಳ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ಮೂಷಕ ವಾಹನ ಗಜಾನನ

ಒಮ್ಮೆ ದೇವಲೋಕದಲ್ಲಿ ಇಂದ್ರನ ಸಭೆ ನಡೆಯುತ್ತಿತ್ತು. ಸಭೆಯಲ್ಲಿ ದೇವತೆಗಳು, ಋಷಿಮುನಿಗಳು, ವಾಮದೇವ ಎಂಬ ಮಹರ್ಷಿಗಳೂ ಉಪಸ್ಥಿತರಿದ್ದರು. ಇಂದ್ರನ ಸಭೆ ಅಂದಮೇಲೆ ನೃತ್ಯ - ಗಾಯನ ಎಲ್ಲವೂ ಮೇಳೈಸಿರುತ್ತದೆ. ಅರ್ಧ ರಾಕ್ಷಸ ಗುಣ ಅರ್ಧ ದೇವಗುಣ ಇರುವ 'ಕ್ರೌಂಚ 'ಎಂಬ ಗಂಧರ್ವನು ಆ ಸಭೆಗೆ ಆಗಮಿಸಿದ. ಇವನು ಶಿವಭಕ್ತನಾಗಿದ್ದು ದೇವತೆಗಳಿಂದ, ರಾಕ್ಷಸರಿಂದ, ಮನುಷ್ಯರಿಂದ ಯಾವುದೇ ರೀತಿಯಲ್ಲಿ ಸೋಲಾಗಬಾರದು ಎಂದು ಕಠಿಣ ತಪಸ್ಸು ಮಾಡಿ ಶಿವನಿಂದ ವರ ಪಡೆದಿದ್ದನು. ಶಿವನು 'ವರ' ಕೊಟ್ಟು, ಒಂದು ವೇಳೆ ನೀನು ಅಹಂಕಾರಪಟ್ಟರೆ ಅದರಿಂದ ನೀನು ತೊಂದರೆ ಪಡುವೆ ಎಂದು ಎಚ್ಚರಿಕೆಯನ್ನೂ ಕೊಟ್ಟಿದ್ದನು. ಒಳ್ಳೆಯ ಸಂಗೀತಗಾರ ಮತ್ತು ಸ್ಫುರದ್ರೂಪಿಯಾಗಿದ್ದ ಅವನಿಗೆ ಶಿವನು ಕೊಟ್ಟ ವರದಿಂದ ಸಹಜವಾಗಿಯೇ ಅಹಂಕಾರ ಬಂದಿತ್ತು.

ಇಂದ್ರನ ಸಭೆಗೆ ಬಂದಾಗ ಅಮಲಿನಲ್ಲಿ ತಿಳಿಯದೇ ವಾಮನ ಮಹರ್ಷಿ ಕಾಲನ್ನು ತುಳಿದನು. ವಾಮ ಮಹರ್ಷಿಗೆ ಕೋಪ ಬಂದು, ಎಲ್ಲೋ ನೋಡುತ್ತಾ ನನ್ನ ಕಾಲು ತುಳಿದೆಯಾ? ಅಹಂಕಾರದಿಂದ ಮೆರೆಯುತ್ತಿರುವ ನೀನು ಎಲ್ಲರ ಕಾಲಕೆಳಗೂ ಸಿಗುವ ಇಲಿಯಾಗು ಎಂದು ಕ್ರೌಂಚನಿಗೆ ಶಾಪ ಕೊಟ್ಟರು. ಸ್ವಲ್ಪ ಹೊತ್ತಿಗೆ ವಾಮ ಮಹರ್ಷಿಗಳ ಸಿಟ್ಟು ಕಡಿಮೆಯಾಯಿತು. ಮುನಿಗಳ ಶಾಪಕ್ಕೆ ಹೆದರಿದ ಕ್ರೌಂಚ ವಿನಯದಿಂದ, ಸ್ವಾಮಿ ಇದರಲ್ಲಿ ನನ್ನ ತಪ್ಪೇನೂ ಕ್ಷಮಿಸಿಬಿಡಿ ಎಂದು ಪಶ್ಚಾತ್ತಾಪ ಪಟ್ಟನು. ಸಮಾಧಾನವಾಗಿದ್ದ ವಾಮನ ಮಹರ್ಷಿಗಳು ನೀನು ಚಿಂತೆ ಮಾಡಬೇಡ, ಎಲ್ಲಾ ಭಗವಂತನ ಇಚ್ಛೆ. ಇಲಿಯ ರೂಪದಲ್ಲಿದ್ದರೂ ನಿನ್ನನ್ನು ಮುಂದೆ ದೇವತೆಗಳು, ಮಾನವರು, ದಾನವರು, ಎಲ್ಲರೂ ಪೂಜಿಸಿ ನಿನಗೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ತಲೆಬಾಗುತ್ತಾರೆ ಎಂದು ಹರಸಿದರು.

ಇಲಿಯಾದ ಕ್ರೌಂಚನು ತನ್ನ ಎಂದಿನ ಸ್ವಭಾವದಂತೆ ಅಹಂಕಾರದಿಂದ ದೇಹವನ್ನು ಹಿಗ್ಗಿಸಿಕೊಂಡು ಪರ್ವತದಂತೆ ಬೆಳೆದು ಸಿಕ್ಕಸಿಕ್ಕ ಕಡೆಗೆಲ್ಲ ನುಗ್ಗಿ ಹಾಳು ಮಾಡಿ ಎಲ್ಲರಿಗೂ ತೊಂದರೆ ಕೊಡ ಹತ್ತಿದನು. ಪರ್ವತಗಳನ್ನೇ ಕಡಿದು ಕಡಿದು ಪುಡಿ ಮಾಡಿದ ಹೀಗೆ ಪರ್ವತ ಗಿರಿ ಶಿಖರಗಳನ್ನು ಧ್ವಂಸಮಾಡುತ್ತಾ ಋಷಿಮುನಿಗಳು ನೆಲೆಸಿದ್ದ ಕಾಡಿನ ಹಲವು ಆಶ್ರಮಗಳನ್ನು ಹಾಳುಮಾಡಿದ. ಹಾಗೆ ಪರಾಶರ ಮಹರ್ಷಿಗಳ ಕುಟೀರಕ್ಕೂ ನುಗ್ಗಿ ಹಾಳು ಮಾಡಿದ. ಇದನ್ನು ನೋಡಿದ ಪರಾಶರ ಮಹರ್ಷಿಗಳು ದುಷ್ಟ ಮೂಷಿಕನಿಗೆ ಬುದ್ಧಿ ಕಲಿಸ ಬೇಕೆಂದು ಪರಮೇಶ್ವರನ ಬಳಿ ಬಂದು ಕೇಳಿಕೊಂಡರು. ಎಲ್ಲವನ್ನೂ ಅರಿತ ಪರಮೇಶ್ವರನು ಮೂಷಿಕನ ಅಹಂಕಾರ ಮುರಿಯುವಂತೆ ಗಣೇಶನಿಗೆ ಹೇಳಿದನು. ಆಗ ಕೈಯಲ್ಲಿ ಒಂದು ಹಗ್ಗ ಹಿಡಿದು ಬಂದ ಗಣೇಶ ಇಲಿಯ ಮೇಲೆ ಬೀಸಿದನು. ಆ ಹಗ್ಗ ಬಹಳ ಉದ್ದವಿದ್ದುದರಿಂದ ಇಲಿ ಪಾತಾಳಕ್ಕೆ ನೆಗೆಯಿತು. ಆದರೆ ಗಣೇಶ ಹಗ್ಗವನ್ನು ರಭಸದಿಂದ ಒಂದೇ ಸಲಕ್ಕೆ ಎಳೆದಾಗ ಮೂಷಿಕ ಜೊತೆಯಲ್ಲೇ ಬಂದು ಗಣೇಶನ ಪಾದದ ಬುಡದಲ್ಲಿ ಬಿದ್ದಿತು.

ಗಣೇಶ ಮೂಷಕ ನೀನೇಕೆ ಜನಗಳಿಗೆ, ಋಷಿಮುನಿಗಳಿಗೆ ಕಾಟ ಕೊಡುತ್ತಿರುವೆ ಎಂದು ಕೇಳಿದಾಗ, ಮೂಷಿಕ ಅದಕ್ಕೆ ಉತ್ತರ ಕೊಡದೆ ಗಣೇಶನ ಪಾದಕ್ಕೆ ತಲೆಬಾಗಿತು. ಶರಣು ಬಂದ ನಿನಗೆ ನಾನು ರಕ್ಷಣೆ ಕೊಡುವೆ ಎಂದ ಗಣೇಶ ಇಲಿಯ ಮೇಲೆ ಹತ್ತಿ ಕುಳಿತ. ಗಣೇಶ ಕುಳಿತ ಭಾರಕ್ಕೆ ಕ್ರೌಂಚನಿಗೆ ಉಸಿರು ಕಟ್ಟಿದಂತಾಗಿ ಇನ್ನೇನು ಸತ್ತೇ ಹೋಗುವೆ ಎಂಬಂತೆ ಒದ್ದಾಡಿತು. ಹಿಂಸೆ ತಾಳಲಾರದೆ ಗಣೇಶ ನಿನ್ನ ಭಾರ ಹೆಚ್ಚಾಗಿದೆ ಕಾಪಾಡು ಎಂದಿತು. ಈಗ ಅದರ ಅಹಂಕಾರ ಅಳಿದುವುದನ್ನು ತಿಳಿದ ಗಣೇಶ ತನ್ನ ದೇಹವನ್ನು ಹಗುರ ಮಾಡಿಕೊಂಡನು. ಮೂಷಕ ಸದ್ಯ ಬದುಕಿದೆನಲ್ಲ ಎಂದು ಗಣೇಶನಿಗೆ ತಲೆಬಾಗಿತು ಅಂದಿನಿಂದ 'ಮೂಷಕ' ಗಣೇಶನ ವಾಹನವಾಯಿತು.

ಬದುಕಿನಲ್ಲಿ ನಮಗಿರುವ ಸಾಮರ್ಥ್ಯಗಳ ಬಗ್ಗೆ ಅಹಂಕಾರ ಪಡೆದೆ, ವಿನಯದಿಂದ ಎಲ್ಲರನ್ನೂ ದೇವರು ನಮಗೆ ಮತ್ತಷ್ಟು ದೇವರು ಒಳಿತು ಮಾಡಿ ಆಶೀರ್ವದಿಸುತ್ತಾನೆ ಎನ್ನುವುದಕ್ಕೆ ಮೇಲಿನ ಕಥೆ ಒಳ್ಳೆಯ ಉದಾಹರಣೆ.

ಸಹಸ್ಪಂದನೆ

ನಿಮ್ಮ ಪುರವಣಿ ವಿಭಾಗದಲ್ಲಿ, ಲೇಖನಗಳ ಆಯ್ಕೆಯಲ್ಲಿ ಏನೋ ಗಡಿಬಿಡಿಯಾದಂತಿದೆ; ವಿಚಾರಗಳಿಗೆ ತೂಕ ವಿದ್ದಂತಿಲ್ಲ, ಯಾರೂ ಬರೆಯುತ್ತಾರೋ ಅವರ ಪ್ರಭಾವದ ಮೇಲೆ ಲೇಖನ ಪ್ರಕಟಣೆಯಾದಂತೆ ಓದುಗನಿಗೆ ಅನಿಸುತ್ತಿದೆ.

- ಕಿಶೋರ್ ಪಟವರ್ಧನ್

4/9/2024 ರ ವಿಶ್ವವಾಣಿಯ ಆರಾಮದಲ್ಲಿ 'ಬೆಟ್ಟಗಳ ನಡುವೆ ಗುಹಾದೇಗುಲ' ಓದಿದೆ. ಇಂತಹ ಸುಂದರ ತಾಣವನ್ನು ಉಳಿಸುವ ಸೂಕ್ಷ್ಮ ಪರಿಸರ ಪ್ರಜ್ಞೆ ಖಂಡಿತಾ ನಮ್ಮ ಜನರಿಗಿಲ್ಲ. ಗುಂಪಿನಲ್ಲಿ ಹೋಗಿ ಗದ್ದಲ ಮಾಡಿ ತಿಂದು, ಕುಡಿದು ತ್ಯಾಜ್ಯವನ್ನೆಲ್ಲ ಅಲ್ಲಲ್ಲೇ ಬಿಸಾಡಿ ಗಬ್ಬೆಬ್ಬಿಸುತ್ತೇವೆ. ಇಂತಹ ಅನೇಕ ಚಂದದ ಸ್ಥಳಗಳು ನಮ್ಮ ಮೋಜು ಮಸ್ತಿಗೆ ಬಲಿಯಾಗಿ ಸಹಜ ಸೌಂದರ್ಯವನ್ನು. ಹಾಗಾಗಿ ಇರುವ ಕೆಲವೇ ಕೆಲವು ಪ್ರಕೃತಿ ಕೊಡುಗೆಗಳನ್ನು ಉಳಿಸಿಕೊಳ್ಳೋಣ. ಕೇಶವನಾಥೇಶ್ವರನ ಧ್ಯಾನಕ್ಕೆ ಅಡ್ಡಿಪಡಿಸುವುದು ತಪ್ಪು. ದಯಮಾಡಿ ಈ ಜಾಗಕ್ಕೆ ಹೆಚ್ಚು ಪ್ರಚಾರ ಖಂಡಿತಾ ಬೇಡ.

- ಬಿ ಎಸ್ ಮೋಹನಕುಮಾರ್

ನನ್ನ ಅಭಿಪ್ರಾಯದಲ್ಲಿ ಇಂತಹ ಜಾಗಗಳಿಗೆ ಪ್ರಚಾರ ಸಿಗಬೇಕು ಹಾಗೂ ಆ ಜಾಗಗಳಿಗೆ ತಲುಪಲು ಸೂಕ್ತ ಮಾರ್ಗದರ್ಶನವನ್ನು ಕೊಡಬೇಕು. ಆದರೆ ಅಲ್ಲಿಗೆ ಬರುವವರು ಆಕ್ಷೇತ್ರವನ್ನು ಯಾವುದೇ ರೀತಿಯಲ್ಲಿ ಕೆಡಿಸದಂತೆ ನೋಡಿಕೊಳ್ಳಬೇಕು. ಪ್ರಕೃತಿಯಲ್ಲಿರುವ ಎಲ್ಲಾ ಜಾಗಗಳನ್ನು ನೋಡು ಆನಂದಿಸಿ, ಮನವನ್ನು ಪ್ರಫುಲ್ಲಗೊಳಿಸುವುದು ಮನುಷ್ಯನ ಕರ್ತವ್ಯವಾಗಿದೆ; ಪ್ರಚಾರ ನೀಡಿದರೆ, ಹಾಳುಗೆಡಹುತ್ತಾರೆ ಎಂಬುದು ಸರಿಯಲ್ಲ; ಅಮೆರಿಕದ ನಯಾಗರ ಜಲಪಾತಕ್ಕೆ ಪ್ರತಿದಿನ ಸಾವಿರಾರು ಜನ ಭೇಟಿ ನೀಡಿದರೂ, ಅಲ್ಲಿನ ಪರಿಸರ ಚೆನ್ನಾಗಿಯೇ ಇದೆ. ಭೇಟಿ ನೀಡುವವರು ಶಿಸ್ತಿನಿಂದ ಇರುವಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯ ಅಲ್ಲಿ ಯಾವುದೇ ರೀತಿಯ ಅನೈತಿಕ, ಆಧಾರ್ಮಿಕ, ಕಾರ್ಯಗಳು ನಡಯದಂತೆ ನೋಡಿಕೊಳ್ಳಬೇಕು. ಸದಭಿರುಚಿಯ ಪ್ರವಾಸಕ್ಕೆ ಲೇಖನ/ಚಿತ್ರಗಳ ಮುಖಾಂತರ ಪ್ರಚಾರ ಕೊಡುವುದು ಒಳ್ಳೆಯದು. ಇಲ್ಲದೇ ಹೋದಲ್ಲಿ ಆ ಜಾಗ ಸಮಯ ಕಳೆದಂತೆ ಹಾಳಾಗಬಹುದು ಮತ್ತು ನೆನಪಿನಿಂದ ಮಾಸಲೂ ಬಹುದು.

- ದಾಮು, ದಾವಣಗೆರೆ

ಪ್ರಕೃತಿಯಲ್ಲಿರುವ ಎಲ್ಲಾ ಜಾಗಗಳನ್ನು ನೋಡು ಆನಂದಿಸಿ, ಮನವನ್ನು ಪ್ರಫುಲ್ಲಗೊಳಿಸುವುದು ಮನುಷ್ಯನ ಕರ್ತವ್ಯವಾಗಿದೆ; ಪ್ರಚಾರ ನೀಡಿದರೆ, ಹಾಳುಗೆಡಹುತ್ತಾರೆ ಎಂಬುದು ಸರಿಯಲ್ಲ; ಅಮೆರಿಕದ ನಯಾಗರ ಜಲಪಾತಕ್ಕೆ ಪ್ರತಿದಿನ ಸಾವಿರಾರು ಜನ ಭೇಟಿ ನೀಡಿದರೂ, ಅಲ್ಲಿನ ಪರಿಸರ ಚೆನ್ನಾಗಿಯೇ ಇದೆ. ಭೇಟಿ ನೀಡುವವರು ಶಿಸ್ತಿನಿಂದ ಇರುವಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯ. ಕೇಶವನಾಥೇಶ್ವರ ದೇಗುಲಕ್ಕೆ ಭೇಟಿ ನೀಡಿದವರು ಅಲ್ಲಿನ ಪರಿಸರವನ್ನು ಒಂದಿಷ್ಟೂ ಹಾಳುಮಾಡದಂತೆ ನಿಯಮಗಳನ್ನು ಜಾರಿಗೆ ತರುವುದು ಉತ್ತಮ ಎಂದು ನನ್ನ ಅನಿಸಿಕೆ.

- ಎಸ್. ಡಿ. ಪಾಟೀಲ ಹುಬ್ಬಳ್ಳಿ

ಪಶ್ಚಿಮ ಘಟ್ಟದ ತಪ್ಪಲಲ್ಲಿ, ಕೊಲ್ಲೂರಿನ ಬಳಿ ಇರುವ ಕೇಶವನಾಥೇಶ್ವರ ದೇಗುಲದ ಕುರಿತಾದ ನಿಮ್ಮ ಪತ್ರಿಕೆಯ ಲೇಖನ ತುಂಬಾ ಚೆನ್ನಾಗಿತ್ತು. ಇತ್ತೀಚೆಗೆ ಅಲ್ಲಿಗೆ ಚಿತ್ರ ನಟ ರಿಷಬ್ ಶೆಟ್ಟಿಯವರು ಭೇಟಿ ನೀಡಿದ ವಿಡಿಯೋ ವೈರಲ್ ಆಗಿರುವುದರಿಂದ, ಆ ಜಾಗಕ್ಕೆ ತುಂಬಾ ಪ್ರಚಾರ ದೊರಕಿದೆ. ಸದ್ಯದಲ್ಲೇ ಸಾವಿರಾರು ಜನ ಭೇಟಿ ನೀಡುತ್ತಾರೆ; ಆಗ ಪರಿಸರ ಹಾಳಾಗದಂತೆ ಎಚ್ಚರ ವಹಿಸುವುದು ಜಿಲ್ಲಾಡಳಿತದ ಕರ್ತವ್ಯ ಎನ್ನಬಹುದು.

- ಆರ್.ಎಸ್.ಶೆಟ್ಟಿ, ಉಡುಪಿ

ಪರಿಸರ ಸ್ನೇಹಿ ಗಣಪ

ಪರಿಸರ ಸ್ನೇಹಿ
ಮಣ್ಣಿನ ಗಣಪ
ಮನೆಯಲ್ಲಿ ತಂದು
ಕೂಡಿಸುವೆನಪ್ಪ

ಕಡುಬು, ಹೋಳಿಗೆ
ಹಾಲು, ತುಪ್ಪ
ನೈವೇದ್ಯ ನೀಡಿ, ನಾ
ಬೆಳಗುವೆ ದೀಪ

ಗಜಮುಖನೇ ನೀನು
ಜ್ಞಾನದ ರೂಪ
ವಿದ್ಯಾ, ಬುದ್ಧಿಯನ್ನು
ಕರುಣಿಸು ಅಪ್ಪ

ಹೇ ಲಂಬೋದರನೇ
ನಿನ್ನಯ ಜಪ
ಮಾಡುವೆ, ಮನ್ನಿಸು
ದೇವ ನನ್ನೆಲ್ಲ ತಪ್ಪ

ಮೂಷಿಕ ವಾಹನನೇ
ಕೊಡದಿರು ದರ್ಪ
ನನ್ನಿಂದ ದೂರಾಗಲಿ
ಎಲ್ಲ ಕೋಪ, ತಾಪ

ಧರ್ಮ, ಧರ್ಮಗಳ
ಕದನ ನಿಲ್ಲಿಸಪ್ಪ
ಏಕತೆ, ಸಹೋದರತೆ
ಚಿರವಾಗಲಿ ಗಣಪ

ಪರಿಸರ ಉಳಿವಿಗಾಗಿ
ಹಾರೈಸು ಅಪ್ಪ
ಸಂಭ್ರಮದಿ ಸ್ಮರಿಸುವೆ
ಓಂ ಶ್ರೀ ಗಣತಿಬಪ್ಪ

• ಮೌಲಾಲಿ ಕೆ. ಆಲಗೂರ ಬೋರಗಿ

ದಿನಕ್ಕೊಂದು ಮಾಹಿತಿ



ಬೆಂದಕಾಳೂರು

ಬೆಂಗಳೂರು ಎಂಬ ಹೆಸರು ಬೆಂದಕಾಳು ಅಂದರೆ ಬೇಯಿಸಿದ ಕಾಳು ಎಂಬ ಕನ್ನಡ ಪದದಿಂದ ಬಂದಿದೆ ಎಂದು ಮಾಹಿತಿಗಳು ತಿಳಿಸುತ್ತವೆ. ದಂತಕಥೆಯ ಪ್ರಕಾರ, ವಿಜಯನಗರ ಸಾಮ್ರಾಜ್ಯದ ರಾಜ ವೀರಬಲ್ಲಾಳನು ಬೇಟೆಯಾಡಲು ತೆರಳಿದ್ದಾಗ, ದಾರಿ ತಪ್ಪುತ್ತಾನೆ. ಹಸಿದಿದ್ದ ಆತನಿಗೆ ಮಹಿಳೆಯೊಬ್ಬಳು ಬೇಯಿಸಿದ ಕಾಳುಗಳನ್ನು ತಿನ್ನಲು ನೀಡಿದಳು. ಆ ಖಾದ್ಯವನ್ನು ಆನಂದಿಸಿದ ರಾಜನು ಅದರ ಹೆಸರನ್ನು ಪಟ್ಟಣಕ್ಕೆ ಇಟ್ಟನು. ಈ ಕತೆ ಇಂದಿಗೂ ಬೆಂಗಳೂರಿನ ಜನರಲ್ಲಿ ಜನಪ್ರಿಯವಾಗಿದೆ.

ಪುಸ್ತಕ ಲೋಕ



ಚೌರ ಸುಖ

ಹಾಸ್ಯಪ್ರಬಂಧ ಲೇಖಕ ಗುಂಡೂರಾವ್ ಅವರು ಬರೆದಿರುವ ಕೃತಿ 'ಚೌರ ಸುಖ'. ಬ್ರಾಹ್ಮಣನೊಬ್ಬ ಅನಿವಾರ್ಯವಾಗಿ ಕ್ಷೌರಿಕ ವೃತ್ತಿ ಮಾಡಿದ ಪ್ರಸಂಗ ರಸವತ್ತಾಗಿ ಮೂಡಿ ಬಂದಿದೆ. ಇದರಲ್ಲಿರುವ ಪ್ರತಿ ಪ್ರಬಂಧ ಮುಖದ ನೆರಿಗೆಗಳನ್ನು ಸಡಿಲಗೊಳಿಸಿ ನಗೆ ಅರಳಿಸುವಷ್ಟು ಸಮರ್ಥವಾಗಿದೆ. ಹಾಸ್ಯ ಸುಖ ಮಾತ್ರವಲ್ಲ ಕ್ಷೌರದ ಹಿಂದಿನ ಸಾಮಾಜಿಕ, ಆರ್ಥಿಕ ಚಿತ್ರಣಗಳೂ ಪ್ರಬಂಧಗಳಲ್ಲಿ ಬಿಂಬಿತವಾಗಿವೆ. ಲೇಖಕರಿಗೆ ತಾವು ದೊಡ್ಡವರಾದ ಮೇಲೆ ಕ್ಷೌರಿಕನಾಗುವ ಹಂಬಲ. ಏಕೆಂದರೆ, ಕ್ಷೌರದ ಸಂದರ್ಭದಲ್ಲಿ ತಾವು ಅನುಭವಿಸಿದ್ದ ಹಿಂಸೆಯನ್ನು ಇನ್ನೊಬ್ಬರಿಗೆ ದಾಟಿಸುವ ಉದಾತ್ತ ಲೆಕ್ಕಾಚಾರ, ಈ ಪ್ರಬಂಧ ಸಂಕಲನದಲ್ಲಿ 33 ವಿಶೇಷ ಲೇಖನಗಳಿವೆ.

ಟ್ವೀಟ್‌ಮೆಂಟ್

ರೊಮಾನಾ ಅಮೀರ್: ೨೦೦೦



ವಿಶ್ವವಾಣಿ

ನಮ್ಮ ಗಣಪ

ವಿನಾಯಕ ಚೌತಿಯಂದು ಚಿಣ್ಣರ ಪಾಲಿಗೆ ಪ್ರಿಯನಾದ ಗಣೇಶ ಚಿತ್ರ ಬಿಡಿಸಿ ವಾಟ್ಸ್ ಆ್ಯಪ್ ಮಾಡಿ ಎಂಬ ವಿಶ್ವವಾಣಿ ಕರೆಗೆ ಸಾವಿರಾರು ಮಕ್ಕಳು ಸ್ಪಂದಿಸಿದ್ದಾರೆ. ಪೆನ್ಸಿಲ್ ಸ್ಕೆಚ್, ಬಣ್ಣದ ಚಿತ್ರ ಸೇರಿ ನಾನಾ ಬಗೆಯ ಚಿತ್ರಗಳು ಮಕ್ಕಳ ಕೈಯಲ್ಲಿ ಅರಳಿದ್ದು, ಕೆಲವೊಂದು ಚಿತ್ರಗಳು ನುರಿತ ಕಲಾವಿದರ ಚಿತ್ರಗಳಂತೆ ಮನಮೋಹಕವಾಗಿವೆ. ಗಣಪನ ಹಬ್ಬದಲ್ಲಿ ಪಾಲ್ಗೊಂಡು ಚಿತ್ರಗಳನ್ನು ಕಳುಹಿಸಿಕೊಟ್ಟ ಎಲ್ಲ ವಿದ್ಯಾರ್ಥಿಗಳಿಗೆ, ಅವರನ್ನು ಪ್ರೋತ್ಸಾಹಿಸಿದ ಪೋಷಕರಿಗೆ ಹಬ್ಬದ ಶುಭಾಶಯಗಳು. ಮಕ್ಕಳ ಆಯ್ದ ಚಿತ್ರಗಳನ್ನು ಇಲ್ಲಿ ಪ್ರಕಟಿಸಿದ್ದೇವೆ. ಇನ್ನಷ್ಟು ಚಿತ್ರಗಳು ಮಂಗಳವಾರ ಇ-ಪೇಪರ್‌ನಲ್ಲಿ ಪ್ರಕಟವಾಗಲಿದೆ.

ಕೃತಿ ಡಿ.
2ನೇ ತರಗತಿ
ಪೂರ್ಣ ಚೇತನ ಪಬ್ಲಿಕ್ ಶಾಲೆ,
ಮೈಸೂರು

ರಜಿನಿ ಯು.ಎಸ್.
7 ನೇ ತರಗತಿ, ಶ್ರೀ ರಾಜೇಶ್ವರಿ
ವಿದ್ಯಾಶಾಲಾ,
ಬೆಂಗಳೂರು

ಲಕ್ಷ್ಮೀ ಚಂದ್ರಶೇಖರ್ ಗದಗಿನ
ಲೊಯೋಲಾ ಕಾನ್ವೆಂಟ್ ಸ್ಕೂಲ್ ಬೆಟಗೇರಿ
ಗದಗ

ಕರಣ್ ದೇಸಾಯಿ
4ನೇ ತರಗತಿ
ಬಾಲ್ಡ್‌ವಿನ್ ಸ್ಕೂಲ್
ಬೆಂಗಳೂರು



ನಿತ್ಯ ಮಾಧವ್ ಎಚ್. ಆರ್.
8ನೇ ತರಗತಿ
ಗ್ರೀನ್‌ವುಡ್ ಇಂಗ್ಲಿಷ್ ಸ್ಕೂಲ್,
ಹೊಳೆನರಸೀಪುರ

ಶ್ರೀನವ್ಯಾ ನಾಗರಾಜ ರಾವ್
1ನೇ ತರಗತಿ
ವಿದ್ಯಾ ಪ್ರೀ ಪ್ರೈಮರಿ ಸ್ಕೂಲ್, ಮಂಗಳೂರು

ಮನ್ವಿತ್ ಪಿ. ಪಟ್ಟಣಕರ್
2ನೇ ತರಗತಿ
ಅಪ್ಪ ಪಬ್ಲಿಕ್ ಶಾಲೆ , ಕಲ್ಬುರ್ಗಿ

ತನುಶ್ರೀ ಎಂ. ಯಂಡಿಗೇರಿ
4ನೇ ತರಗತಿ
ರಾಠಿ ಮತ್ತು ಕಾವಡೆ ಪ್ರೈಮರಿ ಸ್ಕೂಲ್,
ಗುಳೇದ್‌ಗುಡ್ಡ



ಸುಧನ್ವ ರಾವ್
ಏಳನೇ ತರಗತಿ
ಇಂಡಿಯನ್ ಪಬ್ಲಿಕ್ ಸ್ಕೂಲ್
ದುಬೈ



ರಾಕೇಶ್ ವಿ. ನಾಯಕ್
7ನೇ ತರಗತಿ
ಸ.ಹಿ.ಪ್ರಾ ಶಾಲೆ
ದೊಡ್ಡನಲ್ಲೂರಹಳ್ಳಿ

ಎನ್.ಆರ್. ಮಾನ್ವಿ
7ನೇ ತರಗತಿ, ನ್ಯೂ ಪುಣೆ,
ಪಬ್ಲಿಕ್ ಸ್ಕೂಲ್,
ಪುಣೆ, ಮಹಾರಾಷ್ಟ್ರ.

ಶ್ರೀನಿಕಾ ಬಿ.
1ನೇ ತರಗತಿ, ಇಂಟರ್ ಆ್ಯಕ್ಟಿವ್ ಪ್ರೀ ಆ್ಯಂಡ್
ಪ್ರೈಮರಿ ಸ್ಕೂಲ್, ಬನಶಂಕರಿ, ಬೆಂಗಳೂರು.



ಚೆಲುವ ರಾಯ್ ವಿ.
8ನೇ ತರಗತಿ, ವಿದ್ಯಾ ಸಂಸ್ಕಾರ
ಇಂಟರ್‌ನ್ಯಾಶನಲ್ ಪಬ್ಲಿಕ್ ಸ್ಕೂಲ್



ದ್ರುಶಿಲ್ ಎಮ್.ಎಮ್.
3ನೇ ತರಗತಿ
ಬಿ ಜಿ ಎಸ್ ವರ್ಲ್ಡ್ ಸ್ಕೂಲ್, ಚಿಕ್ಕಬಳ್ಳಾಪುರ



ಮಹಾದೇವ್ ಹೂಗಾರ್
3ನೇ ತರಗತಿ,
ಬಸವೇಶ್ವರ ಇಂಟರ್ ನ್ಯಾಶನಲ್
ಪಬ್ಲಿಕ್ ಸ್ಕೂಲ್, ಬಾಗಲಕೋಟೆ

ಆಕಾಶ್ ಅಪ್ಪಾರಾಯ
8ನೇ ತರಗತಿ,
ಮಾತೋಶ್ರೀ ಅಂಬವ್ವ

ಸ್ಫೂರ್ತಿ ಎಸ್ ಕಂಬಾರ
6ನೇ ತರಗತಿ,
ಶ್ರೀ ಭಾರತಿ ವಿದ್ಯಾಲಯ



ಹರ್ಷಿತಾ ಐ.ಎನ್.
7ನೇ ತರಗತಿ,
ಲಯನ್ಸ್ ಅಕಾಡೆಮಿ ಸ್ಕೂಲ್,
ಸರಗೂರು



ವಿಶ್ವಾಸ್ ರಾಜ್
7ನೇ ತರಗತಿ
ವಾಗ್ದೇವಿ ವಿಲಾಸ್ ಸ್ಕೂಲ್

ಸೃಷ್ಟಿ ಸಿದ್ದಪ್ಪ
5ನೇ ತರಗತಿ
ಬ್ಲೂಬೆಲ್ ಪಬ್ಲಿಕ್ ಸ್ಕೂಲ್,
ಬೆಂಗಳೂರು

ಪೃಥ್ವಿರಾಜ್ ಸಿ.ಎನ್.
2ನೇ ತರಗತಿ
ಪರಿವರ್ತನ ಶಾಲೆ,
ಹರಪ್ಪನಹಳ್ಳಿ

ಅಂಜಲಿ
ವಿಶ್ವೇಶ್ವರಯ್ಯ ಕನ್ನಡ ಹಿರಿಯ
ಪ್ರಾಥಮಿಕ ಶಾಲೆ
ಆಳಂದ

ಮನಸ್ವಿ ಆರ್.
6ನೇ ತರಗತಿ
ಚಿನ್ಮಯ ವಿದ್ಯಾಲಯ ,
ಬೆಂಗಳೂರು



ವೈಷ್ಣವಿ
8ನೇ ತರಗತಿ
ಸಿದ್ದಶ್ರೀ ಕನ್ನಡ ಮತ್ತು ಆಂಗ್ಲ
ಮಾಧ್ಯಮ ಶಾಲೆ, ಕಲಬುರಗಿ

ಸಾನ್ವಿ ಯರಗೊಪ್ಪ
6 ನೇ ತರಗತಿ, ವಿ.ಎಸ್. ಪಿಳ್ಳೆ
ಇಂಗ್ಲಿಷ್ ಮೀಡಿಯಂ ಸ್ಕೂಲ್
ಹುಬ್ಬಳ್ಳಿ

ಸಾಗನ್ ಎಸ್. ಹೆಗಡೆ
8ನೇ ತರಗತಿ,
ಗ್ರೀನ್ ಪಾರ್ಕ್ ಸ್ಕೂಲ್, ಹಿರಿಯಡ್ಕ,
ಉಡುಪಿ



ಚಾರ್ವಿ ಮೋಹನ್
8ನೇ ತರಗತಿ,
ವಾಣಿ ಇಂಗ್ಲಿಷ್ ಮೀಡಿಯಂ ಸ್ಕೂಲ್,
ಹಳೆಕೋಟೆ, ಬೆಳ್ತಂಗಡಿ.



ಸಾಕ್ಷಿ ಜಿ.ಕೆ.
3ನೇ ತರಗತಿ, ವಿದ್ಯಾರಶ್ಮಿ ವಿದ್ಯಾಲಯ,
ಸವಣೂರು, ಕಡಬ



ನಿಹಾಲ್ ಎಸ್.
4ನೇ ತರಗತಿ,
ಜಿಕೆಬಿಎಂಎಸ್ ಸ್ಕೂಲ್



ಬಿಂದು ಮಾ. ಕೋಟಿ
ಬಾಸೆಲ್ ಮಿಶನ್ ಸ್ಕೂಲ್,
ಹುಬ್ಬಳ್ಳಿ